ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 8 ಸೋಮವಾರ 2022

ಸಂಪುಟ: 43 | ಸಂಚಿಕೆ: 114 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕೆಆರ್‌ಎಸ್‌ನಿಂದ ಲಕ್ಷ ಕ್ಯೂಸೆಕ್ ನೀರು ಬಿಡುಗಡೆ

● ಪ್ರವಾಹ ಭೀತಿ; ಕಟ್ಟೆಚ್ಚರದಿಂದಿರಲು ತಗ್ಗು ಪ್ರದೇಶದ ಜನರಿಗೆ ಸೂಚನೆ ● ಪ್ರವಾಸಿ ತಾಣಗಳಿಗೆ ಪ್ರವೇಶ ನಿರ್ಬಂಧ

ಶ್ರೀರಂಗಪಟ್ಟಣ,ಆ.7–ಕೊಡಗು ಸೇರಿದಂತೆ ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ಕಳೆದೊಂದು ವಾರದಿಂದ ಭಾರೀ ಮಳೆಯಾಗುತ್ತಿರುವ ಪರಿಣಾಮ ತಾಲೂಕಿನ ಕೃಷ್ಣರಾಜ ಸಾಗರ ಜಲಾಶಯದ ಒಳಹರಿವು ಹೆಚ್ಚಳವಾಗಿದ್ದು, ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಲಕ್ಷ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

ಪ್ರಸಕ್ತ ಅಣೆಕಟ್ಟೆಯಲ್ಲಿ 123.55 (ಗರಿಷ್ಠ 124.80) ಅಡಿ ನೀರು ಸಂಗ್ರಹವಿದ್ದು, 91,637 ಕ್ಯೂಸೆಕ್ ನೀರು ಅಣೆಕಟ್ಟೆಗೆ ಹರಿದು ಬರುತ್ತಿದ್ದು, ಹೊರಹರಿವು ಹೆಚ್ಚಳವಾಗಿದೆ. ಈ ಹಿನ್ನೆಲೆಯಲ್ಲಿ ಜಲಾಶಯದ ತಗ್ಗು ಪ್ರದೇಶದಲ್ಲಿ ಪ್ರವಾಹದ ಭೀತಿ ನಿರ್ಮಾಣವಾಗಿದೆ. ಜಲಾಶಯದ ಒಳಹರಿವು ಹೆಚ್ಚಳವಾಗಿರುವ ಪರಿಣಾಮ ನಾಲ್ಕೈದು ದಿನಗಳಿಂದ ಜಲಾಶಯದ ಹೊರಹರಿವಿನ ಪ್ರಮಾಣವನ್ನು ಹಂತ–ಹಂತವಾಗಿ ಹೆಚ್ಚಿಸಲಾಗುತ್ತಿದ್ದು, ಭಾನುವಾರ ಸಂಜೆ ಜಲಾಶಯದಿಂದ 1,00,719 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ ಎಂದು ಜಲಾಶಯದ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ತಿಳಿಸಿದ್ದಾರೆ.

ಪ್ರವೇಶಕ್ಕೆ ನಿರ್ಬಂಧ: ನದಿಯಲ್ಲಿ ನೀರಿನ ಸೆಳೆತ ಹೆಚ್ಚಾಗಿರುವುದರಿಂದ ಮುಂಜಾಗ್ರತೆ ಕ್ರಮವಾಗಿ ತಾಲೂಕಿನ ಬಲಮುರಿ, ಎಡಮುರಿ, ರಂಗನತಿಟ್ಟು ಪಕ್ಷಿಧಾಮ, ಪಶ್ಚಿಮ ವಾಹಿನಿ, ಸ್ನಾನಘಟ್ಟ, ವೆಲ್ಲೆಸ್ಲಿ ಸೇತುವೆ, ಗಂಜಾಂನ ನಿಮಿಷಾಂಬ, ಸಂಗಮ್, ಗೋಸಾಯಿ ಘಾಟ್ ಸೇರಿದಂತೆ ನದಿಯಂಚಿನ ಪ್ರವಾಸಿ ಸ್ಥಳಗಳಿಗೆ ಸಾರ್ವಜನಿಕರು ಹಾಗೂ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಿ ತಾಲೂಕು ಆಡಳಿತ ಆದೇಶ ಹೊರಡಿಸಿದೆ. ಪೊಲೀಸ್ ಇಲಾಖೆಯಿಂದ ಬ್ಯಾರಿಕೇಡ್ ಹಾಕಿ ಕಟ್ಟೆಚ್ಚರ ವಹಿಸಲಾಗಿದೆ.

ರಂಗನತಿಟ್ಟು ಭಾಗಶಃ ಮುಳುಗಡೆ: ರಂಗನತಿಟ್ಟು ಪಕ್ಷಿಧಾಮದ ನಡುಗಡ್ಡೆಗಳು ಭಾಗಶಃ ಮುಳುಗಡೆಯಾಗಿವೆ. ಜೊತೆಗೆ ಪ್ರವಾಸಿಗರ ಹಿತದೃಷ್ಟಿಯಿಂದ ಪಕ್ಷಿಧಾಮದಲ್ಲಿ ಹಲವು ದಿನಗಳಿಂದ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ಭಾನುವಾರ ಅಧಿಕ ನೀರು ಹರಿದು ಬಂದ ಪರಿಣಾಮ ವಿಹಾರ ಟಿಕೆಟ್ ಕೌಂಟರ್ ಹಾಗೂ ಕಚೇರಿಗಳು ನೀರಿನಿಂದ ಜಲಾವೃತಗೊಂಡಿವೆ. ಪಕ್ಷಿಧಾಮ ಮುಳುಗಡೆಯಿಂದಾಗಿ ಸಣ್ಣ ಪುಟ್ಟ ಪಕ್ಷಿಗಳು ಹಾಗೂ ಗೂಡುಗಳು ಹಾನಿಯಾಗಿದ್ದು, ಇದರ ಕೂಗಳತೆ ದೂರದಲ್ಲಿನ ನೂರಾರು ಗೂಳಿಗಳು ವಾಸಿಸುತ್ತಿರುವ ಗೂಳಿತಿಟ್ಟು ಸಹ ಮುಳುಗುವ ಭೀತಿ ಎದುರಾಗಿದೆ.

ಮುಳುಗಡೆಯತ್ತ ವೆಲ್ಲೆಸ್ಲಿ ಸೇತುವೆ: ಪಟ್ಟಣದ ಐತಿಹಾಸಿಕ ವೆಲ್ಲೆಸ್ಲಿ ಸೇತುವೆ ಮುಳುಗಡೆ ಹಂತಕ್ಕೆ ತಲುಪುತ್ತಿದ್ದು, ಸದ್ಯ ಸೇತುವೆ ತಳಭಾಗದವರೆವಿಗೂ ನೀರು ಚಾಚಿಕೊಂಡು ಹರಿಯುತ್ತಿದೆ. ಮತ್ತಷ್ಟು ನೀರಿನ ಪ್ರಮಾಣ ಹೆಚ್ಚಾದಲ್ಲಿ ಸೇತುವೆ ಮುಳುಗಡೆಯಾಗುವ ಸಾಧ್ಯತೆ ಹೆಚ್ಚಾಗಿದೆ. ಬೆಂಗಳೂರು–ಮೈಸೂರು ಹೆದ್ದಾರಿ ಸೇತುವೆ ಮೇಲೆ ನೂರಾರು ಮಂದಿ ಪ್ರಯಾಣಿಕರು ಹೆದ್ದಾರಿಯಲ್ಲೇ ತಮ್ಮ ವಾಹನಗಳನ್ನು ನಿಲ್ಲಿಸಿ, ಹರಿಯುತ್ತಿರುವ ನೀರಿನೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಮುಗಿ ಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಇದರಿಂದ ಹೆದ್ದಾರಿಯಲ್ಲಿ ವಾಹನಗಳು ಸುಗಮವಾಗಿ ಸಂಚರಿಸಲು ತೊಂದರೆಯಾಗುವ ಜೊತೆಗೆ ಸೇತುವೆ ಮೇಲಿಂದ ಯಾರಾದರೂ ಆಯತಪ್ಪಿ ಬೀಳುವ ಸಂಬಂಧ ಹೆಚ್ಚಾಗಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಅವರನ್ನು ಚದುರಿಸಿದ ಘಟನೆ ನಡೆಯಿತು.

ಅಯೋಧ್ಯೆಯಲ್ಲಿ ಅಕ್ರಮ ನಿವೇಶನ ಮಾರಾಟ

ಬಿಜೆಪಿ ಶಾಸಕ ಸೇರಿದಂತೆ 40 ಮಂದಿ ಹೆಸರು ಪ್ರಕಟ

ಅಯೋಧ್ಯೆ, ಆ.7– ಅಯೋಧ್ಯೆಯ ಮೇಯರ್, ಸ್ಥಳೀಯ ಬಿಜೆಪಿ ಶಾಸಕ ಮತ್ತು ಬಿಜೆಪಿ ಪಕ್ಷದ ಮಾಜಿ ಶಾಸಕ ಸೇರಿದಂತೆ 40 ಜನರು ಅಯೋಧ್ಯೆಯಲ್ಲಿ ನಿವೇಶನಗಳನ್ನು ಅಕ್ರಮವಾಗಿ ಮಾರಾಟ ಮಾಡಿದ್ದು, ಅಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿದ್ದಾರೆ ಎಂದು ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ ಆರೋಪಿಸಿದೆ. ಪ್ರಾಧಿಕಾರ ಪ್ರದೇಶದಲ್ಲಿ ಅಕ್ರಮವಾಗಿ ಭೂಮಿ ಖರೀದಿಸಿ ಮಾರಾಟ ಮಾಡಿದ ಹಾಗೂ ನಿರ್ಮಾಣ ಕಾಮಗಾರಿ ▶ 8ನೇ ಪುಟಕ್ಕೆ

ಗಜಪಯಣಕ್ಕೆ ಸಂಭ್ರಮದ ಚಾಲನೆ

● ವೀರನಹೊಸಳ್ಳಿಯಲ್ಲಿ ಹಬ್ಬದ ವಾತಾವರಣ
● ಮೈಸೂರು ತಲುಪಿದ ಅಭಿಮನ್ಯು ಗಜ ಪಡೆ

ಮೈಸೂರು,ಆ.7(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯ ಮೊದಲ ತಂಡದಲ್ಲಿ ಒಭತ್ತು ಆನೆಗಳ ಗಜಪಯಣಕ್ಕೆ ಭಾನುವಾರ ಬೆಳಗ್ಗೆ ಮಳೆಯ ನಡುವೆ ಹುಣಸೂರು ತಾಲೂಕಿನ ಕಾಡಂಚಿನ ಗ್ರಾಮ ವೀರನಹೊಸಳ್ಳಿ ಗೇಟ್ ಬಳಿ ಸಂಭ್ರಮದಿಂದ ಚಾಲನೆ ನೀಡಲಾಯಿತು.

ಮೈಸೂರು ಜಿಲ್ಲಾಡಳಿತ, ಅರಣ್ಯ ಇಲಾಖೆ ವತಿಯಿಂದ ನಾಗರಹೊಳೆಯ ಅಭಯಾರಣ್ಯದ ವೀರನಹೊಸಳ್ಳಿ ಗೇಟ್ ಬಳಿ ಆಯೋಜಿಸಿದ್ದ ಗಜಪಯಣ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಎಸ್.ಟಿ.ಸೋಮಶೇಖರ್ ಹಾಗೂ ಅರಣ್ಯ ಸಚಿವ ಉಮೇಶ್ ಕತ್ತಿ ದಸರಾ ಗಜಪಡೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಇದರಿಂದಾಗಿ ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಚಟುವಟಿಕೆ ಗರಿಗೆದರಿದಂತಾಗಿದೆ.

ಕನ್ಯಾ ಲಗ್ನದಲ್ಲಿ ಪೂಜೆ: ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಆನೆಗಳಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಮೊದಲ ತಂಡದಲ್ಲಿ ಮೈಸೂರಿಗೆ ಕರೆತರಲು ಉದ್ದೇಶಿಸಲಾಗಿದ್ದ, 9 ಆನೆಗಳಿಗೂ ಇಂದು ಬೆಳಗ್ಗೆ 9.01ರಿಂದ 9.35ರವರೆಗೆ ಸಂದ ಶುಭ ಕನ್ಯಾ ಲಗ್ನದಲ್ಲಿ ಪಾದ ಪೂಜೆ ಮಾಡಿ, ಪುಷ್ಪಾರ್ಚನೆ ಮಾಡುವ ಮೂಲಕ ಗಜಪಯಣಕ್ಕೆ ಚಾಲನೆ ನೀಡಲಾಯಿತು. ಕಳೆದ 25 ವರ್ಷಗಳಿಂದ ದಸರಾ ಉತ್ಸವದ ಆನೆಗಳಿಗೆ ಪೂಜೆ ಸಲ್ಲಿಸುತ್ತಿರುವ ಅರ್ಚಕ ಮೈಸೂರಿನ ಎಸ್.ವಿ.ಪ್ರಹ್ಲಾದ್‌ರಾವ್ ಆನೆಗಳಿಗೆ ಪಾದ ತೊಳೆದು, ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿದರು. ಬಳಿಕ ಶೋಡಷೋಪಚಾರ ಪೂಜೆ, ಗಣಪತಿ ಹೋಮ ಸೇರಿದಂತೆ ವಿವಿಧ ಪೂಜೆ ನೆರವೇರಿಸಿದರು. ಬಳಿಕ ಗರಿಕೆ, ಬೆಲ್ಲ, ಕಬ್ಬು, ಮೋದಕ, ಕಡುಬು, ಪಂಚಕಜ್ಜಾಯ, ▶ 6ನೇ ಪುಟಕ್ಕೆ



ವೀರನಹೊಸಳ್ಳಿಯಲ್ಲಿ ಗಜಪಯಣಕ್ಕೆ ಅರಣ್ಯ ಸಚಿವ ಉಮೇಶ್ ಕತ್ತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭಾನುವಾರ ಚಾಲನೆ ನೀಡಿದರು.

‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ-20 ಪಂದ್ಯಾವಳಿಗೆ ವರ್ಣರಂಜಿತ ಚಾಲನೆ



ಭಾನುವಾರ ಆರಂಭವಾದ ‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿಗೆ ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು.

ಮೈಸೂರು, ಆ.7(ಎಂಕೆ)– ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಮೈದಾನದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಆಯೋಜಿಸಿರುವ ‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಪಂದ್ಯಾವಳಿಗೆ ಭಾನುವಾರ ವರ್ಣರಂಜಿತ ಚಾಲನೆ ದೊರೆಯಿತು.

ಆಟಗಾರರಿಗೆ ಶುಭ ಕೋರಿದ ಪ್ರಮೋದಾದೇವಿ ಒಡೆಯರ್

ಮೈಸೂರು ವಾರಿಯರ್ಸ್, ಮಂಗಳೂರು ಯುನೈಟೆಡ್ ಶುಭಾರಂಭ {ಪುಟ–10}

ಮೂರು ವರ್ಷಗಳ ಬಳಿಕ ಹೆಸರು ಬದಲಾವಣೆಯೊಂದಿಗೆ ಆರಂಭಗೊಂಡ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದ ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್, ಹುಬ್ಬಳ್ಳಿ ಟೈಗರ್ಸ್ ನಾಯಕ ಅಭಿಮನ್ಯು ಮಿಥುನ್, ಮಂಗಳೂರು ಯುನೈಟೆಡ್ ನಾಯಕ ಆರ್.ಸಮರ್ಥ್, ▶ 8ನೇ ಪುಟಕ್ಕೆ

ಕಾಮನ್‌ವೆಲ್ತ್ ಗೇಮ್ಸ್ 2022

ಮುಂದುವರೆದ ಭಾರತೀಯ ಅಥ್ಲೀಟ್‌ಗಳ ಪದಕ ಬೇಟೆ


ಬರ್ಮಿಂಗ್‌ಹ್ಯಾಮ್,ಆ.7–ಕಾಮನ್‌ವೆಲ್ತ್ ಗೇಮ್ಸ್ 2022ರಲ್ಲಿ ಭಾರತೀಯ ಕ್ರೀಡಾಪಟುಗಳ ಪದಕ ಬೇಟೆ ಮುಂದುವರೆದಿದ್ದು, ಭಾರತದ ತೆಕ್ಕೆಗೆ ಮತ್ತೆ 5 ಪದಕಗಳು ಸೇರಿಕೊಂಡಿವೆ. ಭಾನುವಾರ ಬಾಕ್ಸಿಂಗ್‌ನಲ್ಲಿ 3 ಚಿನ್ನದ ಪದಕ ಬಂದಿದೆ. ಬಾಕ್ಸರ್ ನಿತು ಘಂಘಾಸ್, ಅಮಿತ್ ಪಂಘಾಲ್ ಚಿನ್ನದ ಪದಕ ಗೆದ್ದಿದ್ದರೆ 16 ವರ್ಷಗಳ ಬಳಿಕ ಭಾರತೀಯ ಮಹಿಳಾ ಹಾಕಿ ತಂಡ ಕಂಚಿನ ಪದಕ, ಮಹಿಳಾ ಕ್ರಿಕೆಟ್ ತಂಡ ಬೆಳ್ಳಿ ಪದಕ ಗೆದ್ದಿವೆ. 48 ಕೆಜಿ ವಿಭಾಗದ ಮಹಿಳಾ ಬಾಕ್ಸಿಂಗ್‌ನಲ್ಲಿ ನಿತು ಘಂಘಾಸ್ ಇಂಗ್ಲೆಂಡ್‌ನ ಡೆಮಿ–ಜೇಡ್ ರೆಸ್ಟನ್‌ರನ್ನು ಸೋಲಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. 51 ಕೆಜಿ ವಿಭಾಗದ ಪುರುಷರ ಬಾಕ್ಸಿಂಗ್‌ನಲ್ಲಿ ಅಮಿತ್ ಪಂಘಾಲ್ ಇಂಗ್ಲೆಂಡ್ ತಂಡದ ▶ 8ನೇ ಪುಟಕ್ಕೆ

ಮತ್ತೆ ಐದು ಪದಕ

BIRMINGHAM 2022
commonwealth games

ಕೊಡಗಲ್ಲಿ ಭಾರೀ ಗಾಳಿಯೊಂದಿಗೆ ರಣಭೀಕರ ಮಳೆ





ಜನಜೀವನ ತತ್ತರ, ಮನೆಗಳಿಗೆ ಹಾನಿ, ಸೇತುವೆ ಮುಳುಗಡೆ


● ಜಿಲ್ಲಾದ್ಯಂತ ಹಲವೆಡೆ ರಸ್ತೆ ಸಂಚಾರ ಬಂದ್ ● ಮಡಿಕೇರಿ-ಚೆಟ್ಟಳ್ಳಿಯಲ್ಲಿ ಭೂ ಕುಸಿತ, ಮರಗಳು ಧರೆಗೆ ● ಪೊನ್ನಂಪೇಟೆ ತೋಟದಲ್ಲಿ ಜಲಸ್ಫೋಟ ● ಭಾರೀ ಪ್ರಮಾಣದಲ್ಲಿ ಬೆಳೆ ಹಾನಿ, ಅಪಾರ ನಷ್ಟ ● ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ, ಬೋಟ್‌ಗಳಲ್ಲಿ ಸಂಚಾರ

ಮಡಿಕೇರಿ,ಆ.7–ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಸಹಿತ ರಣಭೀಕರ ಮಳೆ ಸುರಿಯುತ್ತಿದ್ದು, ಪುಟ್ಟ ಜಿಲ್ಲೆ ತತ್ತರಿಸಿದೆ. ಮಳೆಯಿಂದಾಗಿ ಮನೆ ಹಾನಿ ಪ್ರಕರಣಗಳು ಘಟಿಸಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಭಾರೀ ಮಳೆಗೆ ನದಿಗಳಲ್ಲಿ ಪ್ರವಾಹ ಉಕ್ಕಿ ಹರಿದಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಎಡೆಬಿಡದೆ ಭಾರೀ ಮಳೆಯಾಗುತ್ತಿದ್ದು, ಕಳೆದ 24 ಗಂಟೆ ಅವಧಿಯಲ್ಲಿ ಭಾಗಮಂಡಲ ವ್ಯಾಪ್ತಿಯಲ್ಲಿ 146 ಮಿ.ಮೀ ಮಳೆಯಾಗಿದೆ. ಕಳೆದ 7 ದಿನಗಳಲ್ಲಿ ದಾಖಲೆಯ 726 ಮಿ.ಮೀ. ಮಳೆ ಸುರಿದಿದೆ. ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ವ್ಯಾಪ್ತಿಯಲ್ಲಿ 192 ಮಿ.ಮೀ. ಮಳೆ ಸುರಿದಿದೆ.

ರಸ್ತೆ ಬಂದ್: ಮೂರ್ನಾಡು–ನಾಪೋಕ್ಲು, ನಾಪೋಕ್ಲು–ಚೆರಿಯಪರಂಬು, ನಾಪೋಕ್ಲು–ಕೊಂಡಂಗೇರಿ ರಸ್ತೆಯಲ್ಲಿ ಕಾವೇರಿ ಪ್ರವಾಹದ ನೀರು ಹರಿಯುತ್ತಿದ್ದು, ರಸ್ತೆ ಸಂಚಾರ ಕಳೆದ 2 ದಿನಗಳಿಂದ ಬಂದ್ ಆಗಿದೆ. ನಾಪೋಕ್ಲು ಬೊಳಿ ಬಾಣೆಯಲ್ಲಿ ರಸ್ತೆಯ ಮೇಲೆ 6 ಅಡಿ ಅಧಿಕ ನೀರು ಹರಿಯುತ್ತಿದ್ದು, ಅಲ್ಲಿನ ನಿವಾಸಿಗಳು ರಸ್ತೆ ದಾಟಲು ತೆಪ್ಪಗಳ ಮೊರೆ ಹೋಗಿದ್ದಾರೆ. ಕಾವೇರಿ ನದಿಯಲ್ಲಿ ಪ್ರವಾಹ ಉಕ್ಕಿ ಹರಿದಿದ್ದು, ಭಗಂಡೇಶ್ವರ ದೇವಾಲಯದ ಆವರಣಕ್ಕೆ ಕಾವೇರಿ ನೀರು ಪ್ರವೇಶಿಸಿದೆ. ಭಾಗಮಂಡಲ ತ್ರಿವೇಣಿ ಸಂಗಮ ಕಳೆದ 3 ದಿನಗಳಿಂದ ಮುಳುಗಿದ ಸ್ಥಿತಿಯಲ್ಲಿದ್ದು, ▶ 8ನೇ ಪುಟಕ್ಕೆ





ರೈತನ ಮಗ ಉಪರಾಷ್ಟ್ರಪತಿಯಾಗಿದ್ದು ದೇಶಕ್ಕೆ ಹೆಮ್ಮೆಯ ಕ್ಷಣ: ಪ್ರಧಾನಿ ಮೋದಿ

ನವದೆಹಲಿ,ಆ.7–ನೂತನ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಭೇಟಿಯಾದ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ರೈತನ ಮಗ ಉಪ



ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವುದು ದೇಶಕ್ಕೆ ಹೆಮ್ಮೆಯ ಕ್ಷಣ ಎಂದು ಹೇಳಿದ್ದಾರೆ.

ಕಳೆದ ಆರು ಉಪರಾಷ್ಟ್ರಪತಿ ಚುನಾವಣೆಗಳಿಗೆ ಹೋಲಿಸಿದರೆ ಅತ್ಯಧಿಕ ಶೇ.74ರಷ್ಟು ಮತಗಳನ್ನು ಪಡೆದು ವಿಜಯಶಾಲಿಯಾದ ಧನಕರ್ ಅವರನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ನಿವಾಸದಲ್ಲಿ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಧನಕರ್ ಅವರಿಗೆ ಮತದಾನ ಮಾಡಿದ ಎಲ್ಲ ಸಂಸದರಿಗೂ ಮೋದಿ ಧನ್ಯವಾದ ಹೇಳಿದರು. 'ನಾವು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವಾಗ, ಅದ್ಭುತ ಕಾನೂನು ಜ್ಞಾನ ಮತ್ತು ಬುದ್ಧಿಜೀವಿಯಾಗಿರುವ ರೈತನ ಮಗನನ್ನು ದೇಶದ ಉಪ ರಾಷ್ಟ್ರಪತಿಯಾಗಿ ಆಯ್ಕೆ ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ಆ.21ಕ್ಕೆ ತ್ರಿಪುರ ಸುಂದರಿ ದೇವಾಲಯ ಅಭಿವೃದ್ಧಿ ಕಾರ್ಯಗಳ ಲೋಕಾರ್ಪಣೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗಿ

ಮೈಸೂರು,ಆ.7–ತಿ.ನರಸೀಪುರ ತಾಲೂಕು ಮೂಗೂರಿನಲ್ಲಿರುವ ಶ್ರೀ ತ್ರಿಪುರ ಸುಂದರಿ



ಅಮ್ಮನವರ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳನ್ನು ಆ.21ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು. ಡಿಸಿ ಕಚೇರಿಯಲ್ಲಿ ಈ ಸಂಬಂಧ ಪೂರ್ವಭಾವಿ ಸಭೆ ನಡೆಸಿದ ಅವರು, ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳು ಶೇ.99ರಷ್ಟು ಮುಗಿದಿದೆ. ಇನ್ನೊಂದು ವಾರದೊಳಗೆ ಸಂಪೂರ್ಣವಾಗಲಿದ್ದು, ಆ.21ಕ್ಕೆ ಸಿಎಂ ಲೋಕಾರ್ಪಣೆಗೊಳಿಸಲಿದ್ದಾರೆ. ದೇವಾಲಯದ ಕಳಸ ಪ್ರತಿಷ್ಠಾಪನೆ ಹಾಗೂ ಕುಂಬಾಭಿಷೇಕ ಸಿದ್ಧತೆಗೆ ಸೂಚಿಸಲಾಗಿದೆ. ಹೆಲಿಪ್ಯಾಡ್, ವೇದಿಕೆ ನಿರ್ಮಾಣ ಸೇರಿದಂತೆ ಅಂದಿನ ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ವ್ಯವಸ್ಥೆಗೆ ಸೂಚನೆ ನೀಡಲಾಗಿದೆ ಎಂದರು

ವರಮಹಾಲಕ್ಷ್ಮಿ ಹಬ್ಬದ ಫೋಟೋ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ಪತ್ರ ವಿತರಣೆ



ಮೈಸೂರು,ಆ.7(ಆರ್‌ಕೆಬಿ)–ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮೈಸೂರಿನ ಕರ್ನಾಟಕ ವಿಪ್ರ ವೇದಿಕೆ ಆಯೋಜಿಸಿದ್ದ ಮನೆ ಮನೆ ವರಮಹಾಲಕ್ಷ್ಮಿ ಫೋಟೋ ಸ್ಪರ್ಧೆಯಲ್ಲಿ ಮೈಸೂರಿನ ನಿವೇದಿತಾನಗರದ ಜೆ.ಎಸ್.ಮಂಜುಳಾ ರಾಜ್ (ಪ್ರಥಮ), ಗೋಕುಲಂನ ಎಂ.ವಿ.ಮಂಜರಿ (ದ್ವಿತೀಯ), ಅಗ್ರಹಾರ ರಾಮಾನುಜ ರಸ್ತೆಯ ಡಿ.ವಿ.ಶ್ರೀವಾಣಿ (ತೃತೀಯ), ಸುಬ್ಬರಾಯನಕೆರೆ ಕೊತ್ವಾಲ್ ರಾಮಯ್ಯ ರಸ್ತೆಯ ರಮ್ಯಾ ಸಂದೀಪ್ (ನಾಲ್ಕನೇ), ಕುವೆಂಪುನಗರದ ಎನ್.ಲೀಲಾವತಿ (ಐದನೇ) ಬಹುಮಾನ ಪಡೆದಿದ್ದಾರೆ.

ಫೋಟೋ ಸ್ಪರ್ಧೆಯಲ್ಲಿ 250 ಮಂದಿ ಭಾಗವಹಿಸಿದ್ದು, ಒಬ್ಬರಿಗಿಂತ ಮತ್ತೊಬ್ಬರು ಶ್ರೀ ವರಮಹಾಲಕ್ಷ್ಮಿಯನ್ನು ಅಂದವಾಗಿ, ಆಕರ್ಷಕವಾಗಿ ಅಲಂಕರಿಸಿದ್ದು ವಿಶೇಷವಾಗಿತ್ತು. ಎಲ್ಲಾ ವಿಜೇತರಿಗೂ ಕುವೆಂಪುನಗದ ನೃಪತುಂಗ ರಸ್ತೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿದ್ದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಮಾಜಿ ಅಧ್ಯಕ್ಷ ಡಾ.ವೈ ಡಿ ರಾಜಣ್ಣ, ವರಮಹಾಲಕ್ಷ್ಮಿ ಹಬ್ಬದಂತಹ ಧಾರ್ಮಿಕ ಆಚರಣೆಗಳು ಕುಟುಂಬದಲ್ಲಿ ಶಾಂತಿ ನೆಮ್ಮದಿ ನೆಲೆಸುವಂತೆ ಮಾಡುವ ಜೊತೆಗೆ ಮಕ್ಕಳಲ್ಲಿ ಸಂಸ್ಕಾರ ಬೆಳೆಸಿಕೊಳ್ಳಲು ಪ್ರೇರೇಪಣೆ ನೀಡುತ್ತವೆ ಎಂದರು.

ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್ ಮಾತನಾಡಿ, ಮಹಿಳೆಯರಲ್ಲಿ ಸಂಯಮ, ತಾಳ್ಮೆ, ಪ್ರೀತಿ ಮೂಲಕ ಸರಿದಾರಿಗೆ ತರುವಲ್ಲಿ ಸ್ತ್ರೀಯರು ಮಹತ್ವದ ಪಾತ್ರ ವಹಿಸುತ್ತಾರೆ. ಸಾತ್ವಿಕ ಮನೋಭಾವ ಹಾಗೂ ಮಾತೃತ್ವವನ್ನು ಪಾಲಿಸಿ ಸಾಧ್ವಿತನದ ಮೂಲಕ ಕುಟುಂಬದಲ್ಲಿನ ತಪ್ಪುಗಳನ್ನು ತಿದ್ದಿ ಜೀವನವನ್ನು ಸಾಕಾರಗೊಳಿಸಲು ಮಹಿಳೆಯರು ವಿಶೇಷ ಶಕ್ತಿ ಹೊಂದಿದ್ದಾರೆ ಎಂದರು.

ಒಕ್ಕಲಿಗರ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಕರ್ನಾಟಕ ವಿಪ್ರ ವೇದಿಕೆ ಅಧ್ಯಕ್ಷ ಅನಿಲ್‌ಕುಮಾರ್, ಕನ್ಯಕಾಪರಮೇಶ್ವರಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಚ್.ಎಂ.ಸಂದೀಪ್, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಮುಖಂಡರಾದ ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ಸ್ವಾತಿ ಇನ್ನಿತರರು ಉಪಸ್ಥಿತರಿದ್ದರು.

ಆ.14ರಂದು ಬೆಂಗಳೂರಲ್ಲಿ ದಸಂಸ ರಾಜ್ಯ ಸಮ್ಮೇಳನ, ನೂತನ ರಾಜಕೀಯ ಪಕ್ಷಕ್ಕೂ ಚಾಲನೆ



ಮೈಸೂರು, ಆ.7(ಆರ್‌ಕೆಬಿ)–ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮ್ಮೇಳನ ಮತ್ತು ನೂತನ ರಾಜಕೀಯ ಪಕ್ಷದ ಉದ್ಘಾಟನಾ ಸಮಾರಂಭ ಆ.14ರಂದು ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ಡಾ.ಎನ್.ಮೂರ್ತಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸಂಸ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಮತ್ತು ದೇಶದ ಎಸ್‌ಸಿ, ಎಸ್‌ಟಿ, ಓಬಿಸಿ ಹಾಗೂ ಧಾರ್ಮಿಕ ಅಲ್ಪಸಂಖ್ಯಾತ ಬಹುಜನರ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನ ಮತ್ತು ಸಮಾನತೆಗಾಗಿ ಹಲವಾರು ಗೊತ್ತುವಳಿಗಳನ್ನು ಅಂಗೀಕರಿಸಲಾಗುವುದು ಎಂದರು.

ಅಂದು ನೂತನ ರಾಜಕೀಯ ಪಕ್ಷದ ಹೆಸರು, ಚಿಹ್ನೆ, ಬಾವುಟವನ್ನು ಅಧಿಕೃತ ವಾಗಿ ಬಿಡುಗಡೆಗೊಳಿಸಲಾಗುತ್ತದೆ. ಈಗಾಗಲೇ ಚುನಾವಣಾ ಆಯೋಗದಿಂದ ನೋಂದಣಿಗೊಂಡ ರಾಷ್ಟ್ರೀಯ ಪಕ್ಷ ಇದಾಗಿದೆ. ಪ್ರಥಮ ಬಾರಿಗೆ ಸ್ವಾತಂತ್ರ್ಯ ನಂತರ ದಕ್ಷಿಣ ಭಾರತದ ಶೋಷಿತರ ನಾಯಕತ್ವದಲ್ಲಿ ಪಕ್ಷ ನೋಂದಣಿ ಆಗಿದೆ. ಪಕ್ಷ ರಚನೆ ಪೂರ್ವದಲ್ಲಿ ಕಳೆದ ಮೂರು ವರ್ಷಗಳಿಂದ ರಾಜ್ಯ ಸೇರಿದಂತೆ ದೇಶದ 15 ರಾಜ್ಯಗಳಿಗೂ ಹೆಚ್ಚು ಸಮಾನ ಮನಸ್ಕ ಸಂಘಟನೆಗಳು ಹಾಗೂ ಬುದ್ಧಿಜೀವಿಗಳೊಂದಿಗೆ ಚರ್ಚಿಸಿ, ಅಂತಿಮ ತೀರ್ಮಾನಕ್ಕೆ ಬರಲಾಗಿದೆ ಎಂದು ತಿಳಿಸಿದರು. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಕೋಮುವಾದಿಯಾಗಿದ್ದು, ಕಾಂಗ್ರೆಸ್ ಸಹ ಮೃದು ಕೋಮುವಾದ ಅನುಸರಿಸುತ್ತಿದೆ. ಇದೇ ರೀತಿ ಜೆಡಿಎಸ್ ಕೂಡ ಇದ್ದು, ಮೂರು ಪಕ್ಷಗಳು ದಲಿತರನ್ನು ಶೋಷಿಸುತ್ತಿವೆ. ಹೀಗಾಗಿ ಈಗ ರಾಜಕೀಯ ಪಕ್ಷ ಸ್ಥಾಪನೆ ಮಾಡಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಜೆ.ಲಿಂಗಯ್ಯ, ಕೆ.ಶಿವಯ್ಯ, ಬೈಲಹೊನ್ನಯ್ಯ, ಕೋದಂಡರಾಮು ಉಪಸ್ಥಿತರಿದ್ದರು.

ಸೋಮಸುಂದರ್ ದೀಕ್ಷಿತ್ ನಿಧನ



ಮೈಸೂರು,ಆ.7–ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಅವರ ಚಿಕ್ಕಪ್ಪ ದೇವಾಲಯದಲ್ಲಿ ವೇದಪರಾಯಣ ಕಾರ್ಯನಿರ್ವಹಿಸುತ್ತಿದ್ದ ಸೋಮಸುಂದರ್ ದೀಕ್ಷಿತ್(67) ಇಂದು ನಿಧನರಾದರು. ಚಾಮುಂಡಿಬೆಟ್ಟದಲ್ಲೇ ವಾಸವಿದ್ದ ಸೋಮಸುಂದರ್ ದೀಕ್ಷಿತ್ ಅವರು ಕಳೆದ 30 ವರ್ಷ ದೇವಾಲಯದಲ್ಲಿ ಋತ್ವಿಕರಾಗಿ ಸೇವೆ ಸಲ್ಲಿಸಿದ್ದರು. ಸಂಜೆ ಬೆಟ್ಟದ ದೇವಿಕೆರೆ ರಸ್ತೆಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು. ಮೃತರು ಪತ್ನಿ ಲಲಿತಾ, ಪುತ್ರ ಕೌಶಿಕ್ ದೀಕ್ಷಿತ್ ಸೇರಿದಂತೆ ಬಂಧು–ವರ್ಗ ಅಗಲಿದ್ದಾರೆ.

ತುರ್ತು ಸ್ಪಂದನೆ, ಸೂಕ್ತ ಆರೈಕೆಯಿಂದ ಅಪಘಾತಕ್ಕೀಡಾದವರ ಜೀವ ಉಳಿಸಬಹುದು

● ಪ್ರಥಮ ಚಿಕಿತ್ಸೆ-ಆರೈಕೆ ಕುರಿತ ತರಬೇತಿ ಶಿಬಿರ ಉದ್ಘಾಟಿಸಿ ಡಿಸಿಪಿ ಪ್ರದೀಪ್ ಗುಂಟಿ ಹಿತನುಡಿ ● ರಾಷ್ಟ್ರೀಯ ಮೂಳೆ-ಕೀಲು ದಿನಾಚರಣೆ ಪ್ರಯುಕ್ತ ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್‌ನಿಂದ ಆಯೋಜನೆ

ಮೈಸೂರು,ಆ.7(ಪಿಎಂ)– ಅಪಘಾತಕ್ಕೀಡಾದ ವ್ಯಕ್ತಿಯ ಪ್ರಥಮ ಸಂಪರ್ಕಕ್ಕೆ ಬರುವವರ ತುರ್ತು ಸ್ಪಂದನೆ, ಸೂಕ್ತ ಪ್ರಥಮ ಚಿಕಿತ್ಸೆಯು ಸದರಿ ವ್ಯಕ್ತಿಯ ಜೀವ ಉಳಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಅಪಘಾತಕ್ಕೀಡಾದ ಬಳಿಕದ 'ಗೋಲ್ಡನ್ ಅವಧಿ'ಯಲ್ಲಿ ಸೂಕ್ತ ಆರೈಕೆ ಮೂಲಕ ಒಂದು ಜೀವ ಉಳಿಸಬಹುದು ಎಂದು ಡಿಸಿಪಿ ಪ್ರದೀಪ್ ಗುಂಟಿ ಹೇಳಿದರು.

ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ವತಿಯಿಂದ ರಾಷ್ಟ್ರೀಯ ಮೂಳೆ ಮತ್ತು ಕೀಲು ದಿನಾಚರಣೆ ಅಂಗವಾಗಿ ಸಂಚಾರ ಪೊಲೀಸರು, ಶುಶ್ರೂಷಕರು ಹಾಗೂ ವಿವಿಧ ಕ್ಷೇತ್ರದ ನಾಗರಿಕರಿಗೆ ಹಮ್ಮಿಕೊಂಡಿದ್ದ ಪ್ರಥಮ ಚಿಕಿತ್ಸೆ–ಆರೈಕೆ ಕುರಿತ ತರಬೇತಿ ಶಿಬಿರ ಉದ್ಘಾಟಿಸಿ, ಮಾತನಾಡಿದರು.

ಅಪಘಾತಕ್ಕೀಡಾದ ವ್ಯಕ್ತಿಯ ಮೊದಲ ಸಂಪರ್ಕಕ್ಕೆ ಬರುವ ಪೊಲೀಸರು ಸೇರಿದಂತೆ ಸಾರ್ವಜನಿಕರು ಸದರಿ ವ್ಯಕ್ತಿಯ ಪ್ರಥಮ ಚಿಕಿತ್ಸೆಯನ್ನು ಯಾವ ರೀತಿ ಮಾಡಬೇಕೆಂದು ತಿಳಿಯುವುದು ಅಗತ್ಯ. ಇದರಿಂದ ಆತನ ಪ್ರಾಣ ಉಳಿಸಬಹುದು. ಈ ನಿಟ್ಟಿನಲ್ಲಿ ಇಂದಿನ ಕಾರ್ಯಕ್ರಮ ಪ್ರಯೋಜನಕಾರಿಯಾಗಿದೆ. ವ್ಯಕ್ತಿಯು ಅಪಘಾತಕ್ಕೀಡಾದ ಬಳಿಕದ ಗೋಲ್ಡನ್ ಅವರ್ ಎಂಬುದು ಆ ವ್ಯಕ್ತಿಯ ಜೀವ ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ಸಂದರ್ಭದಲ್ಲಿ ತುರ್ತು ಸ್ಪಂದನೆ ಮುಖ್ಯ. ಇದರ ಆಧಾರದಲ್ಲಿ ಪ್ರಾಣ ಉಳಿಯುತ್ತದೆ. ಅಪಘಾತ ನೋಡಿ ಗಾಬರಿಯಾಗದೆ ಅಪಘಾತಕ್ಕೀಡಾದ ವ್ಯಕ್ತಿಯ ಆರೈಕೆಗೆ ಧಾವಿಸಬೇಕು ಎಂದು ಹೇಳಿದರು.



ಮೈಸೂರಿನ ಜೆಕೆ ಮೈದಾನದ ಎಂಎಂಸಿ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಪ್ರಥಮ ಚಿಕಿತ್ಸೆ ಕುರಿತು ನಡೆದ ತರಬೇತಿ ಶಿಬಿರದಲ್ಲಿ ಡಿಸಿಪಿ ಪ್ರದೀಪ್ ಗುಂಟಿ ಮಾತನಾಡಿದರು.

ಅಪಘಾತ ಎಂದಾಕ್ಷಣ ನಾವು ಹೆಚ್ಚಾಗಿ ಮನುಷ್ಯರ ಬಗ್ಗೆಯೇ ಮಾತನಾಡುತ್ತೇವೆ. ಆದರೆ ಪ್ರಾಣಿ–ಪಕ್ಷಿಗಳ ಬಗ್ಗೆ ಆಲೋಚನೆ ಮಾಡುವುದು ತೀರಾ ಕಡಿಮೆ. ನಮಗೆ ಅಪಘಾತವಾದರೆ ಪ್ರಥಮ ಚಿಕಿತ್ಸೆಯಿಂದ ಹಿಡಿದು ಉನ್ನತ ಚಿಕಿತ್ಸೆವರೆಗೆ ಕ್ರಮ ವಹಿಸುತ್ತೇವೆ. ಮನುಷ್ಯರು ಮಾತ್ರವಲ್ಲ, ಪ್ರಾಣಿ–ಪಕ್ಷಿಗಳು ರಸ್ತೆಯಲ್ಲಿ ಅಪಘಾತಕ್ಕೀಡಾಗಿ ಸಾವನ್ನಪ್ಪುತ್ತಿವೆ. ಅದರಲ್ಲೂ ನಾಯಿ, ಬೆಕ್ಕು ಇಂತಹ ದುಸ್ಥಿತಿಗೆ ಸಿಲುಕುವುದು ಸಾಮಾನ್ಯವಾಗಿದೆ ಎಂದು ವಿಷಾದಿಸಿದರು.

ಜೀವ ಮನುಷ್ಯರದ್ದಾಗಲೀ, ಪ್ರಾಣಿ–ಪಕ್ಷಿಯದ್ದಾಗಲಿ ಅದು ಅಮೂಲ್ಯ, ಹಾಗಾಗಿ ವಾಹನ ಚಾಲನೆ ಮಾಡುವಾಗ ಹೆಚ್ಚು ಜಾಗರೂಕತೆಯಿಂದ ಸುರಕ್ಷತೆಗೆ ಆದ್ಯತೆ ನೀಡಬೇಕು. ಕೋವಿಡ್ ಸಂದರ್ಭದಲ್ಲಿ ಪೊಲೀಸರು ಮತ್ತು ವೈದ್ಯರು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿದ್ದೇವೆ. ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವಲ್ಲಿ ನಮ್ಮ ಪೊಲೀಸರ ಸಹಕಾರ ವೈದ್ಯರಿಗೆ ಇದ್ದೇ ಇರುತ್ತದೆ ಎಂದು ತಿಳಿಸಿದರು.

ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ಅಧ್ಯಕ್ಷ ನೀಲನಗೌಡ ವಿ.ಪಿ. ಪಾಟೀಲ್ ಮಾತನಾಡಿ, 2019ರಲ್ಲಿ ಸುಮಾರು ನಾಲ್ಕೂವರೆ ಲಕ್ಷ ಮಂದಿ ದೇಶದಲ್ಲಿ ಅಪಘಾತಕ್ಕೆ ತುತ್ತಾಗಿರುವುದು ವರದಿಯಾಗಿದೆ. ಇದರಲ್ಲಿ ಒಂದೂವರೆ ಲಕ್ಷ ಮಂದಿ ಸರಿಯಾದ ಪ್ರಥಮ ಚಿಕಿತ್ಸೆ ದೊರೆಯದೇ ಪ್ರಾಣ ಕಳೆದುಕೊಂಡಿದ್ದಾರೆ. ಸೂಕ್ತ ಪ್ರಥಮ ಚಿಕಿತ್ಸೆಯು ಸರಿಯಾದ ಸಮಯಕ್ಕೆ ದೊರೆಯಬೇಕು. ರಸ್ತೆ ಅಪಘಾತಕ್ಕೀಡಾದ ವ್ಯಕ್ತಿಯ ಪರಿಸರದಲ್ಲಿ ಇರುವವರು ಆ ವ್ಯಕ್ತಿಯ ಜೀವ ಹೇಗೆ ಉಳಿಸಬಹುದು ಎಂಬುದನ್ನು ತಿಳಿಸುವುದು ಈ ಶಿಬಿರದ ಉದ್ದೇಶವಾಗಿದೆ ಎಂದರು.

ನಿವೃತ್ತ ಸೇನಾಧಿಕಾರಿ ಮೇಜರ್ ಡಾ. ವೈ.ವಿ.ಅಭಿಜೀತ್ ಪ್ರಥಮ ಚಿಕಿತ್ಸೆ–ಆರೈಕೆ ಕುರಿತಂತೆ ಪಿಪಿಟಿ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಎನ್. ದಿನೇಶ್, ಪ್ರಾಂಶುಪಾಲರಾದ ಡಾ.ಕೆ.ಆರ್. ದಾಕ್ಷಾಯಿಣಿ, ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ಉಪಾಧ್ಯಕ್ಷ ಡಾ.ಕೆ. ರವೀಂದ್ರನಾಥ್, ಜಯಪ್ರಕಾಶನಗರದ ರೋಟರಿ ಅಧ್ಯಕ್ಷ ಮುಳ್ಳೂರು ನಂಜುಂಡಸ್ವಾಮಿ ಮತ್ತಿತರರು ಹಾಜರಿದ್ದರು.

ಪ್ರಾಣಿ–ಪಕ್ಷಿಗಳ ಪ್ರಾಣಕ್ಕೂ ಮನುಷ್ಯನಷ್ಟೇ ಆದ್ಯತೆ ನೀಡೋಣ

ಮೈಸೂರು,ಆ.7(ಪಿಎಂ)– ವಾಹನ ಚಾಲನೆ ಸಂದರ್ಭದಲ್ಲಿ ಒಬ್ಬ ಮನುಷ್ಯನ ಪ್ರಾಣಕ್ಕೆ ಕೊಡುವಷ್ಟೇ ಬೆಲೆ, ಪ್ರಾಣಿ–ಪಕ್ಷಿಗಳ ವಿಚಾರದಲ್ಲೂ ಇರಲಿ ಎಂದು ಸಲಹೆ ನೀಡಿದ ಡಿಸಿಪಿ ಪ್ರದೀಪ್ ಗುಂಟಿ, ತಾವೇ ಕಣ್ಣಾರೆ ಕಂಡ, ಅಪಘಾತಕ್ಕೀಡಾದ ಬೆಕ್ಕಿನ ಮರಿಯ ಪ್ರಸಂಗವೊಂದನ್ನು ಹೇಳಿ ಭಾವುಕರಾದರು.

ಐದಾರು ದಿನಗಳ ಹಿಂದೆ ಕುವೆಂಪುನಗರ–ಬೋಗಾದಿ ರಿಂಗ್ ರಸ್ತೆಯಲ್ಲಿ ಒಂದು ಭಯಾನಕ ದೃಶ್ಯ ನನ್ನ ಮನ ಕಲಕುವಂತೆ ಮಾಡಿತು. ಅಂದು ರೌಂಡ್ಸ್‌ನಲ್ಲಿದ್ದಾಗ, ದೂರದಿಂದ ರಸ್ತೆಯಲ್ಲಿ ಮೃತದೇಹವೊಂದು ಬಿದ್ದಿರುವಂತೆ ಕಂಡಿತು. ಅದರ ಸುತ್ತಲು ಬಿಳಿ ಬೆಕ್ಕೊಂದು ಓಡಾಡುವ ದೃಶ್ಯ ಗೋಚರಿಸಿತು.

ಇಲಿ ಅಥವಾ ಯಾವುದೋ ಪಕ್ಷಿ ಸತ್ತು ಬಿದ್ದಿರುವ ಹಿನ್ನೆಲೆಯಲ್ಲಿ ಅದನ್ನು ತಿನ್ನಲು ಬೆಕ್ಕು ಈ ರೀತಿ ಓಡಾಡುತ್ತಿದೆ ಎಂದುಕೊಂಡೆ. ಆದರೆ ಹತ್ತಿರ ಹೋಗಿ ನೋಡಿದಾಗ, ನಿಜಕ್ಕೂ ಮನ ಕಲುಕಿತು. ಬೆಕ್ಕಿನ ಮರಿ ಅಪಘಾತಕ್ಕೀಡಾಗಿ ಅದರ ದೇಹ ಎರಡು ತುಂಡಾಗಿ ಬಿದ್ದಿತ್ತು. ಯಾವುದೋ ವಾಹನ ಹರಿದು ಅದರ ಪ್ರಾಣ ಹೋಗುವ ಸನ್ನಿವೇಶ ನಿರ್ಮಾಣವಾಗಿತ್ತು.

ಎರಡು ತುಂಡಾಗಿ ಬಿದ್ದಿದ್ದ ತನ್ನ ಮರಿಯ ಸುತ್ತಲೂ ಓಡಾಡುತ್ತಿದ್ದ ತಾಯಿ ಬೆಕ್ಕಿನ ದುಃಖ ಹೇಳತೀರದಾಗಿತ್ತು. ಅರೆ ಜೀವದಲ್ಲಿ ಬಿದ್ದಿರುವ ತನ್ನ ಮರಿಯನ್ನು ಉಳಿಸಿಕೊಳ್ಳುವ ವ್ಯರ್ಥ ಪ್ರಯತ್ನದಲ್ಲಿ ತಾಯಿ ಬೆಕ್ಕು ಚಡಪಡಿಸುತ್ತಿತ್ತು. ನಾವು ಅಲ್ಲಿಯೇ ಇದ್ದರೂ ಮರಿ ಬೆಕ್ಕಿನ ದೇಹ ಎರಡು ತುಂಡಾಗಿದ್ದ ಹಿನ್ನೆಲೆಯಲ್ಲಿ ಅದರ ಜೀವ ಉಳಿಸುವಲ್ಲಿ ನಿಸ್ಸಹಾಯಕರಾದೆವು. ಮರಿ ಬೆಕ್ಕಿನ ಜೀವ ಉಳಿಯುವ ಸಾಧ್ಯತೆಯೇ ಇರಲಿಲ್ಲ. ಹೀಗಿದ್ದ ಪರಿಸ್ಥಿತಿಯಲ್ಲೂ ಏನಾದರೂ ಮಾಡಿ ತನ್ನ ಮರಿಯ ಜೀವ ಉಳಿಸಿಕೊಳ್ಳಬೇಕೆಂಬ ತವಕ ತಾಯಿ ಬೆಕ್ಕಿನಲ್ಲಿ ಕಂಡಿತು. ಅಷ್ಟರಲ್ಲೇ ಇನ್ನೊಂದು ದೊಡ್ಡ ಲಾರಿ ಬಂದು ಮರಿ ಬೆಕ್ಕಿನ ಮೇಲೆ ಹರಿಯಿತು. ಆ ಬಳಿಕ ಮರಿ ಬೆಕ್ಕು ಪ್ರಾಣ ಬಿಟ್ಟಿತು.

ಭಾವನೆಗಳು ಪ್ರಾಣಿಗಳಿಗೂ ಮನುಷ್ಯರಂತೆಯೇ ಇರುತ್ತವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಯಾವುದೇ ಪ್ರಾಣಿ–ಪಕ್ಷಿಗೂ ಅಪಘಾತ ಉಂಟು ಮಾಡಬಾರದು ಎಂಬ ಆಲೋಚನೆ ನಮ್ಮಲ್ಲಿದ್ದರೆ, ಮನುಷ್ಯರಿಗಂತೂ ಅಪಘಾತ ಮಾಡಲು ಸಾಧ್ಯವೇ ಇಲ್ಲ. ಅಂತಹ ಸೂಕ್ಷ್ಮತೆ ನಮ್ಮಲ್ಲಿ ಉಂಟಾಗಲಿ. ಸುರಕ್ಷಿತವಾಗಿ ವಾಹನ ಚಾಲನೆ ಮಾಡಲು ಆದ್ಯತೆ ನೀಡೋಣ ಎಂದು ನುಡಿದರು.

ಜನಪ್ರತಿನಿಧಿಗಳಿಗೆ ದಸರಾ ಪಾಸ್ ನೀಡಿ, ಸಮಿತಿಗಳಲ್ಲಿ ಎಲ್ಲಾ ಪಕ್ಷದ ಕಾರ್ಯಕರ್ತರಿರಲಿ, ಉದ್ಯಾನವನಗಳಲ್ಲೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿ, ಪ್ಯಾಕೇಜ್ ಟೂರ್ ವ್ಯವಸ್ಥೆ; ವಿಮಾನಗಳಲ್ಲಿ ರಿಯಾಯಿತಿ!



ಮೈಸೂರು, ಆ.7(ಎಂಕೆ)– ನಾಡಹಬ್ಬ ಮೈಸೂರು ದಸರಾ ಆಚರಣೆ ಹಿನ್ನೆಲೆಯಲ್ಲಿ ರಚನೆಯಾಗಲಿರುವ ವಿವಿಧ ದಸರಾ ಉಪ ಸಮಿತಿಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳಿಗೆ ಅವಕಾಶ ನೀಡಬೇಕು. ವಿಶೇಷ ಟೂರ್ ಪ್ಯಾಕೇಜ್ ರೂಪಿಸುವ ಜೊತೆಗೆ ಹೆಚ್ಚುವರಿ ಅನುದಾನ ನೀಡುವುದು ಸೇರಿದಂತೆ ಹಲವು ಅಭಿಪ್ರಾಯಗಳು ವ್ಯಕ್ತವಾದವು.

ಮೈಸೂರು ಡಿಸಿ ಕಚೇರಿಯಲ್ಲಿ 'ದಸರಾ ಆಚರಣೆ' ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಾಸಕ ಬಿ.ಹರ್ಷವರ್ಧನ ಮಾತನಾಡಿ, ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಸದಸ್ಯರಿಗೆ ತಲಾ ಎರಡೆರಡು ಪಾಸ್ ನೀಡಬೇಕು ಎಂದರು.

ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರವಿದ್ದ ಸಂದರ್ಭದಲ್ಲಿ ಉಪ

ದಸರಾ ಆಚರಣೆ ಸಂಬಂಧ ಜನಪ್ರತಿನಿಧಿಗಳ ನಾನಾ ಸಲಹೆ

ಸಮಿತಿಗಳನ್ನು ರಚಿಸಿರಲಿಲ್ಲ. ಈ ವರ್ಷ ಉಪ ಸಮಿತಿಗಳನ್ನು ರಚಿಸಿ, ಎಲ್ಲಾ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಬೇಕು. ಅಲ್ಲದೆ ಮಳೆಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ತಿ ಕಾರ್ಯ ನಡೆಯಬೇಕು ಎಂಬ ಮಾತಿಗೆ ದನಿಗೂಡಿಸಿದ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ರಸ್ತೆಗಳ ಗುಂಡಿ ಮುಚ್ಚಬೇಕಾಗಿದೆ. ಜಂಬೂಸವಾರಿ ಸಾಗುವ ವೃತ್ತಗಳಲ್ಲಿ ಸುಧಾರಣೆ ಆಗಬೇಕಾಗಿರುವುದರಿಂದ ನಗರಪಾಲಿಕೆಗೆ ಹೆಚ್ಚಿನ ಅನುದಾನ ನೀಡುವಂತೆ ಒತ್ತಾಯಿಸಿದರು.

ಉದ್ಯಾನವನಗಳಲ್ಲಿ ಆಚರಣೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ದಸರಾ ಸಂದರ್ಭದಲ್ಲಿ ಉದ್ಯಾನವನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸ್ಪರ್ಧೆಗಳನ್ನು ಆಯೋಜಿಸಬೇಕು. ಇದರಿಂದ ಜನರು ನಗರದ ಹೃದಯ ಭಾಗಕ್ಕೆ ಬರುವುದು ಕಡಿಮೆಯಾಗಲಿದೆ. ಜೊತೆಗೆ ಅಲ್ಲಲ್ಲಿ ಮೊಬೈಲ್ ಶೌಚಾಲಯಗಳನ್ನು ವ್ಯವಸ್ಥೆ ಮಾಡುವುದರಿಂದ ನೆರೆದವರಿಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಕೆಎಸ್‌ಟಿಡಿಸಿ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ದಸರಾ ಮಹೋತ್ಸವದಲ್ಲಿ ಮೈಸೂರು, ಚಾ.ನಗರ, ಕೊಡಗು, ಮಂಡ್ಯ ಜಿಲ್ಲೆಗಳಿಗೆ ವಿವಿಧ ರೀತಿಯ 13 ಟೂರ್ ಪ್ಯಾಕೇಜ್‌ಗಳನ್ನು ರೂಪಿಸಿದ್ದು, ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡುವಾಗ 'ಅಂಬಾರಿ' ಡಬಲ್ ಡೆಕ್ಕರ್ ಬಸ್‌ಗಳ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದರು.

ವಿಶೇಷ ವಿಮಾನಗಳಿರಲಿ: ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಮಾತನಾಡಿ, ದಸರಾ ವೇಳೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನಗಳ ವ್ಯವಸ್ಥೆ ಮಾಡಬೇಕು. ಇದರಿಂದ ಹೊರರಾಜ್ಯದ ಪ್ರವಾಸಿಗರಿಗೆ ಅನುಕೂಲವಾಗುವುದರ ಜೊತೆಗೆ ದಸರಾಗೆ ಹೆಚ್ಚಿನ ಪ್ರಚಾರ ನೀಡಿದಂತಾಗುತ್ತದೆ ಎಂದರು. ಬಳಿಕ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಮೈಸೂರು–ಬೆಂಗಳೂರು ನಡುವಿನ ವಿಮಾನ ಪ್ರಯಾಣಿಕರಿಗೆ ವಿನಾಯಿತಿ ನೀಡಬೇಕು ಎಂದು ಹೇಳಿದರು.

ಪ್ರತಿಭಾ ಪುರಸ್ಕಾರ

ಮೈಸೂರು,ಆ.7–ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ವಾರ್ಷಿಕೋತ್ಸವದ ಪ್ರಯುಕ್ತ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಈ ಸಂಬಂಧ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಇತ್ತೀಚಿನ ಭಾವಚಿತ್ರ, ಅಂಕಪಟ್ಟಿ ನಕಲಿನೊಂದಿಗೆ ಆ.31ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ದೂ. 0821–2371623 ಸಂಪರ್ಕಿಸಬಹುದು.

ತಪಾಸಣಾ ಶಿಬಿರ

ಮೈಸೂರು,ಆ.7–ಮೈಸೂರಿನ ರಾಜೀವ್ ನಗರದ ಮೂರನೇ ಹಂತದಲ್ಲಿರುವ ಡಾ. ಕರುಣಾಕರ ನಾಗರಾಜೇಗೌಡ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆ.8ರಂದು ಬೆಳಗ್ಗೆ 8ರಿಂದ ಮಧ್ಯಾಹ್ನ 2ರವರೆಗೆ ಮಧು ಮೇಹ, ಮೂಳೆ, ಮೂಳೆ ಸಾಂದ್ರತೆ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9663656244 ಅಥವಾ 0821–2363100 ಸಂಪರ್ಕಿಸಬಹುದು.



ಮೈಸೂರಲ್ಲಿ ನಡೆದ ಎರಡು ದಿನಗಳ ಹಲಸಿನ ಮೇಳಕ್ಕೆ ತೆರೆ

ಹಲಸಿನ ಖಾದ್ಯ ಸವಿದ ನೂರಾರು ಮಂದಿ

ಮೈಸೂರು,ಆ.7(ಆರ್‌ಕೆಬಿ)–ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ನಡೆದ 2 ದಿನಗಳ ಹಲಸಿನ ಹಣ್ಣಿನ ಮೇಳಕ್ಕೆ ಭಾನುವಾರ ತೆರೆ ಬಿದ್ದಿತು. ಸಹಜ ಸಮೃದ್ಧಿ ಸಾವಯವ ಕೃಷಿಕರ ಬಳಗ, ರೋಟರಿ ಮೈಸೂರು ವೆಸ್ಟ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮೇಳದಲ್ಲಿ ಎರಡು ದಿನಗಳಲ್ಲಿ ಸಹಸ್ರಾರು ಮಂದಿ ಹಲಸು ಪ್ರಿಯರು ಹಲಸಿನ ಹಣ್ಣಿನ ಖಾದ್ಯಗಳನ್ನು ಸವಿದು ಖುಷಿಪಟ್ಟರು.

ಮೇಳದಲ್ಲಿ ಹಲಸಿನ ಹಪ್ಪಳ, ಐಸ್‌ಕ್ರಿಂ, ಚಿಪ್ಸ್, ಹಲ್ವಾ, ವಡೆ, ಪಾಯಸ, ಪಲಾವ್ ಇನ್ನಿತರೆ ಸವಿ ಸವಿಯಾದ ರುಚಿಕರ ಖಾದ್ಯಗಳು ಹಲಸು ಪ್ರಿಯರ ನಾಲಿಗೆಯನ್ನು ತಣಿಸಿತು. ಮೈಸೂರು, ಕುಂದಾಪುರ, ಕಾರ್ಕಳ, ಮಂಗಳೂರು, ಹೆಚ್.ಡಿ.ಕೋಟೆ ತಾಲೂಕಿನ ಹಾಡಿ, ಪಿರಿಯಾಪಟ್ಟಣ, ಹುಬ್ಬಳ್ಳಿ, ಧಾರವಾಡ, ತಮಿಳುನಾಡು ಸೇರಿದಂತೆ ನಾನಾ ಕಡೆಯಿಂದ ಹಲಸು ಬೆಳೆಗಾರರು ತಮ್ಮ ಹಲಸಿನ ಹಣ್ಣಿನ ಖಾದ್ಯಗಳ ಮಾರಾಟ ನಡೆಸಿದರು. ಇದಕ್ಕಾಗಿ 30 ಸ್ಟಾಲ್‌ಗಳನ್ನು ಇರಿಸಲಾಗಿತ್ತು ಸಹಜ ಸಮೃದ್ಧ ನಿರ್ದೇಶಕ ಜಿ.ಕೃಷ್ಣಪ್ರಸಾದ್ ನೇತೃತ್ವದಲ್ಲಿ ನಡೆದ ಮೇಳ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಅಡುಗೆ ಸ್ಪರ್ಧೆ ವಿಜೇತರು: ಮೇಳದಲ್ಲಿ ಭಾನುವಾರ ಏರ್ಪಡಿಸಿದ್ದ ಹಲಸಿನ ಹಣ್ಣಿನ ಅಡುಗೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 15 ಮಂದಿಯ ಪೈಕಿ ಮಂಗಳ ಪ್ರಕಾಶ್ (ಪ್ರಥಮ), ಕೆ. ಜಯಶ್ರೀ (ದ್ವಿತೀಯ), ಶ್ರೀದೇವಿ ಪಿ.ಹೆಗ್ಡೆ (ತೃತೀಯ) ಬಹುಮಾನ ಪಡೆದರು. **ಹಲಸಿನ ಹಣ್ಣು ತಿನ್ನುವ ಸ್ಪರ್ಧೆ ವಿಜೇತರು:** ಹಲಸಿನ ಹಣ್ಣು ತಿನ್ನುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 25 ಮಂದಿಯ ಪೈಕಿ ಮಣಿಕಂಠನ್ (ಪ್ರಥಮ), ವಿ.ಬಿ.ಗಿರೀಶ್ (ದ್ವಿತೀಯ) ಹಾಗೂ ಎಸ್.ಡಿ.ಮೋಹನ್‌ಕುಮಾರ್ (ತೃತೀಯ) ಬಹುಮಾನ ಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.08.2022 ಸೋಮವಾರ, ಮಳೆ ನಕ್ಷತ್ರ : ಆಶ್ಲೇಷ, 03.07.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ದಶಮೀ, ನಕ್ಷತ್ರ : ಅನುರಾಧ, ರಾಹುಕಾಲ: ಬೆಳಗ್ಗೆ 7.30 ರಿಂದ 9 ಗಂಟೆವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರೀ ಚಕ್ರ ಪೂಜೆ, ಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಏಕಾದಶಿ, ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣ ಸೋಮವಾರ ಪ್ರಯುಕ್ತ ಏಕಾದಶಿ ರುದ್ರಾಭಿಷೇಕ, ಬೆಳಗ್ಗೆ 6ರಿಂದ ಸಂಜೆ 6ರವರೆಗೆ, ಶ್ರೀ ಸ್ವಾಮೀಜಿಯವರಿಂದ ಮೌನ ವ್ರತ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಸಂಸ್ಕೃತ ಭಾರತಿ, ಮೈಸೂರು ವಿಭಾಗ:** ಸಂಸ್ಕೃತ ಸಪ್ತಾಹ–2022, ಉದ್ಘಾಟನಾ ಸಮಾರಂಭ, ಉದ್ಘಾಟನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್, ಅಧ್ಯಕ್ಷತೆ: ಸಂಸ್ಕೃತ ಭಾರತಿ ಅಧ್ಯಕ್ಷ ಧೀರೇಂದ್ರ ಕುಮಾರ್ ಮೆಹತಾ, ಮುಖ್ಯ ಭಾಷಣ: ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಟಿ.ಎನ್. ಪ್ರಭಾಕರ್, ಗೌರವ ಉಪಸ್ಥಿತಿ: ವಿಜಯ ವಿಠಲ ವಿದ್ಯಾಶಾಲೆಯ ಕಾರ್ಯದರ್ಶಿ ಆರ್. ವಾಸುದೇವ ಭಟ್, ಸ್ಥಳ: ವಿಜಯ ವಿಠಲ ವಿದ್ಯಾಶಾಲೆ, ಸರಸ್ವತಿಪುರಂ, ಬೆಳಗ್ಗೆ 11 ಗಂಟೆಗೆ.

■ **ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಸ್ಯಾಂಡಲ್‌ವುಡ್ ಸೆಲೆಬ್ರೆಟಿಸ್, ಭೂಮಿಕಾ ಭಾವೈಕ್ಯ ಬಳಗ:** 22ನೇ ವರ್ಷದ 133ನೇ ಕಾರ್ಯಕ್ರಮ, ದಿವ್ಯ ಸಾನಿಧ್ಯ: ಶ್ರೀ ಬಿ.ಪಿ. ಭರತ್‌ರಾಜೇ ಅರಸು, ಜೀವನದಿ ಕಾವೇರಿ ಮಾತೆಗೆ 9ನೇ ವರ್ಷದ ಬಾಗಿನ ಸಮರ್ಪಣೆ, 'ಕರುನಾಡ ಮಹಿಳಾ ಸಿರಿ' ಪ್ರಶಸ್ತಿ ಪ್ರದಾನ ಸಮಾರಂಭ, ಪೂಜೆಯ ಸ್ಥಳ: ಕಾವೇರಿ ಮಾತೆಯ ಪ್ರತಿಮೆ ಬಳಿ, ಕೆಆರ್‌ಎಸ್, ಬಾಗಿನ ಸಮರ್ಪಣೆ: ಕೆಆರ್‌ಎಸ್ ಬಲಭಾಗದ ಬಲದಂಡೆ ನಾಲೆ, ಬೆಳಗ್ಗೆ 11 ಗಂಟೆಗೆ.

■ **ಜೆಎಸ್‌ಎಸ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಫಾರ್ ವುಮನ್ :** 'ಓಪನ್ ಡೇ' ಕಾರ್ಯಕ್ರಮ, ಸ್ಥಳ: ಕಾಲೇಜು ಕ್ಯಾಂಪಸ್, ಮೇಟಗಳ್ಳಿ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮಳವಳ್ಳಿಯಲ್ಲಿ ಇಂದು

■ **ಮೈಸೂರು ವಿಶ್ವವಿದ್ಯಾನಿಲಯ ಕೆರಿಯರ್ ಹಬ್, ಮಳವಳ್ಳಿಯ ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು :** 'ಯಶಸ್ವಿ ಸ್ಪರ್ಧಾ ಪಯಣ' ಹಾಗೂ 'ಕಲಿಕೆ ಜೊತೆ ಕೌಶಲ್ಯ' ಕುರಿತು ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಕಾರ್ಯಾಗಾರ, ಉದ್ಘಾಟನೆ: ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಕಾರ್ಯದರ್ಶಿ ಎಂ.ಹೆಚ್. ಕೆಂಪಯ್ಯ, ಅಧ್ಯಕ್ಷತೆ: ಕಾಲೇಜಿನ ಪ್ರಾಂಶುಪಾಲ ಡಾ. ಸಿ. ನಾಗರಾಜು, ಸ್ಥಳ: ಶಾತಿ ಸಮುದಾಯ ಭವನ, ಶಾಂತಿ ಕಾಲೇಜು, ಮಳವಳ್ಳಿ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ–ಡಿ.ಎನ್.ಶ್ರೀಪಾದ್, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ: ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ, 9.00 ಆಲೂರು ವೆಂಕಟರಾಯರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಬಾನುಲಿ ವರದಿ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ, ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, ಭಾಗವಹಿಸುವವರು ಡಾ.ಕೆ.ವರದರಂಗನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು–ಆಲಾಪ್, 12.45 ನಮ್ಮ ಆರೋಗ್ಯ: ಮೌಲ್ಯ ಶಿಕ್ಷಣ ಕುರಿತು ಡಾ.ರವೀಶ್ ಬಿ.ಎನ್.ಅವರೊಂದಿಗೆ ಸಂದರ್ಶನ, 1.20 ಭಾವಗೀತೆಗಳು: ಶಾಂತಲಾ ವಟ್ಟಂ, 3.00 ಡಿ.ಕೆ.ಜಯರಾಮನ್–ಹಾಡುಗಾರಿಕೆ, 4.00 ಮಹಿಳಾರಂಗ–'ಡಾಕ್ಟರ್ ಸಮಯ'– ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ಮಹಿಳೆ ಹಾಗೂ ಆಯುರ್ವೇದ ಭಾಗವಹಿಸುವ ವೈದ್ಯರು–ಡಾ. ಚೈತ್ರ **ಸಂಜೆ:** 4.30 ಝೇಂಕಾರ:ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ–ಸುಧಾ ಹರೀಶ್, ಸಂಗೀತ– ಜಿ.ಪುಷ್ಪಲತಾ, 6.50 ಕೃಷಿರಂಗ: ಪೌಷ್ಟಿಕ ಕೈತೋಟದ ಪ್ರಾಮುಖ್ಯತೆ ಕುರಿತು ನೇತ್ರಾವತಿ ಎತ್ತಿನಮನಿ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ.

ಕೆಪಿಟಿಸಿಎಲ್ ಕಿರಿಯ ಸಹಾಯಕ ಹುದ್ದೆ: ನಿರಾತಂಕವಾಗಿ ನಡೆದ ಪರೀಕ್ಷೆ



ಮೈಸೂರು, ಆ.7(ಆರ್‌ಕೆ)– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್)ದಲ್ಲಿ ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗಳ ನೇರ ನೇಮಕಾತಿ ಸಂಬಂಧ ಭಾನುವಾರ ಮೈಸೂರಿನ 9 ಪರೀಕ್ಷಾ ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ನಿರಾತಂಕವಾಗಿ ನಡೆಯಿತು.

ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ನಾರಾಯಣಶಾಸ್ತ್ರಿ ರಸ್ತೆಯ ಮಹಾರಾಣಿ ಪದವಿಪೂರ್ವ ಕಾಲೇಜು, ಬನ್ನಿಮಂಟಪದ ಸಂತ್ ಫಿಲೋಮಿನಾ ಪದವಿಪೂರ್ವ ಕಾಲೇಜು, ಡಿ.ಬನುಮಯ್ಯ, ಸ್ವತಂತ್ರ ಪದವಿ ಪೂರ್ವ ಕಾಲೇಜು, ಟೆರಿಷಿಯನ್ ಪದವಿಪೂರ್ವ ಕಾಲೇಜು, ಜೆ.ಪಿ.ನಗರ ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಟಿಟಿಎಲ್ ಪದವಿಪೂರ್ವ ಕಾಲೇಜು, ಮರಿಮಲ್ಲಪ್ಪ ಪದವಿಪೂರ್ವ ಕಾಲೇಜು, ಎಸ್‌ಬಿಆರ್‌ಆರ್ ಮಹಾಜನ ಪದವಿಪೂರ್ವ ಕಾಲೇಜು ಪರೀಕ್ಷಾ ಕೇಂದ್ರಗಳಾಗಿದ್ದವು.

ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30 ಹಾಗೂ ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆದ ಪರೀಕ್ಷೆಗೆ ಬೆಳಗ್ಗೆ 16,641 ಅಭ್ಯರ್ಥಿಗಳ ಪೈಕಿ 12,355 ಮಂದಿ ಹಾಜರಾಗಿದ್ದರು. 4,286 ಮಂದಿ ಗೈರು ಹಾಜರಾಗಿದ್ದರು. ಮಧ್ಯಾಹ್ನದ ಅವಧಿಯಲ್ಲಿ 1166 ಅಭ್ಯರ್ಥಿಗಳ ಪೈಕಿ 238 ಮಂದಿ ಹಾಜರಾಗಿದ್ದರು. 878 ಮಂದಿ ಗೈರು ಹಾಜರಾಗಿದ್ದರು. ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಶ್ರೀನಿವಾಸ ಮೂರ್ತಿ ಪರೀಕ್ಷೆಯ ಮೇಲುಸ್ತುವಾರಿಯಲ್ಲಿ ಪರೀಕ್ಷೆಗಳು ನಿರಾತಂಕವಾಗಿ ನೆರವೇರಿತು. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ, ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.



'ಮೈಸೂರು ಮಿತ್ರ' ಖ್ಯಾತ ಅಂಕಣಕಾರರು, ಸಾಹಿತಿಗಳು, ಛಾಯಾಗ್ರಾಹಕರಾದ ಜಿ.ಎಲ್. ತ್ರಿಪುರಾಂತಕ ಅವರಿಗೆ ಮೈಸೂರಿನ ಸ್ವಗೃಹದಲ್ಲಿ ಶ್ರೀ ಶಿವರಾತ್ರೀಶ್ವರ ಬಳಗದ ವತಿಯಿಂದ ಪ್ರೀತಿಪೂರ್ವಕವಾಗಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಜನಪ್ರತಿನಿಧಿಗಳಿಂದ ಜನರು ಪ್ರಗತಿ ವರದಿ ಕೇಳಿದಾಗ ಮಾತ್ರ ರಾಜಕೀಯ ಬದಲಾವಣೆ

ಬಹುಭಾಷಾ ನಟ ಪ್ರಕಾಶ್ ರಾಜ್ ಅಭಿಮತ

ಮೈಸೂರು, ಆ.7(ಎಸ್‌ಬಿಡಿ)– ಜನಪ್ರತಿನಿಧಿಗಳಿಂದ ಪ್ರಗತಿ ವರದಿ ಕೇಳಿದರೆ ಮಾತ್ರ ರಾಜಕೀಯದಲ್ಲಿ ಬದಲಾವಣೆ ಸಾಧ್ಯ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಭಾನುವಾರ ಏರ್ಪಡಿಸಿದ್ದ ಸಂವಾದದಲ್ಲಿ ಮಾತನಾಡಿ, ದೇಶದ ರಾಜಕೀಯ ಬದಲಾವಣೆ ಜನರಿಂದಲೇ ಆಗುತ್ತದೆ. ಜನಪ್ರತಿನಿಧಿಗಳಿಂದ ಪ್ರಗತಿ ವರದಿ ಕೇಳಲು ಆರಂಭಿಸಿದಾಗ ಸುಧಾರಣೆಯೂ ಶುರುವಾಗುತ್ತದೆ. ನಮ್ಮ ತೆರಿಗೆ ಹಣದ ಲೆಕ್ಕ ಕೇಳುವುದು ಪ್ರತಿಯೊಬ್ಬರ ಹಕ್ಕು. ಪ್ರಧಾನಮಂತ್ರಿ ಆಗಮಿಸುವರೆಂದು ಕೋಟ್ಯಾಂತರ ರೂ. ಖರ್ಚು ಮಾಡಿ ರಸ್ತೆ ಅಭಿವೃದ್ಧಿಪಡಿಸುವುದಾದರೆ ತೆರಿಗೆ ಪಾವತಿಸುವ ಜನರ ಅನುಕೂಲಕ್ಕಾಗಿ ಏಕೆ ಮಾಡುವುದಿಲ್ಲ?. ಇದರಿಂದ ಜನ ನೊಂದುಕೊಳ್ಳುವುದಿಲ್ಲವೇ?. ಉತ್ತಮ ಶಾಲೆ, ಆಸ್ಪತ್ರೆ, ರಸ್ತೆ ಇನ್ನಿತರ ಸೌಲಭ್ಯ ಕಲ್ಪಿಸಿ ಎಂಬುದಷ್ಟೇ ಜನರ ಆಗ್ರಹ. ಜನರ ಹಣದಿಂದಲೇ ಜೀವನ ನಡೆಸುತ್ತಿರುವ ಜನಪ್ರತಿನಿಧಿಗಳು ತಮ್ಮ ಕರ್ತವ್ಯದ ವರದಿಯನ್ನು ನೀಡಬೇಕೆಂದು ಎಂದರು.

ರಾಜಕಾರಣಿಗಳು ಬಲಿಷ್ಠರಲ್ಲ, ಆದರೆ ಅವರ ಅಧಿಕಾರದ ಶಕ್ತಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇನ್ನೊಬ್ಬರನ್ನು ಉಳಿಸುವುದು, ಬೆಳೆಸುವುದು ನಿಜವಾದ ಶಕ್ತಿಯೇ ಹೊರತು ಮತ್ತೊಬ್ಬರನ್ನು ಸುಮ್ಮನಾಗಿಸುವುದು ಅಥವಾ ಅವರ ಧ್ವನಿ ಅಡಗಿಸುವುದಲ್ಲ. ಇದು ನಮ್ಮ ರಾಷ್ಟ್ರ, ನಮ್ಮ ಹಣ. ಜನಪ್ರತಿನಿಧಿಗಳ ಆಯ್ಕೆ ಮಾಡುವ ಜನರ ಪಾತ್ರ ಬಹಳ ಮುಖ್ಯ. ದಶಕದಿಂದ ನಡೆಯುತ್ತಿರುವ ರಾಜಕೀಯ ನಾಟಕದಿಂದ ನೊಂದಿರುವ ಜನ ಪ್ರಶ್ನೆ ಮಾಡಲು ಆರಂಭಿಸಿದ್ದಾರೆ. ಮುಂದೆ ಇವರಿಂದಲೇ ಬದಲಾವಣೆ ಆಗುತ್ತದೆ ಎಂದು ವಿಶ್ವಾಸದಿಂದ ನುಡಿದರು.



ನಾನು ಯಾವ ಪಕ್ಷಕ್ಕೂ ಸೇರಿರುವವನಲ್ಲ. ನಾನು ರಾಜಕೀಯಕ್ಕೆ ಬಂದು ಬಹಳ ವರ್ಷವಾಯಿತು. ಆದರೆ ನನ್ನ ನಿಲುವು ಬದಲಾಗಿಲ್ಲ. ಜನರ ಧ್ವನಿಯಾಗಿಯೇ ಇದ್ದೇನೆ. ಪ್ರಶ್ನಿಸುವುದು ಪ್ರತಿಯೊಬ್ಬರ ಹಕ್ಕು ಸಾಮಾಜಿಕ ಜಾಲತಾಣದಲ್ಲಿ 'ಜಸ್ಟ್ ಆಸ್ಕಿಂಗ್' ಮೂಲಕ ನಿರಂತರವಾಗಿ ನಾನೂ ಪ್ರಶ್ನಿಸುತ್ತೇನೆ. ಪ್ರಶ್ನಿಸುವುದೇ ತಪ್ಪು ಎನ್ನುವ ಧೋರಣೆ ಸರಿಯಲ್ಲ. ಪ್ರಶ್ನೆಗೆ ಸಮರ್ಪಕ ಉತ್ತರ ನೀಡಬೇಕು, ಕೇಳುವುದರಲ್ಲೇ ತಪ್ಪಿದ್ದರೆ ಅದನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ನಡೆಸುವುದರೊಂದಿಗೆ ಇದರ ಹಿಂದೆ ಮಾಡಬೇಕಿರುವ ಕೆಲಸಗಳು ಸಾಕಷ್ಟಿರುತ್ತವೆ. ಆ ರೀತಿಯ ಜವಾಬ್ದಾರಿಗಳನ್ನು ನಾನು ಮುಂದುವರೆಸುತ್ತೇನೆ. ಧ್ವನಿ ಎತ್ತಲಿಲ್ಲ ಎಂದರೆ ನಾನು ಸತ್ತೇ ಹೋಗುತ್ತೇನೆ ಎಂದು ಹೇಳಿದರು.

ಅಡಗಿಸುವ ಅಜೆಂಡಾ: ಕಲೆ, ಪುಸ್ತಕ ಓದಿನಿಂದ ಸೂಕ್ಷ್ಮತೆ ಬೆಳೆದು ಪ್ರಶ್ನೆ ಕೇಳುವುದು ಹೆಚ್ಚಾಗುತ್ತದೆ. ಹಾಗಾಗದಂತೆ ತಡೆಯಬೇಕೆಂಬ ಅಜೆಂಡಾ ಶುರುವಾಗಿದೆ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ ಕಡಿತಗೊಳಿಸಲಾಗುತ್ತಿದೆ. ಮನೆ ಮೇಲೆ ತ್ರಿವರ್ಣ ಧ್ವಜ ಹಾರಿಸುವುದರ ಜೊತೆಗೆ ಅಗತ್ಯ ವಸ್ತುಗಳ ಬೆಲೆ ಕಡಿಮೆ ಮಾಡುವುದು, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಮೂಲಕ ರಾಷ್ಟ್ರಪ್ರೇಮ ವ್ಯಕ್ತಪಡಿಸಬೇಕು. ದೇಶದಲ್ಲಿ ಶೇ.20ರಷ್ಟು ಉದ್ಯೋಗಿಗಳು ಮಾತ್ರ 25 ಸಾವಿರಕ್ಕಿಂತ ಹೆಚ್ಚು ಸಂಬಳ ಪಡೆಯುತ್ತಾರೆ ಎಂದರೆ ಈಗಿನ ಬೆಲೆ ಏರಿಕೆಯಲ್ಲಿ ಜೀವನ ನಡೆಸುವುದು ಹೇಗೆ?. ಈಗಿನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಾನು ಶೂನ್ಯ ಅಂಕ ನೀಡ ಬಯಸುತ್ತೇನೆ ಎಂದರು.

ಹಿಂದಿ ರಾಷ್ಟ್ರೀಯ ಭಾಷೆ ಅಲ್ಲ: ಹಿಂದಿ ರಾಷ್ಟ್ರಭಾಷೆ ಅಲ್ಲ ಎನ್ನುವುದು ಸತ್ಯ. ರಾಷ್ಟ್ರಭಾಷೆ ಎನ್ನುವುದು ತಪ್ಪು. ಈ ವಿಚಾರವಾಗಿ ಚರ್ಚೆ ಮುಂದುವರೆಸುವುದು ಅನಗತ್ಯ ಎಂದು ಹೇಳಿದರು.

10 ಜನ ಕೈ ಜೋಡಿಸಬೇಕು: ಮೈಸೂರಿನ ಮಿಷನ್ ಆಸ್ಪತ್ರೆಗೆ 'ಅಪ್ಪು ಎಕ್ಸ್‌ಪ್ರೆಸ್' ಆಂಬುಲೆನ್ಸ್ ನೀಡಿದ್ದು, ಮುಂದೆ ಆಗುವ ಬ್ಲಡ್ ಬ್ಯಾಂಕ್ ಆ ಆಸ್ಪತ್ರೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಎಲ್ಲಾ ಬಡವರೂ ಉಪಯೋಗಪಡಿಸಿಕೊಳ್ಳಬಹುದು. ಕೊರೊನಾ ಸಂದರ್ಭದಲ್ಲಿ ಆಂಬುಲೆನ್ಸ್ ಮಾಫಿಯಾ ಅರಿವಿಗೆ ಬಂದಿರುವುದರಿಂದ ಹತ್ತಾರು ಜನರಿಂದ ಮಾಹಿತಿ ಪಡೆದು ಸರಿಯಾದ ನಿರ್ವಹಣೆ ಖಚಿತಪಡಿಸಿಕೊಂಡು ಮುಂದುವರೆಯಲಾಗಿದೆ. ಮೈಸೂರು ಸಮೀಪದ ಕೆ.ಶೆಟ್ಟಹಳ್ಳಿಯಲ್ಲಿ ತೋಟ ಮಾಡಿಕೊಂಡು ವ್ಯವಸಾಯದಲ್ಲಿ ತೃಪ್ತಿ ಕಂಡಿದ್ದೇನೆ. 10 ಜನರಿಗೆ ಸಹಾಯ ಮಾಡುವ ಶಕ್ತಿ ಇದೆ. ಆದರೂ ಹತ್ತಾರು ಸಮಾನ ಮನಸ್ಕರು ಸೇರಿದರೆ ಪರಿಣಾಮ ಹೆಚ್ಚಿರುತ್ತದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಸುತ್ತಮುತ್ತಲ ಬಡ ರೋಗಿಗಳಿಗೆ ಆರೋಗ್ಯ ಸೇವೆ ನೀಡುತ್ತಿರುವ ಕೆ.ಆರ್.ಆಸ್ಪತ್ರೆಗೂ ನೆರವಾಗುವಂತೆ ಪ್ರಕಾಶ್ ರಾಜ್ ಅವರಿಗೆ ಮನವಿ ಮಾಡಿದರು. ಪ್ರಧಾನ ಕಾರ್ಯದರ್ಶಿ ಸುಬ್ರಮಣ್ಯ, ನಗರ ಕಾರ್ಯದರ್ಶಿ ರಂಗಸ್ವಾಮಿ ವೇದಿಕೆಯಲ್ಲಿದ್ದರು.

ಭಾರತದ ಸಿನಿಮಾ ಆಗಲಿ...

ಬಾಹುಬಲಿ, ಕೆಜಿಎಫ್, ಆರ್‌ಆರ್‌ಆರ್ ಸಿನಿಮಾಗಳಂತೆ ಎಲ್ಲವನ್ನೂ ಪಾನ್ ಇಂಡಿಯಾ ಪರಿಕಲ್ಪನೆಯಿಂದ ನೋಡಲಾಗದು. ಆದರೆ ನಮ್ಮ ಕನ್ನಡದ ಸಿನಿಮಾ ಬೇರೆ ಭಾಷೆಗಳಿಗೆ ಡಬ್ ಆಗಿ, ಇಂಗ್ಲಿಷ್ ಸಬ್ ಟೈಟಲ್‌ನೊಂದಿಗೆ ಭಾರತದ ಸಿನಿಮಾ ಆಗಿ ಪ್ರದರ್ಶನವಾಗಬಹುದು. ನಮ್ಮ ಭಾಷೆಯ ಸೊಗಡನ್ನು ಉಳಿಸಿಕೊಂಡು ಹಲವು ಭಾಷೆಗಳಲ್ಲಿ ಕೆಲಸ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ. ಕನ್ನಡ, ತಮಿಳು, ಮಲೆಯಾಳಂನಲ್ಲಿ ಇತ್ತೀಚೆಗೆ ಅತ್ಯುತ್ತಮ ಚಿತ್ರಗಳು ಬರುತ್ತಿವೆ. ಕೆಲ ವರ್ಷಗಳಿಂದ ಹೊಸ ಪ್ರತಿಭೆಗಳು ಬೆಳೆಯುತ್ತಿದ್ದಾರೆ. 'ಚಾರ್ಲಿ' ಸಿನಿಮಾ, ಮೂರು ದಶಕಗಳಿಂದ ನಟನಾಗಿರುವ ನನ್ನನ್ನು ಪ್ರೇಕ್ಷಕನನ್ನಾಗಿ ಮಾಡಿತು. ಸ್ಟಾರ್‌ಡಮ್ ಇರುವವರಿಗೆ ನಾವು ಒಳ್ಳೆಯ ನಟನೆಂದು ಸಾಬೀತುಪಡಿಸಿಕೊಳ್ಳುವ ಸವಾಲು ಈಗ ಕಠಿಣವಾಗಿದೆ. ವೈಜ್ಞಾನಿಕ ಬೆಳವಣಿಗೆ ನಡುವೆ ಓಟಿಟಿ ಸೇರಿದಂತೆ ಸಿನಿಮಾ ವೀಕ್ಷಣೆಯ ಆಯ್ಕೆ ಪ್ರೇಕ್ಷಕರದ್ದಾಗಿದೆ. ಪ್ರಸ್ತುತತೆಗೆ ಹೊಂದಿಕೊಂಡು ಮುನ್ನಡೆಯುವುದು ಅನಿವಾರ್ಯವಾಗಿದೆ. ಹೀಗೆ ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಹಲಸಿನ ಹಣ್ಣು ಸೇವನೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚಳ

ಆಹಾರ ತಜ್ಞೆ ರತ್ನಾ ರಾಜಯ್ಯ ಅಭಿಮತ



ಮೈಸೂರು, ಆ.7(ಎಂಟಿವೈ)– ಔಷಧೀಯ ಗುಣ ಹೊಂದಿರುವ ಹಲಸಿನ ಹಣ್ಣನ್ನು ಸೇವಿಸುವುದರಿಂದ ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ. ಆರೋಗ್ಯಕರ ಜೀವನಕ್ಕೆ ಹಲಸಿನ ಬಳಕೆ ಅತ್ಯಗತ್ಯ ಎಂದು ಆಹಾರ ತಜ್ಞೆ ರತ್ನಾ ರಾಜಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಸಹಜ ಸಮೃದ್ಧ ಹಾಗೂ ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಸಹಯೋಗದಲ್ಲಿ ಭಾನುವಾರ ನಡೆದ ಹಲಸಿನ ಹಬ್ಬದಲ್ಲಿ ಹಲಸು ಅಡುಗೆ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಶ್ರೀಲಂಕಾ, ಮಲೇಷಿಯಾ, ಥಾಯ್‌ಲ್ಯಾಂಡ್ ದೇಶಗಳು ಹಲಸಿನ ಮೌಲ್ಯವರ್ಧನೆಯಲ್ಲಿ ಸಾಕಷ್ಟು ಮುಂಚೂಣಿಯಲ್ಲಿ ಇವೆ. ಹಲಸು ಅಲ್ಲಿನ ನಿತ್ಯದ ಆಹಾರದ ಭಾಗವಾಗಿದೆ. ಹಲಸಿನ ಹಣ್ಣು ಮಾತ್ರವಲ್ಲದೆ, ಹಲಸಿನ ಹಣ್ಣಿಂದ ತಯಾರಿಸಿದ ವಿವಿಧ ಆಹಾರ ಪದಾರ್ಥಗಳ ಬಳಕೆಯೂ ಹೆಚ್ಚಿಸಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಹಲಸಿನ ಬಳಕೆ ಹೆಚ್ಚಿಸಿಕೊಳ್ಳುವುದು ಸೂಕ್ತ ಎಂದು ಸಲಹೆ ನೀಡಿದರು.

ಹಲಸಿನ ಅಡುಗೆ ಸ್ಪರ್ಧೆ ತೀರ್ಪುಗಾರರಾಗಿದ್ದ ಸಹಜ ಸಮೃದ್ಧದ ಸಂಚಾಲಕಿ ಸೀಮಾ ಪ್ರಸಾದ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಹಲಸಿನ ಹಣ್ಣು ಹಾಗೂ ಬೀಜದಿಂದ ವಿವಿಧ ಅಡುಗೆ ತಯಾರಿಸುವ ಪದ್ಧತಿ ಅನುಸರಿಸುತ್ತಿದ್ದಾರೆ. ಆದರೆ ನಗರ ಪ್ರದೇಶದ ಜನರು ಇಂದಿಗೂ ಹಲಸಿನ ಕಾಯಿ, ಹಣ್ಣು ಮತ್ತು ಬೀಜಗಳಿಂದ ಅಡುಗೆ ಮಾಡುವುದನ್ನೇ ಕಲಿತಿಲ್ಲ. ಇನ್ನಾದರೂ ಹಲಸಿನ ಹಣ್ಣಿನಿಂದ ವಿವಿಧ ಬಗೆಯ ಅಡುಗೆ ತಯಾರಿಸುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ಸಾವಯವ ಕೃಷಿಕ ಪಿ.ವಿನಯ ಚಂದ್ರ ಮಾತನಾಡಿ, ಹಲಸು ನಮ್ಮ ಆಹಾರ ಸಂಸ್ಕೃತಿಯ ಭಾಗ. ಕರ್ನಾಟಕದ ವೈವಿಧ್ಯದ ಹಲಸು, ಹಣ್ಣಿನ ಅಂಗಡಿಗಳಲ್ಲಿ ಸಿಗುವಂತಾಗಬೇಕು. ಇದರಿಂದ ಅವನ್ನು ಸಂರಕ್ಷಿಸುತ್ತಿರುವ ರೈತರಿಗೂ ನೆರವಾಗುತ್ತದೆ.

ನಿವೃತ್ತ ಮಹಿಳಾ ಪೈಲೆಟ್, ಭಾರತೀಯ ವಾಯುಸೇನೆಯ ಸ್ಕ್ವಾಡ್ರನ್ ಲೀಡರ್ ಪರಿಧಿ ಸಿಂಗ್ ಮಾತನಾಡಿ, ಕೆಂಪು ಹಲಸು ಮತ್ತು ಇತರ ವೈವಿಧ್ಯದ ಹಲಸನ್ನು ನಾನು ನೋಡುತ್ತಿರುವುದು ಇದೇ ಮೊದಲು. ನಗರದ ಗ್ರಾಹಕರಿಗೆ ಹಲಸಿನ ಪರಿಚಯ ಮಾಡಿಕೊಡಲು ದೇಶದ ವಿವಿಧ ನಗರಗಳಲ್ಲಿ ಹಲಸಿನ ಮೇಳಗಳನ್ನು ನಡೆಸುವಂತಾಗಲಿ ಎಂದು ಹಾರೈಸಿದರು.

ಫಲಿತಾಂಶ: ಹಲಸಿನ ಕೇಕ್, ಹಲಸಿನ ಹಲ್ವ, ಹಲಸಿನ ಲಡ್ಡು, ಹಲಸಿನ ಪಲಾವ್, ಹಲಸಿನ ಪಾಯಸ, ಹಲಸಿನ ಹೋಳಿಗೆ, ಹಲಸಿನ ಕಬಾಬ್, ಹಲಸಿನ ಬೀಜದ ಮಾಲ್ಟ್, ಹಲಸಿನ ದೋಸೆ, ಹಲಸಿನ ವಡೆ, ಹಲಸಿನ ಹಣ್ಣಿನ ಫ್ರೂಟ್ ಸಲಾಡ್, ಮತ್ತು ಪತ್ರೊಡೆ ಸೇರಿದಂತೆ ಹಲವಾರು ಬಗೆಯ ಹಲಸಿನ ರುಚಿಕರ ತಿಂಡಿ ತಿನಿಸುಗಳನ್ನು ಸ್ಪರ್ಧೆಗೆ ತರಲಾಗಿತ್ತು. ಮಂಗಳ ಪ್ರಕಾಶ್ (ಪ್ರಥಮ), ಕೆ.ಜಯಶ್ರೀ (ದ್ವಿತೀಯ) ಹಾಗೂ ಶ್ರೀದೇವಿ ಪಿ.ಹೆಗ್ಡೆ (ತೃತೀಯ) ಬಹುಮಾನ ತನ್ನದಾಗಿಸಿಕೊಂಡರು.

ಹಲಸಿನ ಹಣ್ಣಿನ ತೊಳೆ ತಿನ್ನುವ ಸ್ಪರ್ಧೆಯಲ್ಲಿ ತಮಿಳುನಾಡಿನಿಂದ ಹಲಸಿನ ಹಬ್ಬ ವೀಕ್ಷಿಸಲು ಬಂದಿದ್ದ ತಿರುಚಿಯ ಜೆ.ಮಣಿಕಂಠನ್ 1.51 ನಿಮಿಷದಲ್ಲಿ 15 ಹಲಸಿನ ತೊಳೆ ತಿಂದು ಪ್ರಥಮ ಸ್ಥಾನ ಗಳಿಸಿದರು. ವಿ.ಬಿ. ಗಿರೀಶ್ ದ್ವಿತೀಯ ಹಾಗೂ ಎಸ್.ಪಿ.ಮೋಹನ್ ಕುಮಾರ್ ತೃತೀಯ ಬಹುಮಾನ ಗಳಿಸಿದರು.

ಎಚ್ಚರ! ಥಿಂಕ್ ಬಿಫೋರ್ ಯು ಕ್ಲಿಕ್...!

ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಲು ಸೆನ್ ಠಾಣೆ ಪೊಲೀಸರಿಂದ ಬೈಸಿಕಲ್ ಜಾಥಾ

ಮೈಸೂರು, ಆ.7(ಪಿಎಂ)– ಎಚ್ಚರ! ಥಿಂಕ್ ಬಿಫೋರ್ ಯು ಕ್ಲಿಕ್...! ಈ ಶೀರ್ಷಿಕೆಯಡಿ ಆನ್‌ಲೈನ್ ವಂಚನೆಗಳ ವಿವಿಧ ಬಗೆಯ ಬಗ್ಗೆ ಸಂದೇಶವಿರುವ ಫಲಕಗಳು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದವು. ಸೈಬರ್ ಅಪರಾಧಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮೈಸೂರು ನಗರ ಸೈಬರ್ ಆರ್ಥಿಕ ಮತ್ತು ಮಾದಕದ್ರವ್ಯ ಅಪರಾಧ ಪೊಲೀಸ್ ಠಾಣೆ (ಸೆನ್ ಪೊಲೀಸ್ ಠಾಣೆ) ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬೈಸಿಕಲ್ ಜಾಥಾದಲ್ಲಿ ಈ ಸಂದೇಶಗಳು ನಾಗರಿಕರನ್ನು ಚಿಂತನೆಗೆ ಹಚ್ಚಿದವು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್, ಬೈಸಿಕಲ್ ಜಾಥಾಗೆ ಹಸಿರುನಿಶಾನೆ ತೋರಿದರು. ಸೆನ್ ಪೊಲೀಸ್ ಠಾಣೆ ಸಿಬ್ಬಂದಿ, ನಾಗರಿಕರು ಹಾಗೂ ಕೆಲ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡು ಜಾಗೃತಿ ಮೂಡಿಸಿದರು.

ಎಟಿಎಂ ಬಳಸುವಾಗ ಅಪರಿಚಿತರ ನೆರವು ಪಡೆಯಬೇಡಿ... ಬ್ಯಾಂಕಿನಲ್ಲಿ ವ್ಯವಹರಿಸುವಾಗ ಅಕ್ಕಪಕ್ಕ ಹಾಗೂ ಹಿಂಭಾಗ ಯಾರೂ ನಿಲ್ಲದಂತೆ ಎಚ್ಚರವಹಿಸಿ... ಆನ್‌ಲೈನ್‌ನಲ್ಲಿ ಕೆಲಸ ಕೊಡಿಸುವುದಾಗಿ ಹಣ ಹಾಕಿಸಿಕೊಂಡು ವಂಚಿಸುತ್ತಾರೆ ಎಚ್ಚರ... ಮೊಬೈಲ್‌ನಲ್ಲಿ ಕೆವೈಸಿ ಅಪ್ಡೇಟ್ ಎಂದು ಹೇಳಿ ಲಿಂಕ್ ಕಳುಹಿಸಿ, ಬ್ಯಾಂಕ್ ಖಾತೆಯ ಸಂಪೂರ್ಣ ಮಾಹಿತಿ ಪಡೆದು ವಂಚಿಸುತ್ತಾರೆ ಎಚ್ಚರ... ಎಂಬಿತ್ಯಾದಿ ಫಲಕಗಳು ಬೈಸಿಕಲ್‌ನಲ್ಲಿ ರಾರಾಜಿಸಿದವು.

ಜಾಥಾವು ಚಾಮರಾಜ ಒಡೆಯರ್ ವೃತ್ತ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ಕಾಲೇಜು ವೃತ್ತ, ಇರ್ವಿನ್ ರಸ್ತೆ, ನೆಹರು ವೃತ್ತ, ಅಶೋಕ ರಸ್ತೆ, ದೊಡ್ಡ ಗಡಿಯಾರ, ಚಾಮರಾಜ ಒಡೆಯರ್ ವೃತ್ತದ ಮೂಲಕ ಮತ್ತೆ ಕೆಆರ್ ವೃತ್ತ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಸಂಚರಿಸಿತು. ನಂತರ ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬೆಂಗಳೂರು–ನೀಲಗಿರಿ ರಸ್ತೆ, ಜಯಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣಕ್ಕೆ ಹಿಂತಿರುಗಿ ಅಂತ್ಯಗೊಂಡಿತು.

ನಿವೃತ್ತ ಎಸಿಪಿ ಧನಂಜಯ, ಸೆನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎನ್. ಜಯಕುಮಾರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಿದ್ದೇಶ್, ಅನಿಲ್‌ಕುಮಾರ್, ಮೈಸೂರು ವಿವಿಯ ಪ್ರಾಧ್ಯಾಪಕರಾದ ಪ್ರೊ.ಜಗದೀಶ್, ಪ್ರೊ.ಮನೋಹರ್ ಸೇರಿದಂತೆ ಠಾಣೆಯ ಸಿಬ್ಬಂದಿ, ನಾಗರಿಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಲು ಭಾನುವಾರ ಹಮ್ಮಿಕೊಂಡಿದ್ದ ಬೈಸಿಕಲ್ ಜಾಥಾಗೆ ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್, ಹಸಿರುನಿಶಾನೆ ತೋರಿದರು.

ಸೈಬರ್ ವಂಚನೆಗೊಳಗಾದಲ್ಲಿ ದೂರು ನೀಡಿ...

ಸಾರ್ವಜನಿಕರು ಸೈಬರ್ ವಂಚನೆಗೊಳಗಾದಲ್ಲಿ ಬೆಳಗ್ಗೆ 9ರಿಂದ ಸಂಜೆ 6ರವರೆಗೆ '1930'ಗೆ ಕರೆಮಾಡಿ ದೂರು ನೀಡಬಹುದು ಅಥವಾ 'ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್'ನಲ್ಲಿ ದೂರು ದಾಖಲಿಸಬಹುದು. ಇಲ್ಲವೇ ಹತ್ತಿರದ ಪೊಲೀಸ್ ಠಾಣೆ ಅಥವಾ ಸೆನ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಬಹುದು. ಮೈಸೂರು ನಗರ ಸೆನ್ ಪೊಲೀಸ್ ಠಾಣೆ ದೂ.ಸಂ. 0821–2418598 ಅಥವಾ ಮೊ.ಸಂ. 94808 02263ಗೆ ಕರೆ ಮಾಡಬಹುದು ಎಂದು ಮೈಸೂರು ನಗರ ಸೆನ್ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ: ಮತ್ತಿಬ್ಬರು ಆರೋಪಿಗಳ ಬಂಧನ!


ಬೆಂಗಳೂರು, ಆ.7– ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಮಂಗಳೂರು ಪೊಲೀಸರು ಬೆಳ್ಳಾರೆ ಗೌರಿಹೊಳೆ 22 ವರ್ಷದ ಅಬಿದ್ ಮತ್ತು 28 ವರ್ಷದ ನೌಫಾಲ್ ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತರು ಪ್ರಮುಖ ಆರೋಪಿ ಗಳಿಗೆ ನೆರವು ನೀಡಿದ ಆರೋಪದಡಿ ಬಂಧಿಸಲಾಗಿದೆ. ಬಂಧಿತ ಆರೋಪಿ ಬೆಳ್ಳಾರೆ ಗೌರಿಹೊಳೆ ನಿವಾಸಿ ಮೊಹಮ್ಮದ್ ಪುತ್ರ ನೌಫಾಲ್ ಹಾಗೂ ನಾವೂರು ನಿವಾಸಿ ಯಾಕೂಬ್ ಪುತ್ರ ಅಬಿದ್ ಎಂದು ತಿಳಿದುಬಂದಿದೆ. ಪ್ರಕರಣ ಸಂಬಂಧ ಇಲ್ಲಿಯವರೆಗೂ 6 ಮಂದಿ ಬಂಧಿಸಲಾಗಿದೆ.



ಈ ಹಿಂದೆ ಮಂಗಳೂರು ಪೊಲೀಸರು ಶಫೀಕ್, ಜಾಕೀರ್, ಸದ್ದಾಂ ಹಾಗೂ ಹ್ಯಾರಿಸ್ ಎಂಬಾತನನ್ನು ಬಂಧಿಸಿದ್ದಾರೆ. ಇನ್ನು ಹತ್ಯೆಯಲ್ಲಿ ನೇರವಾಗಿ ಭಾಗಿಯಾಗಿರುವ ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಈ ಪ್ರಕರಣದಲ್ಲಿ ಇಬ್ಬರು ಆರೋಪಿಗಳಾದ ಶಫೀಕ್ ಮತ್ತು ಜಾಕೀರ್ ಎಂಬುವರನ್ನು ಜುಲೈ 28ರಂದು ಬಂಧಿಸಲಾಗಿತ್ತು. ಈ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದ ನಂತರ ವಿಚಾರಣೆ ಮುಂದುವರೆಸಿದಾಗ ಸಿಕ್ಕ ಮತ್ತಷ್ಟು ಸಾಕ್ಷಿ ಆಧಾರಗಳೊಂದಿಗೆ ಸದ್ದಾಂ ಮತ್ತು ಹ್ಯಾರಿಸ್ ಅವರನ್ನು ಬಂಧಿಸಿದ್ದರು. ಇದೀಗ ಅಬಿದ್ ಮತ್ತು ನೌಫಾಲ್‌ನನ್ನು ಬಂಧಿಸಲಾಗಿದೆ. ಜುಲೈ 26ರಂದು ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ಬೈಕ್‌ನಲ್ಲಿ ಬಂದಿದ್ದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು.

ಮಹದೇವ್ ನಿಧನ




ಹುಣಸೂರು, ಆ.7– ತಾಲೂಕಿನ ಬಿಳಿಕೆರೆ ಹೋಬಳಿ, ಆಯರಹಳ್ಳಿಯ ಸೀನಶೆಟ್ಟಿ ಅವರ ಪುತ್ರ ಮಡಿವಾಳರ ಮಹದೇವ್(50) ಅವರು ಶನಿವಾರ ನಿಧನರಾದರು.

ಮೃತರು ಪತ್ನಿ ಲಕ್ಷ್ಮಿ, ಪುತ್ರ ಪ್ರಜ್ವಲ್, ಪುತ್ರಿ ಚೈತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದ ಸಾರ್ವಜನಿಕ ಹಿಂದೂ ಸ್ಮಶಾನದಲ್ಲಿ ಇಂದು ಬೆಳಗ್ಗೆ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

3 ದಿನಗಳ ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್‌ಗೆ ತೆರೆ

ಉದ್ಯಮ ಆರಂಭಿಸಲು ಎದುರಾಗುವ ಸಮಸ್ಯೆಗಳ ಬಗ್ಗೆ ಚರ್ಚೆ

ಉದ್ಯಮ ಆರಂಭಿಸುವುದು ಸುಲಭ, ಗ್ರಾಹಕರ ಸೆಳೆಯೋದು ಕಷ್ಟ



ವಿಶೇಷ ಯೋಜನೆಗಳ ಮೂಲಕ ತೀರ್ಪುಗಾರರ ಮನಸೆಳೆದ ವಿವಿಧ ಶಾಲೆಯ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು



ಮಹಿಳಾ ಉದ್ಯಮಿಗಳ ಸಮಿತಿಯು ಉದ್ಯಮಶೀಲತೆಯ ಬಗ್ಗೆ ಚರ್ಚೆ ನಡೆಸಿತು

ಮೂರು ದಿನಗಳಿಂದ ನಡೆದ ಉತ್ಸವದಲ್ಲಿ ಅನೇಕ ನವ ಉದ್ಯಮಿಗಳು ಭಾಗವಹಿಸಿದ್ದಾರೆ. ಇದು ಮೈಸೂರಿನ ಬೆಳವಣಿಗೆಗೂ ಸಹಕಾರಿಯಾಗಲಿದೆ. ಕೆಲ ಯೋಜನೆಗಳು ನಮ್ಮ ಮೈಸೂರಿನ ವಿಮಾನ ನಿಲ್ದಾಣಕ್ಕೆ ಅವಶ್ಯಕವಾಗಿದ್ದು, ಅವರ ಜೊತೆ ಈಗಾಗಲೇ ಮಾತುಕತೆ ನಡೆಸಿದ್ದೇನೆ. ಅವರಿಗೆ ವಿಮಾನ ನಿಲ್ದಾಣದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

-ಆರ್. ಮಂಜುನಾಥ್, ನಿರ್ದೇಶಕರು, ಮೈಸೂರು ವಿಮಾನ ನಿಲ್ದಾಣ

ಈ ಉತ್ಸವದಿಂದ ನವ ಉದ್ಯಮಿಗಳಿಗೆ ಬಹಳ ಉಪಯುಕ್ತವಾಗಿದೆ. ಈಗಾಗಲೇ ಉದ್ಯಮಿಗಳಿಗೆ ಸಹಕಾರಿಯಾಗುವ ಸಂಪರ್ಕ ವ್ಯವಸ್ಥೆಗಳಿದ್ದು, ಜನತೆ ಮುಂದಿನ ದಿನಗಳ ಉದ್ಯಮದ ಪೈಪೋಟಿಗೆ ಸಿದ್ಧರಾಗಬೇಕಿದೆ.

ಮಹೇಶ್ ಶಣೈ, ಉದ್ಯಮಿ

ಮೈಸೂರು, ಆ.7(ಜಿಎ)– ಮೈಸೂರಿನಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಮೈಸೂರಿನ ಜೆಸಿ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ 3 ದಿನಗಳ 'ಮೈಸೂರು ನವೋದ್ಯಮ ಉತ್ಸವ್' (ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್)ಕ್ಕೆ ಭಾನುವಾರ ತೆರೆ ಬಿದ್ದಿದೆ.

ಎಸ್‌ಜೆಸಿಇ ಸ್ಟೆಪ್, ಟಿಐಇ ಮೈಸೂರು, ಯಂಗ್ ಇಂಡಿಯನ್ಸ್, ಸಿಐಐ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಡಿಜಿಟಲ್, ಸ್ಟಾರ್ಟ್ ಅಪ್ ಇಂಡಿಯಾ ಮತ್ತು ಸ್ಟಾರ್ಟ್ ಅಪ್ ಕರ್ನಾಟಕದ ಸಹಯೋಗದಲ್ಲಿ 20ಕ್ಕೂ ಹೆಚ್ಚು ಹೂಡಿಕೆದಾರರು, ಮೆಂಟರ್‌ಗಳು, 25ಕ್ಕೂ ಹೆಚ್ಚು ಭಾಷಣಕಾರರ ಪ್ರೇರಣೆಯ ಮಾತು, ನೂರು ಮಳಿಗೆಗಳು ಮತ್ತು 15 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು, ಸಂಶೋಧಕರು, ಕೈಗಾರಿಕಾ ವೃತ್ತಿಪರರು ಭಾಗವಹಿಸುವ ಮೂಲಕ 'ಮೈಸೂರು ನವೋದ್ಯಮ ಉತ್ಸವ್ ಅಭೂತಪೂರ್ವ ಯಶಸ್ಸಿನೊಂದಿಗೆ ಇಂದು ಅದ್ದೂರಿ ಸಂಪನ್ನಗೊಂಡಿತು.

ವಿವಿಧ ಶಾಲೆಯ ಮಕ್ಕಳು ವ್ಯಾಪಾರ ಕ್ಷೇತ್ರದಲ್ಲಿ ಅನುಭವ ಪಡೆಯುವ ಸಲುವಾಗಿ ಮಾರ್ಕೆಟಿಂಗ್ ಸ್ಪರ್ಧೆಗಳಲ್ಲಿ ಸ್ಪರ್ಧಿಸಿದ್ದರು. ಮಕ್ಕಳು ಜನರೊಂದಿಗೆ ಸಂವಾದ ನಡೆಸುತ್ತಾ ಬಹಳ ಸಂತಸಪಟ್ಟರು ಹಾಗೂ ಆತ್ಮವಿಶ್ವಾಸ ಮತ್ತು ಉತ್ಸಾಹವನ್ನು ಹೊರ ಹಾಕಿದರು. ಕೆಲ ವಿದ್ಯಾರ್ಥಿಗಳು ತಮ್ಮ ಪರಿಕಲ್ಪನೆಯಲ್ಲಿ ತಾವು ರೂಪಿಸಿರುವ ಉದ್ಯಮದ ಯೋಜನೆಗಳನ್ನು ಪಿಪಿಟಿ ಮೂಲಕ ವಿವರಿಸಿ ತೀರ್ಪುಗಾರು ಮತ್ತು ಜನರ ಮೆಚ್ಚುಗೆಗೆ ಪಾತ್ರರಾದರು.

ಕಳೆದ ಎರಡು ದಿನಗಳ ಕಾಲ ನಡೆದಂತೆ ಇಂದು ಪ್ಯಾನಲ್ ಚರ್ಚೆ ನಡೆಸಲಾಯಿತು. ಅವುಗಳಲ್ಲಿ ಪ್ರಮುಖವಾಗಿ 'ಮೈಸೂರು ಸ್ಟಾರ್ಟ್ ಅಪ್ ದರ್ಬಾರ್' ಎಂಬ ವಿಷಯದ ಕುರಿತು ಉದ್ಯಮಿಗಳಾದ ಆದರ್ಶ ಸುಧೀಂದ್ರ ಕೃಪಾ ಸುಮಂತ್ ಮತ್ತು ಎಂ.ಎಸ್ ಅಕ್ಷರ ಕುಮಾರ್ ಪ್ಯಾನೆಲಿಸ್ಟ್‌ಗಳಾಗಿ ಭಾಗವಹಿಸಿ ಮೈಸೂರಿನಲ್ಲಿ ಉದ್ಯಮವನ್ನು ಆರಂಭಿಸಲು ಎದುರಾಗುವ ಸವಾಲುಗಳು ಮತ್ತು ಎಷ್ಟು ಸೂಕ್ತವಾಗಿದೆ ಎಂಬುದನ್ನು ಅದ್ಭುತವಾಗಿ ತಿಳಿಸಿಕೊಟ್ಟರು.

ಅಂತಿಮ ದಿನವಾದ ಇಂದು ಮೈಸೂರಿನ ಮಾತನಾಡಿ, ಕಳೆದ ಹತ್ತು ವರ್ಷದಲ್ಲಿ ಮೈಸೂರಿನಲ್ಲಿ ಬಹಳಷ್ಟು ಬದಲಾಣೆಗಳು ನಡೆದಿದ್ದು, ಉದ್ಯಮವನ್ನು ಮೈಸೂರಿನಲ್ಲಿ ಆರಂಭಿಸಲು ಈಗ ಸೂಕ್ತ ಸಮಯವಾಗಿದೆ ಎಂದ ಅವರು, ಉದ್ಯಮದಲ್ಲಿ ಸವಾಲುಗಳು ಬಹಳಷ್ಟಿದೆ. ಆದರೆ, ಮಹಿಳೆಯರಿಗೆ ಬೇರೆ ಪುರುಷರಿಗೆ ಬೇರೆ ಎಂದು ಪ್ರತ್ಯೇಕ ಸವಾಲುಗಳಿಲ್ಲ. ಉದ್ಯಮದಲ್ಲಿ ಗಂಡು ಹೆಣ್ಣು ಎಂಬ ತಾರತಮ್ಯವಿಲ್ಲ ಎಂದರು.

ಮೈಸೂರಿನಲ್ಲಿ ಉದ್ಯಮವನ್ನು ಆರಂಭಿಸುವುದು ಸುಲಭ. ಆದರೆ, ಗ್ರಾಹಕರನ್ನು ಸೆಳೆಯುವುದು ಕಷ್ಟಕರ ಸಂಗತಿಯಾಗಿದೆ ಎಂದು ಉದ್ಯಮಿ ಕೃಪಾ ಸುಮಂತ್ ಹೇಳಿದರು. ಉದ್ಯಮದ ಆರಂಭದಲ್ಲಿ ಈ ರೀತಿ ಅನುಭವ ನನಗೂ ಆಗಿದೆ. ನಾವು ನೀಡುವ ಉತ್ಪನ್ನಗಳು ಉತ್ತಮ ಗುಣಮಟ್ಟವನ್ನು ಹೊಂದಿದ್ದರೆ, ಗ್ರಾಹಕರು ಕೈ ಬಿಡುವುದಿಲ್ಲ. ಅಂತೆಯೇ ನಮ್ಮ ಸಂಸ್ಥೆಯಿಂದ ಉತ್ತಮ ಗುಣಮಟ್ಟದ ಒದಗಿಸಿದ್ದರ ಪರಿಣಾಮ ನಾನು ಉದ್ಯಮದಲ್ಲಿ ಹಿಂತಿರುಗಿ ನೋಡಿಲ್ಲ. ಯಾವುದೇ ಉದ್ಯಮ ಆರಂಭಿಸಲು ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ ಎಂದು ಸಲಹೆ ನೀಡಿದರು.

ಪ್ಯಾನೆಲಿಸ್ಟ್ ಆದರ್ಶ ಸುಧೀಂದ್ರ ಮಾತನಾಡಿ, ಮೈಸೂರು ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಕೇಂದ್ರವಾಗಿದ್ದು, ಎಲ್ಲಾ ಬಗೆಯ ಉದ್ಯಮಗಳನ್ನು ಆರಂಭಿಸಲು ಸೂಕ್ತ ಸ್ಥಳವಾಗಿದೆ ಎಂದರು.

ನಂತರ ಮಹಿಳಾ ಉದ್ಯಮಿಗಳ ಸಮಿತಿಯು ಉದ್ಯಮಶೀಲತೆಯ ಬಗ್ಗೆ ಚರ್ಚೆ ನಡೆಸಿತು. ಈ ಕಾರ್ಯಕ್ರಮದಲ್ಲಿ ಮಹಿಳಾ ಉದ್ಯಮಿಗಳಾದ ಸುಪ್ರಿಯಾ ಸಾಲ್ಯಾನ್, ಛಾಯಾ ನಂಜಪ್ಪ, ಚೈತ್ರ ಹರ್ಷ, ಶ್ರೀಲಕ್ಷ್ಮೀ ದೇಸಿ ರಾಜು ಪ್ಯಾನೆಲಿಸ್ಟ್‌ಗಳಾಗಿ ಮಹಿಳಾ ಉದ್ಯಮಿಗಳ ಉದ್ಯಮಶೀಲತೆಯ ಬಗ್ಗೆ ಕೆಲವು ಒಳನೋಟವುಳ್ಳ ಮತ್ತು ಆಸಕ್ತಿದಾಯಕ ಇಂದಿನ ಮಹಿಳೆಯರು ಕೆಲವು ಯಶಸ್ವಿ ವ್ಯಾಪಾರಗಳನ್ನು ನಡೆಸುವಲ್ಲಿ ಹೇಗೆ ಜವಾಬ್ದಾರಿ ವಹಿಸುತ್ತಿದ್ದಾರೆ. ಮೈಸೂರು ವೇದಿಕೆಯಾಗಿ ಮಹಿಳಾ ಉದ್ಯಮಿಗಳಿಗೆ ಛಾಪು ಮೂಡಿಸುವಲ್ಲಿ ಮತ್ತು ಬದಲಾವಣೆ ತರುವಲ್ಲಿ ಹೇಗೆ ಪ್ರೋತ್ಸಾಹಿಸುತ್ತಿದೆ ಎಂಬುದರ ಕುರಿತು ಅವರು ಮಾತನಾಡಿದರು.

ಉದ್ಯಮಿ ಶ್ರೀಲಕ್ಷ್ಮೀ ದೇಸಿರಾಜು ಮಾತನಾಡಿ, ಪುರುಷರಿಗಿಂತ ಮಹಿಳೆಯರೆ ಹೆಚ್ಚು ತಾಳ್ಮೆ ಮತ್ತು ಬಲವನ್ನು ಹೊಂದಿದ್ದಾರೆ. ಇದಕ್ಕೆ ಮುಖ್ಯ ಉದಾಹರಣೆ ದೇಶದ ಎಲ್ಲಾ ಭಾಗದಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡ ಎಂಬ ಸುದ್ದಿಗಳು ಕೇಳಿಬರುತ್ತವೆ. ಆದರೆ, ರೈತ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ಕೇಳಿರಲು ಸಾಧ್ಯವೇ ಇಲ್ಲ. ಏಕೆಂದರೆ ಮಹಿಳೆಯರಿಗೆ ಆತ್ಮಸ್ಥೈರ್ಯ ಹೆಚ್ಚಿದೆ ಎಂದರು.

ನಕ್ಕರೆ ಅದೇ ಸ್ವರ್ಗ

ಅಪ್ಪ : ಯಾಕೋ ಶಾಲೆಗೆ ಹೋಗಿಲ್ಲ?
ಮಗ : ನಿನ್ನೆ ನಮ್ಮನ್ನೆಲ್ಲಾ ತೂಕ ಮಾಡಿದ್ದಾರೆ..., ಇವತ್ತು ಮಾರಿಬಿಡ್ತಾರೇನೋ ಅಂತ ಹೋಗಿಲ್ಲ!

ಮೈಸೂರು ಮಿತ್ರ

ಸೋಮವಾರ, 8 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಪುರುಷ ಮೂರು ವಿಷಯಗಳಲ್ಲಿ ಸದಾ ತೃಪ್ತನಾಗಿರಬೇಕು. ಅವು ಹೆಂಡತಿ, ಊಟ, ಹಣ. ಹಾಗೆಯೇ ಮೂರು ವಿಷಯಗಳಲ್ಲಿ ಅತೃಪ್ತನಾಗಿರಬೇಕು–ವಿದ್ಯೆ, ತಪಸ್ಸು, ದಾನ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹುಲ್ಲಿನ ಬಣವೇಯಲ್ಲಿ ಸೂಜಿ ಹುಡುಕಿದಂತೆ.

ನಿಮ್ಮ ಪತ್ರಗಳು

ಕಾದಿದೆ ಗಂಡಾಂತರ!!!

ಮಾನ್ಯರೆ,

'ಭ್ರಷ್ಟ' ರಾಜಕಾರಣಿಗಳು ಮತ್ತು ಉನ್ನತ ಮಟ್ಟದ ಅಧಿಕಾರಿಗಳಿಂದ ದೇಶದ ಸಂಪತ್ತು ಕೆಲವೇ ಜನರಲ್ಲಿ ಶೇಖರಣೆಯಾಗಿ, ಬಡವರು ಮತ್ತು ನಿರ್ಗತಿಕರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದೆ. ಇದರಿಂದಾಗಿ ದೇಶದಲ್ಲಿ ಮುಂದೊಂದು ದಿನ ದ್ವೀಪ ರಾಷ್ಟ್ರ ಶ್ರೀಲಂಕಾದಂತೆ ಬಡವರ ಮತ್ತು ತಿನ್ನಲು ಆಹಾರವಿಲ್ಲದೆ ಬಳಲುತ್ತಿರುವವರ ಸಂಖ್ಯೆ ಹೆಚ್ಚಾಗಿ ದಂಗೆಗಳು ನಮ್ಮ ರಾಷ್ಟ್ರ ಭಾರತದಲ್ಲಿಯೂ ಸಂಭವಿಸಬಹುದು. ಇಂತಹ ದಂಗೆಗಳು ಆಗಬಾರದು ಎಂದು ಬಯಸುವುದಾದರೆ, ಭ್ರಷ್ಟ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳು ಎಚ್ಚೆತ್ತು ತಮ್ಮಲ್ಲಿರುವ ಭ್ರಷ್ಟತನ ಮತ್ತು ಲಂಚಾವತಾರವನ್ನು ಬಿಟ್ಟು ಒಳ್ಳೆಯತನವನ್ನು ಬೆಳೆಸಿಕೊಳ್ಳುವುದರೊಂದಿಗೆ ಜನಪರ ಕೆಲಸ ಮಾಡಬೇಕು. ಇಲ್ಲದಿ ದ್ದರೆ, ಭ್ರಷ್ಟ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಖಂಡಿತ ಬಡ ಜನರೇ ಬುದ್ಧಿ ಕಲಿಸುತ್ತಾರೆ.

ಈಗ್ಗೆ 75 ವರ್ಷಗಳಿಂದ ಆಳಿದ ಸರ್ಕಾರಗಳು ಭ್ರಷ್ಟ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಒಳ್ಳೆಯ ಬುದ್ಧಿ ಕಲಿಸಲಾಗಲಿಲ್ಲ. ಆದ್ದರಿಂದ ಶ್ರೀಲಂಕಾದಲ್ಲಿ ಸರ್ಕಾರಗಳು ಮಾಡಲಾಗದ ಕೆಲಸಗಳನ್ನು ಜನರೇ ತಾವೇ ಕೈಗೆ ತೆಗೆದುಕೊಂಡು, ಭ್ರಷ್ಟರನ್ನು ಮತ್ತು ಲಂಚ ಕೇಳುವ ಅಧಿಕಾರಿಗಳನ್ನು ಬಗ್ಗು ಬಡಿದು ಬುದ್ಧಿ ಕಲಿಸುತ್ತಿದ್ದಾರೆ. ಎಚ್ಚರ, ಯಾರು ಅಧಿಕವಾಗಿ ದೇಶದ ಸಂಪತ್ತನ್ನು ಲೂಟಿ ಮಾಡಿ ಲೆಕ್ಕವಿಲ್ಲದಷ್ಟು ಹಣವನ್ನು ಶೇಖರಿಸಿ ಇಟ್ಟಿದ್ದಾರೋ, ಅವರುಗಳು ತಾವಾಗಿಯೇ ಮುಂದೆ ಬಂದು ತಮ್ಮಲ್ಲಿರುವ ಹಣವನ್ನು ನಿರ್ಗತಿಕ ಮತ್ತು ಬಡವರ ಒಳಿತಿಗಾಗಿ ಖರ್ಚು ಮಾಡಬೇಕು. ಇದರಿಂದ ಭ್ರಷ್ಟ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಒಳ್ಳೆಯ ಹೆಸರು ಬರುತ್ತದೆ. ಹಾಗೆ ಮಾಡದಿದ್ದರೆ ಶ್ರೀಲಂಕಾದಲ್ಲಿ ಆಗುತ್ತಿರುವಂತೆ ಹಿಂಸೆ ಪಡಬೇಕಾಗುತ್ತದೆ. ಇಲ್ಲವೇ ಶ್ರೀಲಂಕಾದ ಪ್ರಧಾನಿ, ಅಧ್ಯಕ್ಷರು ದೇಶ ಬಿಟ್ಟು ಪಲಾಯನ ಮಾಡಿದಂತೆ ಇಲ್ಲೂ ಆಗಬಹುದು. ಶ್ರೀಲಂಕಾದಲ್ಲಿ ಆಗುತ್ತಿರುವ ಪರಿಸ್ಥಿತಿ ನಮ್ಮ ಭ್ರಷ್ಟ ರಾಜಕಾರಣಿಗೂ ಮತ್ತು ಅಧಿಕಾರಿಗಳಿಗೂ ಆಗಬೇಕಾ? ಬೇಡ, ಅವರುಗಳು ಎಚ್ಚೆತ್ತುಕೊಂಡು ತಮ್ಮ ಹೀನ ಬುದ್ಧಿಯನ್ನು ಬಿಟ್ಟು ಭಾರತದಲ್ಲಿ ಬಳಲುತ್ತಿರುವ ಬಡವರ, ನಿರ್ಗತಿಕರ ಸ್ಥಿತಿಯನ್ನು ಉತ್ತಮ ಪಡಿಸಲು ಕಾಯ, ವಾಚಾ, ಮನಸಾ ಪ್ರಯತ್ನಿಸಲಿ... ಇದು ನನ್ನ ಮನದಾಳದ ಅನಿಸಿಕೆ.

– ಸುಗುಣಾರಾಧ್ಯ, ರಾಮಕೃಷ್ಣನಗರ, ಮೈಸೂರು

ಡ್ರೈವರ್ ಕಂ ಕಂಡಕ್ಟರ್ ಅವ್ಯವಸ್ಥೆ



ಮಾನ್ಯರೆ,

ರಾಜ್ಯದ ಪ್ರಮುಖ ನಗರ ಸಾರಿಗೆ ಬಸ್‌ಗಳಲ್ಲಿ ಡ್ರೈವರ್ ಕಂ ಕಂಡಕ್ಟರ್ ನೇಮಕ ಮಾಡಿ ಬಸ್‌ಗಳನ್ನು ಓಡಿಸುತ್ತಿರುವುದು ಸರಿಯಷ್ಟೆ, ಆದರೆ ಈ ವ್ಯವಸ್ಥೆಯಿಂದ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚಾಗಿದೆ. ಏಕೆಂದರೆ ಚಾಲಕರು ಟಿಕೆಟ್ ವಿತರಿಸುತ್ತಲೇ ಬಸ್ ಚಾಲನೆ ಮಾಡುತ್ತಿರುತ್ತಾರೆ. ಕೆಲವು ವೇಳೆ ಟಿಕೆಟ್ ವಿತರಿಸುವವರೆಗೆ ಬಸ್ ನಿಲ್ಲಿಸಿಕೊಂಡೇ ಇರುವುದರಿಂದ ಹಿಂಬದಿಯ ವಾಹನಗಳು ಟ್ರಾಫಿಕ್ ಕಿರಿಕಿರಿಯನ್ನು ಅನುಭವಿಸುವುದು ಸಾಮಾನ್ಯವಾಗಿದೆ.

ಪ್ರಯಾಣಿಕರಿಗೆ ಇದರಿಂದ ಅದರಲ್ಲೂ ವಿದ್ಯಾರ್ಥಿಗಳಿಗೆ, ನೌಕರರಿಗೆ, ತುರ್ತಾಗಿ ತೆರಳಬೇಕಾಗಿರುವವರಿಗೆ ತುಂಬಾ ವಿಳಂಬವಾಗುವ ಮೂಲಕ ತೊಂದರೆಯಾಗುತ್ತಿದೆ.

ಚಾಲಕನು ತುಂಬಾ ಸಾಮಾನ್ಯ ಸಮಸ್ಯೆಯಾದ ಚಿಲ್ಲರೆ ಸಮಸ್ಯೆಯಿಂದ ಕಸಿವಿಸಿಗೊಂಡು ನಿರ್ಲಕ್ಷ್ಯದಿಂದ ಚಾಲನೆ ಮಾಡುವ ಸಂಭವ ಹೆಚ್ಚಾಗಿರುತ್ತದೆ. ಈ ಅವ್ಯವಸ್ಥೆಯಿಂದ ಚಾಲಕರ ಏಕಾಗ್ರತೆ ಉಲ್ಲಂಘನೆಯಾದಂತಾಗಿದೆ. ಹಾಗೂ ಚಾಲಕನು ಹಿಂಬದಿಯ ವಾಹನಗಳ ಒತ್ತಡದಿಂದ ಬಸ್‌ನ ಡೋರ್ ಹಾಕದೆ ಬಸ್ ಚಾಲನೆ ಮಾಡುತ್ತಿರುವುದು ಕಂಡುಬರುತ್ತಿದೆ. ಆದುದರಿಂದ ಈ ವ್ಯವಸ್ಥೆಯನ್ನು ರದ್ದುಪಡಿಸಿ ಅಮೂಲ್ಯವಾದ ಪ್ರಯಾಣಿಕರ ಜೀವಗಳನ್ನು ಕಾಪಾಡುವಂತಾಗಲಿ ಎಂದು ಆಶಿಸೋಣ.

– ಅ.ರಾ. ನಂದೀಶ್, ಸಹಾಯಕ ಪ್ರಾಧ್ಯಾಪಕ, ಮೈಸೂರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅರ್ಥಪೂರ್ಣ ಆಚರಣೆ


ಮಾನ್ಯರೆ,

ಭಾರತದ 75ನೇ ಸ್ವಾತಂತ್ರ್ಯವನ್ನು ಸಂಭ್ರಮ ಸಡಗರದಿಂದ ಆಚರಿಸಲು ಕರೆ ನೀಡಿರುವ ಕೇಂದ್ರ ಸರ್ಕಾರವು ದೇಶದ ಜನರಲ್ಲಿ ದೇಶಭಕ್ತಿಯನ್ನು ಹೆಚ್ಚಿಸಲು ಅನೇಕ ರೀತಿಯ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಈ ಅಭಿಯಾನದ ಅಂಗವಾಗಿ ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿರುವ ತಮ್ಮ ತಮ್ಮ ಖಾತೆಗಳ ಪ್ರೊಫೈಲ್‌ನಲ್ಲಿ ರಾಷ್ಟ್ರಧ್ವಜ ಫೋಟೋ ಹಾಕುವ ಮುಖಾಂತರ ನಾವೆಲ್ಲರೂ ಗೌರವವನ್ನು ಸಲ್ಲಿಸೋಣ ಎಂದು ಮೋದಿಜಿ ಅವರೇ ಕರೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲೂ ಭರ್ಜರಿ ತಯಾರಿಗಳನ್ನು ನಡೆಸಲಾಗುತ್ತಿದೆ.

ಇದರ ಅಂಗವಾಗಿ ರಾಷ್ಟ್ರೀಯ ಹಬ್ಬದಂತೆ ಆಚರಣೆ ಮಾಡಲು ಹರ್ ಘರ್ ತಿರಂಗ (ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ)ವನ್ನು ಆಗಸ್ಟ್ 13 ರಿಂದ 15ರವರೆಗೆ ಹಾರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಇಷ್ಟೇ ಅಲ್ಲದೆ ಸೈಕಲ್, ಬೈಕ್ ಜಾಥಾ, ರೈತರ ಎತ್ತಿನ ಗಾಡಿಗಳಿಗೆ ವಿಶೇಷವಾಗಿ ಅಲಂಕೃತಗೊಂಡು ಬಂಡಿಯಾತ್ರೆಯ ಮುಖಾಂತರ ರಸ್ತೆಗೆ ಇಳಿಸುವುದು, ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿ ಹೋರಾಡಿದ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವ ಇನ್ನೂ ಅನೇಕ ಮಹನೀಯರ ಭಾವಚಿತ್ರಗಳನ್ನು ಮೆರವಣಿಗೆ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುವುದು ಉತ್ತಮ ಕಾರ್ಯವಾಗಿದೆ.

ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಹುಟ್ಟಿದ ಹಬ್ಬವನ್ನು ಅದ್ಧೂರಿಯಾಗಿ ಆಚರಿಸಿಕೊಳ್ಳುವ ಇಂದಿನ ದಿನಗಳಲ್ಲಿ ದೇಶದಾದ್ಯಂತ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಹಬ್ಬದ ರೀತಿಯಲ್ಲಿ ಆಚರಿಸುತ್ತಿರುವುದು ದೇಶಭಕ್ತಿಗೆ ಹಿಡಿದ ಕನ್ನಡಿಯಾಗಿದೆ, ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಅರ್ಥಪೂರ್ಣ ಮತ್ತು ಶ್ಲಾಘನೀಯ ಕಾರ್ಯವಾಗಿವೆ.

– ಪರಶಿವಮೂರ್ತಿ ಎನ್.ಪಿ, ಶಿಕ್ಷಕರು, ನಂಜೀಪುರ, ಸರಗೂರು ತಾಲೂಕು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಮನಸ್ಸು ಮಲಿನಗೊಳ್ಳಬಾರದು!!

ನಾವು ಹಲವು ಬಗೆಯ ಮಾಲಿನ್ಯಗಳ ಬಗ್ಗೆ ಕೇಳಿದ್ದೇವೆ. ಈ ಹಿಂದೆ ಇಂತಹ ಮಾಲಿನ್ಯದ ಬಗ್ಗೆ ನಾವು ಕೇಳಿರಲಿಲ್ಲ. ಆದರೆ ನಮ್ಮ ನಾಗರಿಕತೆ ಬೆಳೆದಂತೆ ವಿವಿಧ ಮಾಲಿನ್ಯಗಳ ಹೆಸರು ಕೇಳುತ್ತಿದ್ದೇವೆ. ಅದರಲ್ಲಿ ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದಮಾಲಿನ್ಯ ಇತ್ಯಾದಿ ಪದಗಳು ಸೇರ್ಪಡೆಯಾಗುತ್ತಿವೆ. ಇದೆಲ್ಲಾ ಪ್ರಕೃತಿ ನೀಡಿದ ಮಾಲಿನ್ಯವಲ್ಲ, ಬದಲಿಗೆ ನಾವೇ ಸೃಷ್ಟಿಸಿಕೊಳ್ಳುತ್ತಿರುವ ಮಾಲಿನ್ಯಗಳು. ಯಾವಾಗ ಮನುಷ್ಯ ಬೇಯಿಸಿ ತಿನ್ನುವುದನ್ನು ಕಲಿತನೋ ಆಗಿನಿಂದಲೇ ಮಾಲಿನ್ಯಗಳು ಆರಂಭವಾಯಿತು ಎನ್ನಬಹುದು. ಆದರೆ ಈ ಹಿಂದೆ ಅವು ಮಾಲಿನ್ಯದ ಪಟ್ಟಿಯಲ್ಲಿರಲಿಲ್ಲ. ಉದಾಹರಣೆಗೆ ಬೇಯಿಸಲು ಬಳಸುವ ಕಟ್ಟಿಗೆ. ಕಟ್ಟಿಗೆಯಿಂದ ಬರುವ ಹೊಗೆ ಪ್ರಾಕೃತಿಕವಾಗಿ ಉಪಕಾರಿಯೇ. ಆದರೆ ಇತ್ತೀಚಿನ ವಾಹನಗಳಿಂದ ಬರುವ ಹೊಗೆ ಪರಿಸರ ಮಾಲಿನ್ಯ ಎನಿಸಿಕೊಂಡಿದೆ. ಪ್ರಕೃತಿ ಒಂದಷ್ಟು ಸಮಯ ತನ್ನ ಮೇಲಿನ ದೌರ್ಜನ್ಯಗಳನ್ನು ಸಹಿಸಿಕೊಳ್ಳುತ್ತದೆ. ಅದಕ್ಕೂ ಒಂದು ಮಿತಿ ಇದೆ. ಅದು ಮೀರಿದಾಗ ಅದು ಅಸಹಾಯಕವಾಗುತ್ತದೆ. ಆದರೂ ಅದು ನಮಗೆ ಬೇರೆ ಬೇರೆ ರೀತಿಯಲ್ಲಿ ಒಂದಷ್ಟು ಎಚ್ಚರಿಕೆಯನ್ನು ನೀಡುತ್ತದೆಯಾದರೂ, ಹೊಸ ಹೊಸ ಅನ್ವೇಷಣೆಯಲ್ಲಿರುವ ನಮಗೆ ಅದು ಅರಿವಾಗುವುದಿಲ್ಲ. ನಮ್ಮ ಪ್ರಕೃತಿ ದುರ್ಬಲವಾದಂತೆ ಹೊಸ ಹೊಸ ಮಾಲಿನ್ಯಗಳು ಸೇರಿಕೊಳ್ಳುತ್ತಿವೆ. ಆದರೆ ನಾವು ಅದನ್ನು ನಿರ್ಲಕ್ಷಿಸಿ ಬವಣೆ ಪಡುತ್ತಿದ್ದೇವೆ.

ಈ ಹಿಂದೆ ಕೆರೆ–ಕಟ್ಟೆಗಳು ಹಾಗೂ ನದಿಗಳಿಂದ ಜನರು ನೀರು ಕುಡಿದು ಆರೋಗ್ಯವಾಗಿದ್ದರು. ಆದರೆ ಇಂದು ಜಲಮಾಲಿನ್ಯದಿಂದಾಗಿ ಅಂತಹ ನೀರು ಕುಡಿದರೆ ವಿವಿಧ ರೀತಿಯ ಖಾಯಿಲೆಗಳು ಬರುತ್ತವೆ ಎಂಬುದು ಸಾಬೀತಾಗುತ್ತಿದೆ. ಇತ್ತೀಚೆಗೆ ಸಂಶೋಧಿಸಿದ ಹಾಗೆ ಕೊಳಾಯಿ ನೀರನ್ನು (ಅಂದರೆ ನದಿಯಿಂದ ಬರುವ ನೀರು) ಕುಡಿದರೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಲಾಗುತ್ತಿದೆ. ಆ ನೀರಿನಲ್ಲಿ (ಅದನ್ನು ಸಂಸ್ಕರಿಸಿದ್ದರೂ ಸಹಾ) ಮಣ್ಣಿನ ಅಂಶ ಇರುತ್ತದೆ. ಇದನ್ನು ಸೇವಿಸಿದಾಗ ನಿಧಾನವಾಗಿ ನಮ್ಮ ಆರೋಗ್ಯ ಹಾಳಾಗುತ್ತಾ ಹೋಗುತ್ತದೆ. ಈ ಕಾರಣದಿಂದಾಗಿಯೆ ಇಂದು ಈ ಹಿಂದೆ ಕೇಳಿರದ ಖಾಯಿಲೆಗಳು ಮನುಷ್ಯನನ್ನು ಆವರಿಸುತ್ತಿದೆ ಎಂಬುದು ಸಾಬೀತಾಗುತ್ತಿದೆ.

ಕಾರ್ಖಾನೆಗಳಿಗೆ ನೀರು ಬೇಕು, ನೀರು ಸುಲಭವಾಗಿ ಸಿಗುವುದು ನದಿಗಳಿಂದ. ಆದ್ದರಿಂದ ಅವು ನದಿಯಿಂದ ನೀರು ಪಡೆಯುತ್ತವೆ. ನದಿಯಿಂದ ದೂರದಲ್ಲಿ ಕಾರ್ಖಾನೆ ಸ್ಥಾಪಿಸಿದರೆ ಸಾಗಾಣಿಕೆ ವೆಚ್ಚ ಜಾಸ್ತಿಯಾಗುತ್ತದೆ ಎಂದು ಅವು ನದಿಗಳ ದಡದಲ್ಲೇ ಕಾರ್ಖಾನೆ ಪ್ರಾರಂಭಿಸುತ್ತವೆ. ಅವು ನದಿಯಿಂದ ನೇರವಾಗಿ ನೀರು ಪಡೆಯುತ್ತವೆ. ಆದರೆ ಉಪಯೋಗಿಸಿದ ನೀರನ್ನು ಹೇಗೆ ಸಂಸ್ಕರಿಸಬೇಕು? ಎಂದು ಅವು ಯೋಚಿಸಿರುವುದಿಲ್ಲ. ಕಾರ್ಖಾನೆಯಲ್ಲಿ ಉತ್ಪನ್ನ ಆರಂಭವಾಗುತ್ತಿದ್ದಂತೆಯೇ ಈ ಸಮಸ್ಯೆ ಎದುರಾಗುತ್ತದೆ. ಆಗ ಕಾಣುವ ಸುಲಭ ಪರಿಹಾರ ಎಂದರೆ ಆ ನೀರನ್ನು ಸಂಸ್ಕರಿಸದೆ ಹಾಗೇ ಹೊರಗೆ ಬಿಡುವುದು. ನೀರಿನ ಶಕ್ತಿ ಎಂದರೆ ಅದನ್ನು ಹರಿಯಬಿಟ್ಟರೆ ಅದು ತನ್ನ ಮಾರ್ಗವನ್ನು ತಾನೇ ಕಂಡುಕೊಳ್ಳುತ್ತದೆ. ನೀರಿನ ಗುಣ ಹಳ್ಳದೆಡೆಗೆ ಹರಿಯುವುದು. ಹಾಗಾಗಿ ಕೊನೆಗೆ ಅದು ಸೇರುವುದು ನದಿಯನ್ನೇ. ನದಿ ಸೇರಿದಾಗ ಜಲ ಮಾಲಿನ್ಯವಾಗುತ್ತದೆ. ಸಂಸ್ಕರಿಸಿದ ನೀರನ್ನು ವ್ಯವಸಾಯಕ್ಕಾದರೂ ಬಳಸಬಹುದು. ಆದರೆ ಕಾರ್ಖಾನೆಗಳು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಕಾರ್ಖಾನೆಗಳಿಗೆ ಅನುಮತಿ ನೀಡುವವರೂ ನೀರನ್ನು ಸಂಸ್ಕರಿಸಲಾಗುತ್ತದೆಯೇ? ಹಾಗಿದ್ದರೆ ಅದು ಹೇಗೆ? ಎಂಬ ಪ್ರಶ್ನೆ ಕೇಳುವುದಿಲ್ಲ. ಬದಲಿಗೆ ಕಣ್ಣುಮುಚ್ಚಿ ಅನುಮತಿ ನೀಡುತ್ತಾರೆ. ಕೊನೆಗೆ ಸಂಸ್ಕರಿಸದ ನೀರು ನದಿ ಸೇರುತ್ತದೆ. ಅಲ್ಪಸ್ವಲ್ಪ ಅದನ್ನು ಸಂಸ್ಕರಿಸಿ ಜನರಿಗೆ ಕೊಳಾಯಿ ಮೂಲಕ ಕುಡಿಯುವ ನೀರೆಂದು ಸರಬರಾಜು ಮಾಡಲಾಗುತ್ತದೆ. ಅದನ್ನು ಕುಡಿದವರು ಕ್ರಮೇಣ ಯಾವುದ್ಯಾವುದೋ ಖಾಯಿಲೆಗಳಿಗೆ ತುತ್ತಾಗುತ್ತಾರೆ. ಆದರೆ ಇದರ ಹೊಣೆಯನ್ನು ಆ ಕಾರ್ಖಾನೆ ಹೊರುವುದಿಲ್ಲ. ಅನುಮತಿ ನೀಡಿದವರೂ ಹೊರುವುದಿಲ್ಲ. ಇದು ಜಲಮಾಲಿನ್ಯದ ಉದಾಹರಣೆ.

ಪರಿಸರ ಮಾಲಿನ್ಯಕ್ಕೆ ಮುಖ್ಯವಾದ ಕಾರಣ ನಮ್ಮ ದುರಾಸೆ ಎನ್ನಬಹುದು. ಜೊತೆಗೆ ಏರುತ್ತಿರುವ ಜನಸಂಖ್ಯೆ, ವೈಭವದ ಜೀವನದ ಹಂಬಲಗಳೂ ಪರಿಸರ ಹಾಳುಮಾಡುತ್ತಿವೆ ಎನ್ನಬಹುದು. ಮನುಷ್ಯನಿಗೆ ಅವಶ್ಯಕವಾದದ್ದು ಶುದ್ಧನೀರು, ಶುದ್ಧಗಾಳಿ, ಶುದ್ಧಭೂಮಿ. ಆದರೆ ಇಂದು ಇವುಗಳೆಲ್ಲಾ ಕಲುಷಿತಗೊಳ್ಳುತ್ತಿವೆ. ಈ ಬಗ್ಗೆ ಪರಿಸರ ಪ್ರೇಮಿಗಳು ಒಂದಷ್ಟು ಪ್ರತಿಭಟನೆ ಮಾಡುತ್ತಾರಾದರೂ ಸರ್ಕಾರಗಳು ಅದನ್ನು ಪರಿಗಣಿಸುವುದಿಲ್ಲ ಅಥವಾ ನಿರ್ಲಕ್ಷಿಸಿ ಜಾಣ್ಮೆ ತೋರುತ್ತವೆ.

ನಮ್ಮ ವಾಯು ಮಾಲಿನ್ಯ ಮತ್ತೊಂದು ಬಗೆಯದು. ಮನುಷ್ಯನ ಬದುಕಿಗೆ ಶುದ್ಧಗಾಳಿ ಅತ್ಯಂತ ಅವಶ್ಯಕ. ನೈಸರ್ಗಿಕವಾಗಿ ಉಂಟಾಗುವ ಕಾಡ್ಗಿಚ್ಚು ಅಥವಾ ಜ್ವಾಲಾಮುಖಿಗಳು ವಾಯುಮಾಲಿನ್ಯಕ್ಕೆ ಕಾರಣವಾಗುತ್ತವೆಯಾದರೂ ಅದು ಅಷ್ಟು ದೊಡ್ಡ ಪ್ರಮಾಣದಲ್ಲಿರುವುದಿಲ್ಲ. ಆದರೆ ಮನುಷ್ಯ ನಿರ್ಮಿತ ಕೈಗಾರಿಕೆಗಳು ಹಾಗೂ ವಾಹನಗಳು ಹೊರಸೂಸುವ ಹೊಗೆ ವಿಷಪೂರಿತವಾದದ್ದು. ನಮಗೆ ಭೋಪಾಲ್ ದುರ್ಘಟನೆ ನೆನಪಿದೆ. ಆ ಕಾರ್ಖಾನೆಯ ಗಾಳಿ ಎಷ್ಟು ವಿಷಪೂರಿತವಾಗಿತ್ತು ಎಂದರೆ ಘಟನೆ ನಡೆದಿದ್ದು 1984ರ ಡಿಸೆಂಬರ್‌ನಲ್ಲಿ, ಆದರೂ ಇಂದಿಗೂ ಅಂದರೆ 38 ವರ್ಷಗಳ ನಂತರವೂ, ಅಲ್ಲಿ ಜನಿಸುವ ಮಕ್ಕಳು ಅನಾರೋಗ್ಯದಿಂದ ಜನಿಸುತ್ತವೆ ಎಂದು ಹೇಳಲಾಗುತ್ತದೆ.

> “ ಪ್ರತಿಯೊಬ್ಬರಿಗೂ ಅವರದ್ದೇ ಆದ ಚಿಂತನಾಲಹರಿ, ಜೀವನ ವಿಧಾನ ಇರುತ್ತದೆ. ಅದರಂತೆ ನಡೆದುಕೊಂಡು ಹೋದರೆ ಜೀವನದಲ್ಲಿ ಯಾವ ಲೋಪವೂ ಆಗುವುದಿಲ್ಲ. ಆದರೆ ಮನಸ್ಸು ದುರ್ಬಲವಾದಾಗ ಅದರ ಪರಿಣಾಮವನ್ನು ಮಾತ್ರ ನಾವೇ ಎದುರಿಸಬೇಕಾಗುತ್ತದೆ. ಮನಸ್ಸು ದುರ್ಬಲ ಎಂದರೆ ನಾವು ನಂಬಿಕೊಂಡಿದ್ದರ ಬಗ್ಗೆ ನಾವೇ ಅನುಮಾನಪಡುವುದು ಹಾಗೂ ಅದನ್ನು ಬದಲಿಸಿಕೊಳ್ಳಲು ಪ್ರಯತ್ನಿಸುವುದು ಎಂದರ್ಥ. ಇದು ದುರ್ಬಲ ಮನಸ್ಸಿನ ದ್ಯೋತಕ.

ನಮ್ಮ ಸಮಾಜದಲ್ಲಿ ಇಂದು ಆಧುನಿಕತೆಯ ಧಾವಂತದಲ್ಲಿ ಜನರು ಹೆಚ್ಚು ಹೆಚ್ಚು ವಾಹನ ಬಳಸುತ್ತಾರೆ. ಅನೇಕ ಸಲ ಅಗತ್ಯವಿಲ್ಲದಿದ್ದರೂ ವಾಹನದ ಬಳಕೆಯಾಗುತ್ತದೆ. ಈ ವಾಹನಗಳಿಂದ ಬರುವುದು ಇಂಗಾಲದ ಮಾನಾಕ್ಸೈಡ್. ಇದು ಆರೋಗ್ಯಕ್ಕೆ ಬಹಳ ಹಾನಿಕರವಾದದ್ದು. ಆದರೆ ಈವರೆವಿಗೆ ನಾವು ವಾಹನಗಳಿಗೆ ಪೆಟ್ರೋಲ್, ಡೀಸಲ್ ಬಿಟ್ಟು ಬದಲಿ ಇಂಧನದ ವ್ಯವಸ್ಥೆಯ ಬಗ್ಗೆ ಯೋಚಿಸಲಿಲ್ಲ. ಇದರಿಂದಾಗಿ ದಿನಗಳೆದಂತೆ ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಿದ್ದು, ಪರಿಸರದ ಮೇಲೆ ಬಹಳ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಇತ್ತೀಚೆಗೆ ಎಲೆಕ್ಟ್ರಿಕ್ ವಾಹನಗಳು ಬರುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ ಎಂದು ಹೇಳಬಹುದು. ಹೀಗೆ ಹಲವು ಮಾಲಿನ್ಯಗಳು ಮಾನವ ನಿರ್ಮಿತವಾಗಿ ಮಾನವನ ಅಸ್ತಿತ್ವಕ್ಕೇ ಧಕ್ಕೆ ತರುವಂತಾಗಿರುವುದು ವಿಪರ್ಯಾಸ. ಇದನ್ನು ಪ್ರಕೃತಿ ಸಹಿಸಿಕೊಳ್ಳದು ಎಂಬುದಕ್ಕೆ ಇತ್ತೀಚಿನ ಅಕಾಲಿಕ ಮಳೆ ಉದಾಹರಣೆಯಾಗುತ್ತದೆ. ನೆಲದ ದುರಾಸೆಯಲ್ಲಿ ನೀರು ಹರಿಯದಂತೆ ತಡೆದು ಕೊನೆಗೆ ನೀರು ಮನೆಗೆ ನುಗ್ಗಿ ಹಾನಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ.

ಆದರೆ ಈಗ ಪ್ರಸ್ತಾಪಿಸುತ್ತಿರುವುದು ಮನುಷ್ಯನ ಮನಸ್ಸಿನ ಮಾಲಿನ್ಯದ ಬಗ್ಗೆ. ಇದೂ ಸ್ವಯಂಕೃತ ಅಪರಾಧದ ರೀತಿಯದು. ಪ್ರತಿಯೊಬ್ಬರಿಗೂ ಅವರದ್ದೇ ಆದ ಚಿಂತನಾಲಹರಿ, ಜೀವನ ವಿಧಾನ ಇರುತ್ತದೆ. ಅದರಂತೆ ನಡೆದುಕೊಂಡು ಹೋದರೆ ಜೀವನದಲ್ಲಿ ಯಾವ ಲೋಪವೂ ಆಗುವುದಿಲ್ಲ. ಆದರೆ ಮನಸ್ಸು ದುರ್ಬಲವಾದಾಗ ಅದರ ಪರಿಣಾಮವನ್ನು ಮಾತ್ರ ನಾವೇ ಎದುರಿಸಬೇಕಾಗುತ್ತದೆ. ಮನಸ್ಸು ದುರ್ಬಲ ಎಂದರೆ ನಾವು ನಂಬಿಕೊಂಡಿದ್ದರ ಬಗ್ಗೆ ನಾವೇ ಅನುಮಾನಪಡುವುದು ಹಾಗೂ ಅದನ್ನು ಬದಲಿಸಿಕೊಳ್ಳಲು ಪ್ರಯತ್ನಿಸುವುದು ಎಂದರ್ಥ. ಇದು ದುರ್ಬಲ ಮನಸ್ಸಿನ ದ್ಯೋತಕ. ಹಿಂದೆ ಓದಿದ್ದ ಒಂದೆರಡು ಸಣ್ಣ ಕಥೆಗಳು ನೆನಪಾಗುತ್ತವೆ.

"ಒಬ್ಬಳು ತನ್ನ ಸ್ನೇಹಿತೆಯ ಬಳಿ ಹೇಳಿದಳು, 'ನಿನ್ನ ಗಂಡ ಮಗು ಹುಟ್ಟಿದ ಸಂತೋಷದಲ್ಲಿ ನಿನಗೆ ಏನು ಉಡುಗೊರೆ ಕೊಟ್ಟರು? ಎಂದು. ಅದಕ್ಕೆ ಗೆಳತಿ ಹೇಳಿದಳು, ಏನೂ ಕೊಟ್ಟಿಲ್ಲ ಎಂದು. ಅದಕ್ಕೆ ಆಶ್ಚರ್ಯ ವ್ಯಕ್ತಪಡಿಸಿದ ಗೆಳತಿ ಹಾಗಾದರೆ ಅವರೆಂತಹ ಮನುಷ್ಯ, ಇಷ್ಟೆಲ್ಲಾ ಕಷ್ಟಪಟ್ಟು ಮಗು ಹೆತ್ತಿರುವುದು ಅವನ ದೃಷ್ಟಿಯಲ್ಲಿ ಒಂದು ಮೌಲ್ಯವೇ ಅಲ್ಲವೇ? ಎಂದು. ಗೆಳತಿ ಹೋದ ನಂತರ ಈಕೆ ಅದೇ ವಿಷಯ ಆಲೋಚಿಸತೊಡಗಿದಳು. ಪತಿ ಮನೆಗೆ ಬಂದಾಗ ತನಗೆ ಉಡುಗೊರೆ ನೀಡದ ಬಗ್ಗೆ ಆಕ್ಷೇಪಿಸಿದಳು. ವಾದ ವಿವಾದ ಬೆಳೆಯಿತು. ಕೊನೆಗೆ ವಿವಾಹ ವಿಚ್ಛೇದನವಾಯಿತು" ಎಂಬುದು ಆ ಕಥೆ. ಇದು ಮನಸ್ಸಿನ ದುರ್ಬಲತೆ ಎತ್ತಿ ತೋರಿಸುವಂತಹುದು. ಹೆಣ್ಣು ಹಡೆಯುವುದು, ಗಂಡು ಅದನ್ನು ಸಂಭ್ರಮಿಸುವುದು ಸಹಜ ಪ್ರತಿಕ್ರಿಯೆ. ಹಾಗೆಂದು ಆ ಮಗು ಇಬ್ಬರಿಗೂ ಸೇರಿದ್ದಲ್ಲ ಎನ್ನಲಾದೀತೆ? ಮಗು ಹುಟ್ಟಿದಾಗ ಸಂಭ್ರಮಿಸುವುದು ಸಹಜ. ಆದರೆ ಯಾರೋ ನಮಗೆ ಮಗು ಹೆತ್ತುಕೊಟ್ಟಂತೆ ಅವರಿಗೆ ಬಹುಮಾನ ನೀಡುವುದು ಎಷ್ಟರಮಟ್ಟಿಗೆ ಸರಿ? ಅಲ್ಲಿಯವರೆಗೆ ಈ ಬಗ್ಗೆ ಯೋಚಿಸದಿದ್ದ ಮನಸ್ಸು ದುರ್ಬಲವಾಗಿ ಅದರೆಡೆಗೆ ಗಮನ ಹರಿಸಿದಾಗ ಸಂಸಾರ ಹಾಳಾಗುತ್ತದೆ.

ಇಂತಹುದೇ ಮತ್ತೊಂದು ಕಥೆ. "ಒಬ್ಬ ವ್ಯಕ್ತಿ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಅವನಿಗೆ ಕಡಿಮೆ ಸಂಬಳ ಬರುತ್ತಿದ್ದರೂ ಅವನು ಅದರಲ್ಲಿ ನೆಮ್ಮದಿ ಕಾಣುತ್ತಿದ್ದ. ಒಮ್ಮೆ ಅವನ ಸ್ನೇಹಿತ ಅವನನ್ನು ಭೇಟಿಯಾಗುತ್ತಾನೆ. ಅವನು ಇವನ ಕೆಲಸ ಹಾಗೂ ಸಂಬಳದ ಬಗ್ಗೆ ವಿಚಾರಿಸುತ್ತಾನೆ. ಇಷ್ಟು ಕಡಿಮೆ ಸಂಬಳದಲ್ಲಿ ಅದು ಹೇಗೆ ಜೀವಿಸುತ್ತಿದ್ದೀಯಾ? ಎಂದಾಗ ಈ ವ್ಯಕ್ತಿ ಇನ್ನೇನು ಮಾಡಲಾಗುತ್ತದೆ? ಎಂದು ತನ್ನ ಅಸಹಾಯಕ ಸ್ಥಿತಿ ವಿವರಿಸಿದ. ಅದಕ್ಕೆ ಸ್ನೇಹಿತ ನಿನ್ನ ಜೊತೆಗಾರರು ನಿನಗಿಂತ ಹೆಚ್ಚು ಸಂಪಾದಿಸುತ್ತಾ ಆರಾಮವಾಗಿದ್ದಾರೆ ಎಂದು ಹೇಳಿ ಹೊರಟುಹೋದ. ಆಗ ಈ ವ್ಯಕ್ತಿಗೆ ಚಿಂತೆ ಆರಂಭವಾಯಿತು. ತನಗೆ ಹೆಚ್ಚು ಸಂಬಳ ಸಿಗುತ್ತಿಲ್ಲ, ಸಂಬಳ ಹೆಚ್ಚಿಸಿ ಎಂದು ಮಾಲೀಕನನ್ನು ಕೇಳಿದ. ಮಾಲೀಕ ಸಂಬಳ ಹೆಚ್ಚಿಸಲು ನಿರಾಕರಿಸಿದ. ಕೊನೆಗೆ ಈ ವ್ಯಕ್ತಿ ಅನ್ಯಮನಸ್ಕನಾಗಿ ಕೆಲಸ ಮಾಡುತ್ತಾ, ಕೊನೆಗೆ ಕೆಲಸ ಕಳೆದುಕೊಂಡು ಬೀದಿಗೆ ಬಿದ್ದ" ಎಂಬುದು ಈ ಕಥೆ. ಅಲ್ಲಿ ಯವರೆಗೆ ತನಗೆ ಬರುತ್ತಿದ್ದ ಸಂಬಳದಲ್ಲಿ ನೆಮ್ಮದಿಯಾಗಿದ್ದವನು ಯಾರೋ ಹೇಳಿದಾಗ ತನಗೆ ಸಂಬಳ ಸಾಕಾಗುವುದಿಲ್ಲ ಎಂದು ಯೋಚಿಸಿ ಕೊನೆಗೆ ಇದ್ದ ಕೆಲಸವನ್ನೂ ಕಳೆದುಕೊಂಡ ಎಂದರೆ ಅವನ ಮನಸ್ಸು ದುರ್ಬಲವಾಯಿತು ಎಂದೇ ಪರಿಭಾವಿಸಬೇಕಾಗುತ್ತದೆ.

ಇಂತಹುದೇ ಹಲವು ಪ್ರಕರಣಗಳು ನಮ್ಮೊಂದಿಗೆ ನಡೆಯುತ್ತವೆ. ಯಾವ ಸ್ನೇಹಿತ ತನಗೆ ಆಪ್ತ ಎಂದುಕೊಂಡಿದ್ದು, ಮತ್ತೊಬ್ಬ ಅದಕ್ಕೆ ಹುಳಿಹಿಂಡಿದಂತೆ ಮಾತನಾಡಿದಾಗ ಆ ಆಪ್ತ ಸ್ನೇಹಿತನ ಬಗ್ಗೆ ಅನುಮಾನ ಪಟ್ಟುಕೊಂಡು ಕೊನೆಗೆ ಅವನ ಸ್ನೇಹ ಕಳೆದುಕೊಂಡ ಹಲವು ಪ್ರಕರಣಗಳು ನಮ್ಮ ಕಣ್ಣ ಮುಂದಿರುತ್ತದೆ. ತಂದೆಯ ಬಗ್ಗೆ ಗೌರವ ಹೊಂದಿದ ಮಗನ ತಲೆಯಲ್ಲಿ ತಂದೆಯ ವಿರುದ್ಧ ಹೇಳಿದಾಗ ಅವನು ದುರ್ಬಲ ಮನದವನಾದರೆ ಕ್ರಮೇಣ ತಂದೆಯೊಡನೆ ಅವನ ಸಂಬಂಧ ಹಾಳಾಗುತ್ತದೆ. ಪತಿ–ಪತ್ನಿಯರ ನಡುವೆ ಮೂಡುವ ಅನುಮಾನಗಳು ಸಂಸಾರದ ವಿನಾಶಕ್ಕೆ ಕಾರಣವಾಗುತ್ತದೆ. ನಮ್ಮಲ್ಲಿ ಮೊದಲಿನಿಂದಲೂ ಹೇಳಿಕೊಂಡು ಬಂದಿರುವುದು 'ಪ್ರತ್ಯಕ್ಷವಾಗಿ ಕಂಡರೂ ಪ್ರಾಮಾಣಿಸಿ ನೋಡು' ಎಂದು. ಯಾವುದೇ ವಿಷಯದ ಬಗ್ಗೆ ಕಣ್ಣಿಗೆ ಕಾಣಿಸಿದ್ದು ತಪ್ಪಾಗಿರಬಹುದು. ಕಣ್ಣಿಗೆ ಕಂಡದ್ದೇ ಸತ್ಯ ಎಂದು ಭಾವಿಸಿ ಆತುರದ ನಿರ್ಧಾರ ತೆಗೆದುಕೊಳ್ಳಬಾರದು. ಹಾಗೆ ತೆಗೆದುಕೊಂಡ ನಿರ್ಧಾರ ನಮ್ಮ ಜೀವನವನ್ನು ನರಕಸದೃಶವಾಗಿಸಬಹುದು.

ಹೀಗೆ ನಾವು ಮನಸ್ಸನ್ನು ಮಾಲಿನ್ಯಗೊಳಿಸಿಕೊಳ್ಳಬಾರದು. ನಮಗೆ ನಮ್ಮ ಜೀವನದ ಉದ್ದೇಶ ಹಾಗೂ ಅದನ್ನು ಸಾಧಿಸಲು ಬೇಕಾದ ಮಾರ್ಗ ಇವುಗಳ ಬಗ್ಗೆ ಮಾತ್ರ ಲಕ್ಷ್ಯವಿರಬೇಕು. ಚೆನ್ನಾಗಿರುವುದನ್ನು ಸಹಿಸದ ಜನರಿರುವಂತೆ, ಚೆನ್ನಾಗಿರುವವರ ಬಗ್ಗೆಯೂ ಸಹಿಸದ ಜನರಿರಬಹುದು. ನಮ್ಮ ಮನಸ್ಸು ದುರ್ಬಲವಾದಾಗ ಮನಸ್ಸು ಮಾಲಿನ್ಯವಾದಂತೆ ಆಗುತ್ತದೆ. ನಮಗೆ ಸುಧಾರಣೆಯ ಬದುಕಬೇಕು ಎಂದು ಇದ್ದುದನ್ನು ಕಳೆದುಕೊಳ್ಳುವಂತೆ ಆಗಬಾರದು.

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಇಲವಾಲದಲ್ಲಿ ಪಾದಯಾತ್ರೆಗೆ ಚಾಲನೆ

ದೇಶಕ್ಕೆ ಬಿಜೆಪಿ ಕೊಡುಗೆ ಏನು?: ಸಿದ್ದರಾಮಯ್ಯ

ಮೈಸೂರು,ಆ.7–ಕಾಂಗ್ರೆಸ್ ಪಕ್ಷ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ನಮ್ಮನ್ನೆಲ್ಲಾ ಸ್ವತಂತ್ರರನ್ನಾಗಿ ಮಾಡಿದೆ ಆದರೆ ಈ ದೇಶಕ್ಕೆ ಬಿ.ಜೆ.ಪಿ.ಯಂತಹ ಭ್ರಷ್ಟ ಕೋಮುವಾದಿ ಪಕ್ಷದ ಕೊಡುಗೆ ಏನು? ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ಚಾಮುಂಡೇಶ್ವರಿ ಕ್ಷೇತ್ರದ ಇಲವಾಲ ಮತ್ತು ಜಯಪುರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಾದಯಾತ್ರೆಗೆ ಇಲವಾಲದಲ್ಲಿ ಭಾನುವಾರ ಚಾಲನೆ ನೀಡಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಬ್ರಿಟಿಷರು ಸುಮಾರು 200 ವರ್ಷಗಳ ಕಾಲ ಈ ದೇಶವನ್ನು ಆಳಿದ್ದಾರೆ. ಕಾಂಗ್ರೆಸ್ ಪಕ್ಷವನ್ನು 1885ರಲ್ಲಿ **ಡಾ. ಹ್ಯೂಮನ್** ಪ್ರಾರಂಭಿಸಿದರು. ಅಂದಿನಿಂದ 1947ರವರೆಗೆ 62 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ನಮ್ಮನ್ನು ಸ್ವತಂತ್ರರನ್ನಾಗಿ ಮಾಡಲು ಹೋರಾಟ ಮಾಡಿ ಸ್ವಾತಂತ್ರ್ಯ ಕೊಡಿಸಿದೆ. ಬಾಲ ಗಂಗಾಧರನಾಥ ತಿಲಕ್, ಗೋಪಾಲಕೃಷ್ಣ ಗೋಖಲೆ, ಗಾಂಧೀಜಿ, ನೆಹರು ಸರ್ದಾರ್ ವಲ್ಲಭಬಾಯಿ ಪಟೇಲ್, ಸುಭಾಷ್ ಚಂದ್ರಬೋಸ್, ಅಬ್ದುಲ್ ಕಲಾಂ ಅಜಾದ್ ಇನ್ನು ಹಲವಾರು ಜನ ಈ ದೇಶಕ್ಕಾಗಿ ಹೋರಾಟ ತ್ಯಾಗ ಬಲಿದಾನ ಮಾಡಿ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಇಂದು ನಾವೆಲ್ಲರು ಸ್ವತಂತ್ರವಾಗಿರಬೇಕಾದರೆ ಕಾಂಗ್ರೆಸ್ ಪಕ್ಷ ಕಾರಣ. ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಎಲ್ಲಾ ಧರ್ಮದವರು ಹೋರಾಟ ಮಾಡಿದರು ಆದರೆ ಬಿಜೆಪಿಯಾಗಲಿ, ಜೆ.ಡಿ.ಎಸ್. ಆಗಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿಲ್ಲ. 1925ರಲ್ಲಿ ಆರ್.ಎಸ್.ಎಸ್. ಸ್ಥಾಪನೆಯಾಯಿತು. 1951ರಲ್ಲಿ ಜನಸಂಘ ಪ್ರಾರಂಭವಾಯಿತು. 1980ರಲ್ಲಿ ಬಿಜೆಪಿ ಸ್ಥಾಪನೆಯಾಯಿತು. ಇವರೆಲ್ಲಾ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಾರಾ? ಎಂದು ಪ್ರಶ್ನಿಸಿದ ಅವರು, ರಾಷ್ಟ್ರಗೀತೆ, ಸಂವಿಧಾನ ರಚನೆಯಾಗಿದ್ದು, ಕಾಂಗ್ರೆಸ್‌ನಿಂದ. ರಾಷ್ಟ್ರಧ್ವಜ ಎಂದರೆ ನಮಗೆ ಹೆಮ್ಮೆಯ ವಿಚಾರ. ಇದೇ ಧ್ವಜವನ್ನು ಸಾವರ್ಕರ್ ಗೋಲ್‌ವಾಲಕರ್ ವಿರೋಧಿಸಿದ್ದರು. ಯಾರಾದರು ಒಬ್ಬ ಬಿಜೆಪಿಯವರು ದೇಶಕ್ಕೆ ಸ್ವತಂತ್ರ ತರಲು ಸತ್ತಿದ್ದಾರಾ? ಆಸ್ತಿ ಕಳೆದುಕೊಂಡಿದ್ದಾರಾ? ದೇಶಭಕ್ತಿ ಪ್ರಾರಂಭವಾಗಿದ್ದೇ ಕಾಂಗ್ರೆಸ್ ಪಕ್ಷದಿಂದ. ನಮಗೆ ಬಿಜೆಪಿಯವರು ದೇಶಭಕ್ತಿ ಹೇಳಲು ಬರ್‍ತಾರೆ ಎಂದು ವ್ಯಂಗ್ಯವಾಡಿದರು.



ಜೆಡಿಎಸ್‌ನವರು ಯಾವುದಕ್ಕೂ ಹೋರಾಟ ಮಾಡಿಲ್ಲ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲು ಶಕ್ತಿಯಿಲ್ಲ. ಬೇರೆಯವರ ಮನೆಯ ಬೆಂಕಿಯಲ್ಲಿ ಕೈಕಾಯಿಸಿಕೊಳ್ಳುವುದೇ ಅವರ ಕೆಲಸವಾಗಿದೆ. ನಾವು ಕಳೆದ ಚುನಾವಣೆಯಲ್ಲಿ 80 ಜನ ಗೆದ್ದು, ಕೋಮುವಾದಿ ಪಕ್ಷ ಅಧಿಕಾರಕ್ಕೆ ಬರಬಾರದೆಂದು ಜೆ.ಡಿ.ಎಸ್.ನವರಿಗೆ ಬೆಂಬಲ ನೀಡಿದ್ದೆವು. ಕುಮಾರಸ್ವಾಮಿ ವೆಸ್ಟೆಂಡ್ ಹೋಟೆಲ್‌ನಲ್ಲಿ ಕುಳಿತು ಸರಿಯಾಗಿ ಅಧಿಕಾರ ನಡೆಸದೆ ಅಧಿಕಾರ ಕಳೆದುಕೊಂಡರು ಎಂದರು.

ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಭಿನ್ನಾಭಿಪ್ರಾಯಗಳನ್ನು ಬಿಟ್ಟು ಬದ್ಧತೆಯಿಂದ ಕಾಂಗ್ರೆಸ್ ಪಕ್ಷದಲ್ಲೆ ಇರಬೇಕು. ನಾವು ಅಧಿಕಾರದಲ್ಲಿದ್ದಾಗ ಮಾಡಿದಂತಹ ಜನಪರ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸಬೇಕು. ನಮ್ಮ ಸರ್ಕಾರಕ್ಕೆ ಇಂದಿನ 40 ಪರ್ಸೆಂಟ್ ಸರ್ಕಾರಕ್ಕೂ ಹೋಲಿಕೆ ಮಾಡಿ ಈ ಸರ್ಕಾರವನ್ನು ಕಿತ್ತೊಗೆದು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಎಲ್ಲರೂ ಶಪಥ ಮಾಡಬೇಕು ಎಂದ ಅವರು, 1978ರಲ್ಲಿ ಈ ತಾಲೂಕಿನಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್, ಹಳ್ಳಿಗೆ ಸಿಟಿ ಬಸ್, ವರುಣಾ ಚಾನೆಲ್ ಇರಲಿಲ್ಲ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ನಾನು ಮಾಡಿದ್ದೇನೆ. ಈಗ ಏನು ಮಾಡದವರಿಗೆ ಅಧಿಕಾರ ಕೊಟ್ಟಿದ್ದೀರಿ ಎಂದು ಬೇಸರ ವ್ಯಕ್ತಪಡಿಸಿದ ಅವರು, ಕಾಂಗ್ರೆಸ್ ಪಕ್ಷದಿಂದ ಯಾರೇ ಅಭ್ಯರ್ಥಿಯಾದರೂ ಸಹ ಒಗ್ಗಟ್ಟಿನಿಂದ ಕೆಲಸಮಾಡಿ ಗೆಲ್ಲಿಸಬೇಕೆಂದು ಮಾಜಿ ಸಿಎಂ ಸಿದ್ದರಾಮಯ್ಯ ಕರೆ ನೀಡಿದರು.

ಸಮಾರಂಭದಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್, ಕೆಪಿಸಿಸಿ ಸದಸ್ಯರಾದ ಕೆ.ಮರೀಗೌಡ, ನರಸೇಗೌಡ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಜೇಸುದಾಸ್, ಗುರುಪಾದಸ್ವಾಮಿ, ಜಿ.ಪಂ. ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ, ಅರುಣ್‌ಕುಮಾರ್, ಜವರಪ್ಪ, ಮಹಾದೇವ್, ನಾರಾಯಣ, ಲೇಖಾ ವೆಂಕಟೇಶ್, ಕೋಟೆಹುಂಡಿ ಮಹಾದೇವ, ತಾ.ಪಂ. ಮಾಜಿ ಸದಸ್ಯರಾದ ಕೆಂಚಪ್ಪ, ಮಾರ್ಬಳ್ಳಿ ಕುಮಾರ್, ಕೆ.ಎಸ್. ಕರೀಗೌಡ, ಸಿ.ಎಂ. ಸಿದ್ದರಾಮೇಗೌಡ, ಯದುಕುಮಾರ್, ಜಿ.ಕೆ.ಬಸವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಹೊಸಹುಂಡಿ ರಘು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ. ಗುರುಸ್ವಾಮಿ, ಜೆ. ಸತೀಶ್‌ಕುಮಾರ್, ಮುಖಂಡರಾದ ಲಕ್ಷ್ಮಯ್ಯ, ಕೃಷ್ಣಕುಮಾರ್ ಸಾಗರ್, ಜೆ.ಜೆ. ಆನಂದ್, ನಾಗವಾಲ ನರೇಂದ್ರ ಹಳೇಕಾಮನಕೊಪ್ಪಲು ಕರೀಗೌಡ, ನಾಡನಹಳ್ಳಿ ರವಿ, ಉಮಾಶಂಕರ್, ಸಿದ್ದರಾಜು, ಹರೀಶ್ ಮೊಗಣ್ಣ, ಹಿನಕಲ್ ಉದಯ್, ಮಂಜು, ವೈ.ಸಿ. ಸ್ವಾಮಿ, ಪಾಷಾ, ರಾಘವೇಂದ್ರ, ಒಲೆಸಿದ್ದು, ಬಿ.ರವಿ, ಶಿವಲಿಂಗ, ಕೆರೆಹುಂಡಿ, ಮಹೇಶ್, ಇಲವಾಲ ಸುರೇಶ್, ಧನಗಳ್ಳಿ ಬಸವರಾಜು, ಚಲುವರಾಜು ಹಾಜರಿದ್ದರು.

ಹವಾಮಾನ ವೈಪರೀತ್ಯ

ಮುನ್ಸೂಚನೆ ನೀಡಲು ಅಡ್ಡಿ



ನವದೆಹಲಿ,ಆ.7–ಹವಾಮಾನ ವೈಪರೀತ್ಯದಿಂದಾಗಿ ಹವಾಮಾನ ಮುನ್ಸೂಚನೆ ನೀಡಲು ಅಡ್ಡಿಯುಂಟಾಗುತ್ತಿದೆ ಎಂದು ಐಎಂಡಿ ಡಿಜಿ ಮೃತ್ಯುಂಜಯ ಮಹೋಪಾತ್ರ ಹೇಳಿದ್ದಾರೆ.

ಹವಾಮಾನ ಮುನ್ಸೂಚನೆಯ ನಿಖರತೆಗೆ ಹವಾಮಾನ ಬದಲಾವಣೆ ಪೆಟ್ಟು ನೀಡುತ್ತಿದ್ದು, ಇನ್ನಷ್ಟು ನಿಖರಗೊಳಿಸಲು ಜಾಗತಿಕ ಮಟ್ಟದಲ್ಲಿ ವೀಕ್ಷಣಾ ಜಾಲದ ಸಾಂದ್ರತೆ ಮತ್ತು ಹವಾಮಾನ ಮುನ್ಸೂಚನೆ ಮಾಡೆಲಿಂಗ್ ಅನ್ನು ಹೆಚ್ಚಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿದೆ ಎಂದು ಮೃತ್ಯುಂಜಯ ಮಹೋಪಾತ್ರ ಹೇಳಿದ್ದಾರೆ.

ಮುಂಗಾರು ಮಳೆ ದೇಶದಲ್ಲಿ ಮಹತ್ವದ ಟ್ರೆಂಡ್‌ನ್ನು ತೋರಿಸಿಲ್ಲವಾದರೂ, ವಾಡಿಕೆಗಿಂತಲೂ ಹೆಚ್ಚಿನ ಮಳೆಯ ಪ್ರಕರಣಗಳು ಏರಿಕೆಯಾಗಿವೆ ಹಾಗೂ ಕಡಿಮೆ ಮಳೆಯ ಪ್ರಕರಣಗಳು ಕುಸಿತ ಕಂಡಿದೆ ಇದು ಹವಾಮಾನ ಬದಲಾವಣೆಯಿಂದಾಗಿದೆ ಎಂದು ಹೇಳಿದ್ದಾರೆ. 1901ರಿಂದ ಮುಂಗಾರು ಮಳೆಗೆ ಸಂಬಂಧಿಸಿದ ಡೇಟಾ ಸಂಗ್ರಹಿಸಿದ್ದೇವೆ. ಉತ್ತರ, ಪೂರ್ವ ಹಾಗೂ ಈಶಾನ್ಯ ಭಾರತದಲ್ಲಿ ಕಡಿಮೆ ಪ್ರಮಾಣದ ಮಳೆಯಾಗಿದ್ದರೆ, ಪಶ್ಚಿಮ ಹಾಗೂ ರಾಜಸ್ಥಾನದ ಪ್ರದೇಶಗಳಲ್ಲಿ ಮಳೆ ಏರಿಕೆಯಾಗಿದೆ. ಈ ರೀತಿಯಾಗಿ ದೇಶವನ್ನು ಇಡೀಯಾಗಿ ಪರಿಗಣಿಸಿದರೆ, ಮಹತ್ವದ ಟ್ರೆಂಡ್ ಕಾಣುತ್ತಿಲ್ಲ ಎಂದು ಐಎಂಡಿ ಹೇಳಿದೆ.

1.4 ಲಕ್ಷ ಸಿಬ್ಬಂದಿ ಭರ್ತಿಗೆ ಭಾರತೀಯ ರೈಲ್ವೆ ನಿರ್ಧಾರ

ಬೆಂಗಳೂರು, ಆ.7– ಭಾರತೀಯ ರೈಲ್ವೆ 1.4 ಲಕ್ಷ ಉದ್ಯೋಗಗಳ ಭರ್ತಿಗೆ ನಿರ್ಧರಿಸಲಾಗಿದೆ.


ಕೇಂದ್ರ ರೈಲ್ವೆ ಸಚಿವೆ ಅಶ್ವಿನಿ ವೈಷ್ಣವ್ ಈ ಕುರಿತು ಮಾಹಿತಿ ನೀಡಿದ್ದು, ಭಾರತೀಯ ರೈಲ್ವೆ 1.4 ಲಕ್ಷ ಉದ್ಯೋಗಗಳನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. 2014 ಮತ್ತು 2022ರ ನಡುವೆ ಭಾರತೀಯ ರೈಲ್ವೆಯಲ್ಲಿ 3,50,204 ಮಂದಿಗೆ ಉದ್ಯೋಗ ದೊರೆತಿದೆ. ಕೆಲವು ತಿಂಗಳ ಹಿಂದೆ ಒಂದೂವರೆ ವರ್ಷದಲ್ಲಿ 10 ಲಕ್ಷ ಉದ್ಯೋಗಗಳನ್ನ ಭರ್ತಿ ಮಾಡಬೇಕಿತ್ತು. ಪ್ರಧಾನಿ ಮೋದಿ ಆದೇಶ ಹೊರಡಿಸಿದ್ದಾರೆ. ಇದರ ಭಾಗವಾಗಿ 1.4 ಲಕ್ಷ ಹುದ್ದೆಗಳಿಗೆ ನೇಮಕಾತಿ ನಡೆಸಲಾಗುವುದು. ಈ ವರ್ಷವೇ 18,000 ಮಂದಿಗೆ ರೈಲ್ವೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗಿದ್ದು, ರೈಲ್ವೆ ಒಂದು ದೊಡ್ಡ ಉದ್ಯಮವಾಗಿದೆ ಎಂದು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

Automatic Water Level

SALES & SERVICE
SUN POWER SOLUTIONS
Yeraganahalli, Mysore
9739804444

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

PHIFER INCORPORATED
WANTED
MARKETING EXECUTIVE
YOUNG & ENERGETIC, EDUCATION: ANY DEGREE, TWO WHEELER MUST, HAVING EXPERIANCE OF 2 YEARS IN OUTDOOR MARKETING FIELD, LAUNGUAGE : KANNADA & ENGLISH, SALARY AS PER MARKET STANDARDS + INCENTIVES
9448750455

LIFE INSURANCE
* Protection as well as Savings, Get 2 months premium FREE.
* Port your health insurance to Star Health Insurance.
* Tax Benefit. 80/C
9110861343

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ದತ್ತನಗರ, ಗಣಪತಿ ಆಶ್ರಮ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ESI ಮತ್ತು PF ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು
9620667819
9880727819

ಶ್ರೀ ಗೌರಿ ಶಂಕರ ಟ್ರಾವೆಲ್ಸ್
26.09.2022 (7 ದಿನ): ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯ, ಬಾಬಾಬೈದ್ಯನಾಥ್ ದಿಯೋಗರ್ ಇತ್ಯಾದಿ.
8.10.2022 (12/18 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್, ಉತ್ತರಕಾಶಿ, ಗುಪ್ತಕಾಶಿ, ಮಾನ, ಹರಿದ್ವಾರ್, ದೆಹಲಿ, ಇತ್ಯಾದಿ (ವಿಮಾನ, ಟ್ರೈನ್ ಮತ್ತು ಬಸ್) (ಊಟ, ವಸತಿ ಸೇರಿರುತ್ತದೆ.)
9620002114

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

S.A.ಕೌಶಲ್ಯ ತರಬೇತಿ ಕೇಂದ್ರ
1) ಟೈಲರಿಂಗ್, ಸ್ಯಾರಿ ಕುಚ್ಚು.
2) ಹ್ಯಾಂಡ್ ಎಂಬ್ರಾಯಿಡರಿ, ಝರಿ ವರ್ಕ್ಸ್ ಮುಂತಾದವು.
ಪ್ರತಿಷ್ಠಿತ ಪ್ರಮಾಣಪತ್ರ ನೀಡಲಾಗುವುದು
7019439180

ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ
ದೇವೇಗೌಡ ಸರ್ಕಲ್‌ನಲ್ಲಿ MNC ಕಂಪನಿಯಲ್ಲಿ ಹೆಬ್ಬಾಳ್ ಇಂಡಸ್ಟ್ರೀಸ್‌ನಲ್ಲಿ, ಗದ್ದಿಗೆ ರಸ್ತೆಯ ಕಂಪನಿಯಲ್ಲಿ ಸೆಕ್ಯೂರಿಟಿಗಾರ್ಡ್‌ಗಳು ಹಾಗೂ ಅರಸು ರೋಡ್‌ನ ಬಟ್ಟೆ ಶೋರೂಂನಲ್ಲಿ ಕೆಲಸ ಮಾಡಲು ಹೌಸ್‌ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
9035050656 / 9035050653

ಪ್ರವಾಸ
8-9-2022 – 14 ದಿನಗಳ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್ ಚಾರ್ಧಾಮ್ ಪ್ರವಾಸ. 5-10-2022 – 16 ದಿನಗಳ ಅಷ್ಟಜ್ಯೋತಿರ್ಲಿಂಗ ದರ್ಶನ, ನಾಸಿಕ್, ಶಿರಡಿ, ಓಂಕಾರೇಶ್ವರ್ ಉಜ್ಜಯಿನಿ, ಮಹಾಕಾಳೇಶ್ವರ ವಲ್ಲಭಭಾಯಿ, ಪಟೇಲರ ಪ್ರತಿಮೆ, ದ್ವಾರಕಾ, ಸೋಮನಾಥ್, ಮಾತ್ರುಗಯಾ. ಸಂಪರ್ಕಿಸಿ: ಏಷ್ಯನ್ ಟೂರ್ ಅಂಡ್ ಟ್ರಾವೆಲ್ಸ್, ತ್ಯಾಗರಾಜನಗರ, ಬೆಂಗಳೂರು-70
8050629305, 9342287551

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

WANTED IMMEDIATELY
Accounts Executives, (B.Com / BBM) Male,
Store Incharge, (Any Degree) Male, Age Below 30 yrs, Experience: Min 2 yrs.
Address: THE AKSHAYAPATRA FOUNDATION MYSORE.
No. 31, 18th Cross, Jayanagar, Mysore

THE BIG SALE
Upto 70% OFF
ON ENTIRE STOCK OF SAREES
J R ENTERPRISES...
#273, Ashoka Road, Near Post Office
MYSURU 2444197

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000-21,000 +ESI, PF. ವಿದ್ಯಾರ್ಹತೆ: 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ
9035734821

WANTED
B.Sc Candidates with Chemistry as a subject for the post of "Chemist cum Sales Dispatch" at Mysore. Experience in the above role would be an added advantage. Kindly mail your resume
sglmysore@southerngasindia.com
kedar3579@gmail.com
7219198969 / 7219199004

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

GOLD FINANCE
ಗಿರವಿ ಚಿನ್ನಾಭರಣ ಖರೀದಿ
24 ಕ್ಯಾರೆಟ್-5200
22 ಕ್ಯಾರೆಟ್-4600
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

WANTED PIGMY AGENTS
Atractive interest Rate on your investment upto 11.55% PA SHARES are opened for more details Contact:
9902729729
SAI MULTISTATE CREDIT CO OPERATIVE SOCIETY
3rd Main, 5th Cross, Jayanagar, Mysore

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP	4 HOURS	8000/-
Any Degree	Age Limit	18 to 35

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು : 21 to 30
ವಿದ್ಯಾರ್ಹತೆ : Any Degree (ಯಾವುದೇ ಪದವಿ)
ಸಂಬಳ: 8000 to 15000
ಸಮಯ: 9:30 to 5:30 pm
ಸ್ಥಳ: ಹುಣಸೂರು– ಮೈಸೂರು ಮುಖ್ಯರಸ್ತೆ, ಹುಣಸೂರು. ಸಂಪರ್ಕಿಸಿ:
9008840106

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ ಊಟ, ವಸತಿಯೊಂದಿಗೆ 12,000–18000 ರವರೆಗೆ
9739292222 / 0821-3563782
9035113222

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ.
9743217566
9108418233

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣಿಕೆಯ ನಾಲ್ಕರ ದೈವ ಚೌಡೇಶ್ವರಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ವಿಳಾಸ: ವಿನಾಯಕ ಸರ್ಕಲ್ ಬಸ್‌ಸ್ಟಾಂಡ್ ಹತ್ತಿರ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಪಿಂಭಾಗ, ಮಾರುತಿ ಸುಜುಕಿ ಆಫೀಸ್ ಮೊಬೈಲ್ ಹತ್ತಿರ, ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಗಳು, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

BUSINESS LOAN
ಮೈಸೂರು ಮತ್ತು ಮೈಸೂರಿನ ಎಲ್ಲಾ ತಾಲ್ಲೂಕಿಗೆ ಹೊಸದಾಗಿ Business start ಮಾಡಲು Startup Loan ಮಾಡಿಕೊಡಲಾಗುವುದು. 5 Lakhs ಇಂದ 50 Lakhs ವರೆಗೆ State ಮತ್ತು Central 20% ಮತ್ತು 30% sub-sidy ದರದಲ್ಲಿ Loan ಮಾಡಿಕೊಡಲಾಗುವುದು. SC ಮತ್ತು ST ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. (Project Report ಮತ್ತು Loan ಗೆ ಸಂಬಂಧಪಟ್ಟ Document ಮಾಡಿಕೊಡಲಾಗುವುದು) ಆಸಕ್ತಿಯುಳ್ಳವರು ಸಂಪರ್ಕಿಸಿ:
ಸುಪ್ರಿಯ: 9663232062
ದೀಪಿಕಾ: 6364283657

ಮೈಸೂರು ವಿವಾಹ ವೇದಿಕೆ
ಎಲ್ಲಾ ಜಾತಿಯ ವಧು ವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ. ಡಾ.ಗುರೂಜಿ ಮೈಸೂರು.
6361740552
Computer ಜ್ಞಾನವುಳ್ಳ Lady Receptionist ಬೇಕಾಗಿದ್ದಾರೆ

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮಹಿಳೆಯರಿಗೆ
ಆಫೀಸ್ ಕೆಲಸ ಮತ್ತು ಮೇನೇಜ್‌ಮೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
9901080314

ಪರ್ಮನೆಂಟ್ ಉದ್ಯೋಗ
SSLC (Pass), PUC, ITI, JOC, Diploma any Degree ಆದಂತಹ 226 ಅಭ್ಯರ್ಥಿಗಳು A.W. Group of company ಗೆ ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 35 ವರ್ಷ. ತಿಂಗಳಿಗೆ: 28000–36000 (ಉಚಿತ ವಸತಿ + Incentives + Promotion) ಕೂಡಲೇ ಕರೆಮಾಡಿ
ಮೇಘಾಶ್ರೀ : 6360560825
9844219943

ಆದಿ ಕರ್ನಾಟಕ (SC) ವಧು-ವರರ ಮಾಹಿತಿ ಕೇಂದ್ರ
BA, B.Sc, B.Com, MA, M.Sc, MBA, MBBS, Engineer's, P.hd, B.Ed, M.Ed
ವಿವಾಹ ನೊಂದಣಿಗೆ ಕರೆಮಾಡಿ
9164743059

DOOR STEP SERVICE
Refrigerator & Washing Machine, For Service / Repair
Contact:
9008519050

ಮನೆ ಭೋಗ್ಯಕ್ಕಿದೆ
ಮೈಸೂರು ನಗರ, ಚಾಮುಂಡಿಪುರಂ, ಜೆ.ಎಲ್.ಬಿ ರಸ್ತೆ, 1ನೇ ಮಹಡಿ, ವರಾಂಡ, ಹಾಲ್, 2 ರೂಂ, ಗ್ರಾನೈಟ್ ಮತ್ತು ಟೈಲ್ಸ್ ಇತರ ಎಲ್ಲಾ ಸೌಕರ್ಯಗಳು 6 ಚದರ, 5.75 ಲಕ್ಷ (ನೆಗೋಷಿಯಬಲ್)
8105087957
8197692128

ಔಟ್ ಹೌಸ್ ಬಾಡಿಗೆಗೆ ಅಥವಾ ಭೋಗ್ಯಕ್ಕೆ
ಪೂರ್ವ ಮತ್ತು ಉತ್ತರ, ಸೋಲಾರ್ ಮತ್ತು 24 ಗಂಟೆಗಳ ನೀರಿನ ಸೌಲಭ್ಯ.
ವಿಳಾಸ-1779, 5ನೇ ಕ್ರಾಸ್ ಉತ್ತರ, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು.
(Near Akash NEET), Contact
9342156709

K.H.B Site for Sale
30x40 Near Citizen School, Nanjanagud,
Rate: 2600/Sqft
9448322796

30,000 ರೂ. ಡಿಪಾಸಿಟ್ ಮಾಡಿದವರಿಗೆ ಉದ್ಯೋಗ ಅವಕಾಶ
ಹೋಂ ಡೆಲಿವರಿ ಮಾಡಲು ಪುರುಷರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಕಮೀಷನ್ ಆಧಾರದ ಮೇಲೆ ಸಂಬಳ ಕೊಡಲಾಗುವುದು. (ಕೆಲಸ ಬಿಡುವಾಗ ನಿಮ್ಮ ಹಣ ವಾಪಸ್ ಪಡೆಯಬಹುದು). ಸಂಪರ್ಕಿಸಿ:
8073309855

WANTED URGENT
Earn (10,000 to 16,500/-) pm, Age (18-24) 10th, PUC, BBM ಯಾದ Project Tranee ಗಳಾಗಿ No Fee, ಪರಸ್ಥಳದವರಿಗೆ, ವಸತಿ. Freshers only. Walk in Meet us (11am to 5 pm) ಕಾಲ್:
9342827788

CANDIDATE REQUIRED
Female Community Facilitator required to work in an NGO at Mysore. Must have completed a Degree, Minimum 2 Years of work experience in any NGO Should have two wheeler and willing to work with Vulnerable communities across the city. Contact:
+91 8970124933
CV to: anil@hasirudala.in

ವಧುವರರ ಸರಳ ಅನ್ವೇಷಣೆ
ಎಲ್ಲಾ ಜಾತಿಯ ವಧು–ವರರು, ವಿಧುರರು – ವಿಚ್ಛೇದಿತರು ಕೇವಲ 222/– ರೂ. ಶುಲ್ಕವನ್ನು ಪಾವತಿಸಿ ಹೆಸರು ನೋಂದಾಯಿಸಿ ನಿಮ್ಮ ನೆಚ್ಚಿನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಿರಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ/ ವಾಟ್ಸ್‌ಪ್ ಮಾಡಿರಿ. ಪ್ರತಿಭಾ:
9686946564

ಜಮೀನು ಮಾರಾಟಕ್ಕಿದೆ
10 ಗುಂಟೆ, Near ಬಂಡಿಪಾಳ್ಯ, Ring Road
9066558856

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
8123532073

ಮಹಿಳಾ ಸಂಘದ ಸದಸ್ಯರುಗಳಿಗೆ 25,000 ರೂ. ಸಾಲ ಪಡೆಯಿರಿ
ಮಹಿಳಾ ಸಂಘದ 5 ಜನರ ಒಂದು ಗುಂಪಿಗೆ 25,000 ರೂ. ಬೆಲೆ ಬಾಳುವ ಜರ್ಮನ್ ಬೆಳ್ಳಿಯ ಪದಾರ್ಥಗಳನ್ನು ಕೊಡಲಾಗುವುದು. (ಅಡ್ವಾನ್ಸ್ 2000 ರೂ. ಕೊಡಬೇಕು) ಉಳಿದ ಹಣವನ್ನು ವಾರಕ್ಕೆ 300 ರೂ. ಕಟ್ಟಬೇಕು. ಆಸಕ್ತಿಯುಳ್ಳವರು ಕರೆಮಾಡಿ.
8073309855

HOUSE FOR SALE
Newly Constructed 30x50, 4BHK Semi Furnished house in prime Localities home Theatre, Samanathanagar, Dattagalli.
Call: Amith Contruction
9739737378

ಶ್ರೀ ಮೂರ್ತಿ ಟೂರಿಸ್ಟ್
14.8.2022 ಭಾನುವಾರ ಗೊರವನಹಳ್ಳಿ ಮಹಾಲಕ್ಷ್ಮಿ, ಎಡಿಯೂರು ಹೆಬ್ಬೂರು, ದೇವರಾಯನದುರ್ಗ.
19/8/ ರಾತ್ರಿ 9.30ಕ್ಕೆ 'ಸಿಗಂದೂರು' ಶ್ರೀಧರ ಆಶ್ರಮ, ಸೋಂದಾಮಠ, ಸಹಸ್ರಲಿಂಗ, ಶಿರಸಿ ಮಾರಿಕಾಂಬ, ಬನವಾಸಿ ಸ್ವರ್ಣವಲ್ಲಿಮಠ, ಜೋಗ್‌ಫಾಲ್ಸ್ (ತಿಂಡಿ, ಕಾಫಿ, ಊಟ ಸೇರಿದೆ) 22/8/ ಬೆಳಿಗ್ಗೆ 5.30 ಕ್ಕೆ ವಾಪಸ್ ಬರುವುದು.
9480733069
Tickets at your Door Step

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 12000 ದಿಂದ 18000 (ESI, PF, ಸೌಲಭ್ಯ ಇರುತ್ತದೆ.)
8050699742 / 7892480649

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ B.C ಟ್ರಸ್ಟ್ (ರಿ)
ಸಾವಯವ ಸಿರಿಧಾನ್ಯಗಳಿಗೆ ಮೈಸೂರು ಜಿಲ್ಲೆಯಾದ್ಯಂತ ತಾಲ್ಲೂಕು ವಿತರಕರು ಹಾಗೂ ಕೆಲಸಗಾರರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಇದ್ದವರು)
9980795242
9916633859

ಸೈಟು ಮಾರಾಟಕ್ಕಿದೆ
30X50 ಕಾರ್ನರ್ ಸೈಟ್, ವಿಜಯನಗರ 4ನೇ ಹಂತ, ಕೆಬಿಎಲ್ ಗಾರ್ಡೇನಿಯಾ, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಪಕ್ಕದಲ್ಲಿ ಮಾರಾಟಕ್ಕಿದೆ.ಸಂಪರ್ಕಿಸಿ
9620451565

ಮನೆ ಆಲ್ಟ್ರೇಷನ್ ಮಾಡಿಕೊಡಲಾಗುತ್ತದೆ
ಗಾರೆ ಕೆಲಸ, ನಲ್ಲಿ ಕೆಲಸ, ಸ್ಯಾನಿಟರಿ ಕೆಲಸ, ಹೊಸ ಮನೆ ಕೆಲಸ ಮಾಡಿಕೊಡಲಾಗುತ್ತದೆ. ಚದರಕ್ಕೆ 1,80,000. ಸಂಪರ್ಕಿಸಿ
8310338551 / 8971160587

PASS CERTIFICATE LOST
I, K.Gagan Subbaiah residing at #56/5 Srirampura 2nd Stage, Mysore, Karnataka - 570023, have passed out 10th Standard from Mysore Public School in the year 2020, Index Number-7184245, have Lost Pass Certificate. if found contact to
9731635317

WANTED
Required Civil Engineers BE/ Diploma Holders. Male or Female. Freshers can also apply.
Email Id: shobhatechsol@gmail.com
8660703212

WANTED
Sales Boys / Girls
Full Time / Part Time
For a Inner-wear Show-room Contact in Person
Javers
#109, Mezzanine Floor, D.Devraj Urs Road, Next to Raghvendra Bakery, Mysore.

HOUSE FOR SALE
5.5 Sq Ground Floor 2 BHK House in 20x30 South facing site M Block, Kuvempunagar, Behind Pooja Bakery
9900098074

SITE FOR SALE
30x40 & 30x50 at SBM Bogadi. 30x40, 40x60, & 50x80 at Dattagalli 30x40 & 30x50 at R.K.Nagar. contact
9663136318

WANTED
1. Employees for filling petrol & gas in petrol bunk. Cashier cum Helper, Qualification SSLC pass
2. Accountant cum Supervisor, Qualification B.Com, BBM, BCA, Knowledge of computer Essential. Contact
9844002226

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ CIPET ಕಾಲೇಜು ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 50 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 14,000/– ಕೂಡಲೇ ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್‌ಪ್ರೈಸಸ್. ಲೋಕೇಶ್:
8722844236

AFFORDABLE HOME LOAN
ಸೈಟ್ ಖರೀದಿಸುವಿಕೆ, ಮನೆ ಖರೀದಿಸುವಿಕೆ, ಮನೆ ಕಟ್ಟುವುದಕ್ಕೆ, ಕಟ್ಟಿರುವ ಮನೆ ಮೇಲೆ ಸಾಲ, ಬ್ಯಾಲೆನ್ಸ್ ಟ್ರಾನ್ಸಫರ್, ವ್ಯಾಪಾರಿಗಳಿಗೆ, ಕೆಲಸಗಾರರಿಗೆ, ನಗದು ವೇತನ ಪಡೆಯುವವರಿಗೆ 100% ಗೃಹಸಾಲ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9148050015

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು 18 ರಿಂದ 30 ವರ್ಷ, ವಿದ್ಯಾರ್ಹತೆ 7 ರಿಂದ PUC ಮತ್ತು ITI, ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಂಗಳನ್ನು ನೀಡಲಾಗುತ್ತದೆ.
9035381989

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ
ಒಂದು ಚದರಕ್ಕೆ 1,80,000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361
9380885787

ಬೇಕಾಗಿದ್ದಾರೆ
ಮಹಿಳಾ ಹೌಸ್‌ಕೀಪರ್ – 10 ಮಂದಿ
ಸ್ಥಳ: GSSS ಮಹಿಳಾ ಕಾಲೇಜ್ ಹಾಸ್ಟೆಲ್, ಮೇಟಗಳ್ಳಿ ಸಂಬಳ: 10,107/+ ESI / PF ಆಸಕ್ತರು ಸಂಪರ್ಕಿಸಿ:
9686422400
9242406261

ಮಾರಾಟಕ್ಕೆ ಇದೆ
ಚೆನ್ನಾಗಿ ವ್ಯಾಪಾರವಾಗುತ್ತಿರುವ ಪ್ರಾವಿಷನ್ ಸ್ಟೋರ್, ತ್ಯಾಗರಾಜ ರೋಡ್, ಕೆ.ಆರ್.ಮೊಹಲ್ಲಾ, ಮೈಸೂರು ಇಲ್ಲಿ ಮಾರಾಟಕ್ಕಿದೆ.
9449327510
9538338623

ಬೇಕಾಗಿದ್ದಾರೆ
LODGE ನಲ್ಲಿ ಕೆಲಸ ಮಾಡಲು ನುರಿತ Front Office Manager / Receptionist ಬೇಕಾಗಿದ್ದಾರೆ
9845155940
ಹೋಟೆಲ್ ದಿವಾನ್ಸ್ ರೆಸಿಡೆನ್ಸಿ, ದಿವಾನ್ಸ್ ರಸ್ತೆ, (ಶೃಂಗಾರ್ ಹೋಟೆಲ್ ಎದುರು) ಮೈಸೂರು.

ಬೇಕಾಗಿದ್ದಾರೆ
ಮೈಸೂರಿನ ರಾಮಕೃಷ್ಣನಗರದ ಆಂದೋಲನ ಸರ್ಕಲ್ ನ ಹತ್ತಿರ 8 ಗಂಟೆ ಕೆಲಸ ಮಾಡಲು ಮಧ್ಯಾಹ್ನ 2 ರಿಂದ ರಾತ್ರಿ 10 ರವರೆಗೆ ಹೌಸ್-ಕೀಪಿಂಗ್ (Housekeeping) ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವೇತನ ಮಾಸಿಕ: 11,000/–, ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ
9731976148

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, N.R.Mohalla ಮುಂತಾದ ಏರಿಯಾಗಳಲ್ಲಿನ ಕಂಪನಿಗಳಿಗೆ Office ಗಳಿಗೆ Showroom ಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ 14,000/– – 36,000/–. ಸಂಪರ್ಕಿಸಿ
7892878915
9353753194

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ರಾಘವೇಂದ್ರ ವೃದ್ಧಾಶ್ರಮ ಸೇವಾ ಫೌಂಡೇಶನ್
1) ಹಿರಿಯ ಜೀವಿಗಳ ಆಶ್ರಯತಾಣ ಹಾಗೆ ಹಿಡಿದ ವೃದ್ಧರು ಪಾರ್ಶ್ವವಾಯು ಪೀಡಿತರು ಹಾಗೂ ಕೈಲಾಗದ ವೃದ್ಧರನ್ನು ಮನೆಯ ವಾತಾವರಣದಂತೆಯೇ ನೋಡಿಕೊಳ್ಳಲಾಗುವುದು.
2) ಹೋಂ ನರ್ಸ್ ಆಗಿ ಇಲ್ಲೇ ಉಳಿದುಕೊಂಡು ನೋಡಿಕೊಳ್ಳುವವರು ಬೇಕಾಗಿದ್ದಾರೆ. ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಹುಡುಗಿಯರ PG ಮತ್ತು ಹುಡುಗರ PG ಸರಸ್ವತಿಪುರಂನಲ್ಲಿ ಇದೆ.
9986557226 / 9945432226

CHEMIST WANTED
For Ayurvedic Medicines mfg. SSI Unit, (PT/FT), Srirampura, Mysore.
9148940447

ಹೊಸ ಮನೆ ಮಾರಾಟಕ್ಕಿದೆ
20x30 ನಂ.590, 2ನೇ ಫೇಸ್, ವಿಜಯನಗರ 4ನೇ ಹಂತ, ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್, ಪೂರ್ವಕ್ಕೆ ಬಾಗಿಲು ಎದುರು ಪಾರ್ಕ್, ಫಿಲ್ಲರ್ ಕಟ್ಟಡ.
9972165301

HOUSE FOR RENT
A Single BHK House in First Floor @ 2nd Main, 9th Cross, Vidyaranyapuram
9740852698

ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ಗೆ ಸ್ಪಾ ತೆರಪಿಸ್ಟ್ ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ. ಸುಮಿತ್ರಾ:
9986106707

ಮಳಿಗೆ ಬಾಡಿಗೆ / ಭೋಗ್ಯಕ್ಕೆ ಇದೆ
ಕಮರ್ಷಿಯಲ್ 1st ಫ್ಲೋರ್ 400 Square feet, 2nd ಫ್ಲೋರ್ 400 Square feet ಡೂಪ್ಲೆಕ್ಸ್ ಗದ್ದಿಗೆ ಮುಖ್ಯರಸ್ತೆ, ಬೋಗಾದಿ 2ನೇ ಹಂತ, ಹರ್ಷ ಬಾರ್ ಸ್ಟಾಪ್ ಹತ್ತಿರ.
9980445050
8317425692

ಮೈಸೂರು ಮಿತ್ರ
43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಗಜಪಯಣಕ್ಕೆ ಸಂಭ್ರಮದ ಚಾಲನೆ









ಒಂದನೇ ಪುಟದಿಂದ

ಎಲೆ, ಅಡಿಕೆಗಳನ್ನು ಇಟ್ಟು ಪೂಜೆ ಸಲ್ಲಿಸಲಾಯಿತು. ಪೂಜೆಯ ನಂತರ ಸಚಿವರು, ಶಾಸಕರು ಸೇರಿದಂತೆ ಇತರ ಜನಪ್ರತಿನಿಧಿಗಳು ಪುಷ್ಪಾರ್ಚನೆ ನೆರವೇರಿಸುವುದರೊಂದಿಗೆ ಗಜಪಯಣಕ್ಕೆ ಚಾಲನೆ ದೊರೆಯಿತು. ಈ ಸಂದರ್ಭ ಆನೆಗಳಿಗೆ ವಿವಿಧ ಹಣ್ಣು, ಹಂಪಲು, ಕಬ್ಬುಗಳನ್ನು ನೀಡಲಾಯಿತು.

ಮೆರುಗು ನೀಡಿದ ಕಲಾವಿದರು: ಗಜಪಯಣದ ಕಾರ್ಯಕ್ರಮಕ್ಕೆ ಜಾನಪದ ಕಲಾತಂಡಗಳು ಮೆರಗು ತುಂಬಿದವು. ಪೂಜಾ ಕುಣಿತ, ಡೊಳ್ಳುಕುಣಿತ, ವೀರಗಾಸೆ ಕುಣಿತ, ಗೊಂಬೆ ಕುಣಿತ, ಕೋಲಾಟ, ಚಂಡೆ ಮದ್ದಳೆ, ನಗಾರಿ, ಸ್ಯಾಕ್ಸೋಫೋನ್ ತಂಡ, ಮಂಗಳವಾದ್ಯ ಸೇರಿದಂತೆ ಇನ್ನಿತರ ಪ್ರಕಾರಗಳ ಜಾನಪದ ಕಲಾ ತಂಡಗಳು ಮೆರಗು ನೀಡಿದವು. ಮಳೆಯ ನಡುವೆಯೂ ಜಾನಪದ ಕಲಾತಂಡಗಳ ಕಲಾವಿದರು ಪ್ರದರ್ಶನ ನೀಡುವ ಮೂಲಕ ಕಾರ್ಯಕ್ರಮಕ್ಕೆ ಕಳೆ ಕಟ್ಟಿದರು.

ಮೆರವಣಿಗೆ: ಕಳೆದ ಎರಡು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ದಸರಾ ಮಹೋತ್ಸವ ಸರಳ ಹಾಗೂ ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತಗೊಳಿಸಲಾಗಿತ್ತು. ಈ ಬಾರಿ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿದ್ದರಿಂದ ಗಜಪಯಣ ಕಾರ್ಯಕ್ರಮವನ್ನು ಸಂಭ್ರಮದಿಂದ ನಡೆಸಲು ಉದ್ದೇಶಿಸಲಾಗಿತ್ತು. ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು, ಶಾಲಾ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿತ್ತು. ಆದರೆ, ನಿರೀಕ್ಷಿಸಿದ್ದ ಪ್ರಮಾಣದಲ್ಲಿ ಜನ ಸೇರಲು ಮಳೆ ಅಡ್ಡಿಯಾಗಿತ್ತು. ಆದರೂ ಸೇರಿದ್ದ ನೂರಾರು ಜನರು, ಜಾನಪದ ಕಲಾತಂಡಗಳೊಂದಿಗೆ ದಸರಾ ಆನೆಗಳನ್ನು ವೀರನಹೊಸಳ್ಳಿ ಗೇಟ್‌ನಿಂದ ನಾಗಾಪುರ ಹಾಡಿ ಸಮೀಪ 1 ಕಿ.ಮಿವರೆಗೂ ಮೆರವಣಿಗೆಯಲ್ಲಿ ಕರೆದೊಯ್ಯ ಲಾಯಿತು. ನೂರಾರು ಯುವತಿಯ ಹಾಗೂ ಮಹಿಳೆಯರು ಗಜಪಡೆಗೆ ಪೂರ್ಣಕುಂಭ ಸ್ವಾಗತ ನೀಡಿದರು. ಇದರಿಂದ ಗಜಪಯಣವನ್ನು ವಿಜೃಂಭಣೆಯಿಂದ ನಡೆಸುವ ಮೂಲಕ ದಸರಾ ಮಹೋತ್ಸವದ ಅದ್ಧೂರಿ ಆಚರಣೆಗೆ ಮುನ್ನುಡಿ ಬರೆಯಲಾಯಿತು.

ತುಂತುರು ಮಳೆ: ಗಜಪಯಣದ ಹಿನ್ನೆಲೆಯಲ್ಲಿ ಆನೆಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಗಜಪೂಜೆಯ ಕಾರ್ಯಕ್ರಮದಿಂದಾಗಿ ವೀರನಹೊಸಹಳ್ಳಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಸಾವಿರಾರು ಜನರನ್ನು ಸೇರಿಸಿ ಆನೆಗಳನ್ನು ಅದ್ದೂರಿಯಾಗಿ ಸ್ವಾಗತಿಸಲು ಅರಣ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿತ್ತು. ಆದರೆ, ಬೆಳಗ್ಗೆಯಿಂದಲೇ ಆರಂಭವಾದ ಮಳೆ ಸಂಭ್ರಮಕ್ಕೆ ಅಡ್ಡಿಯಾಯಿತು. ಮಳೆಯಿಂದಾಗಿ ನಿರೀಕ್ಷಿಸಿದಷ್ಟು ಜನ ಭಾಗವಹಿಸಲಿಲ್ಲ. ಅಧಿಕಾರಿಗಳು ಕೊಡೆಗಳನ್ನು ಹಿಡಿದುಕೊಂಡೇ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಆದರೂ ಕಾರ್ಯಕ್ರಮ ಕಳೆ ಗುಂದಲಿಲ್ಲ.

ಈ ಸಂದರ್ಭದಲ್ಲಿ ಶಾಸಕರಾದ ಹೆಚ್.ಪಿ.ಮಂಜುನಾಥ್, ಎಲ್.ನಾಗೇಂದ್ರ, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ವಿಧಾನ ಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ದೊಡ್ಡಹೆಜ್ಜೂರು ಗ್ರಾ.ಪಂ ಅಧ್ಯಕ್ಷ ಎಂ.ಎಸ್.ಸುಭಾಷ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ಶ್ರೀನಿವಾಸ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ವಿಜಯ್‌ಕುಮಾರ್ ಗೋಗಿ, ಅಪರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಜಗತ್‌ರಾಮ್, ಸಿಎಫ್ ಡಾ.ಎಂ.ಮಾಲತಿ ಪ್ರಿಯಾ, ಜಿಲ್ಲಾಧಿಕಾರಿ ಬಗಾದಿ ಗೌತಮ್, ಎಸ್ಪಿ ಆರ್.ಚೇತನ್, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕೆ.ಕಮಲಾ ಕರಿಕಾಳನ್, ಮೈಸೂರು ನಗರ ಪಾಲಿಕೆ ಸದಸ್ಯರುಗಳು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಮೊದಲ ತಂಡದಲ್ಲಿ ಬಂದ ಆನೆಗಳಿವು: ಇಂದು ಮೊದಲ ತಂಡದಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಅರ್ಜುನ, ಭೀಮ, ಧನಂಜಯ, ಗೋಪಾಲಸ್ವಾಮಿ, ಕುಮ್ಕಿ ಆನೆಗಳಾದ ಕಾವೇರಿ, ಚೈತ್ರ, ಲಕ್ಷ್ಮೀ, ಹೊಸ ಆನೆ ಮಹೇಂದ್ರ ಗಜಪಯಣದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಜೆ ವೇಳೆ ಸುರಕ್ಷಿತವಾಗಿ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನವನ್ನು ತಲುಪಿದವು.

ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ

ಗಜಪಯಣ ವೇದಿಕೆ ಕಾರ್ಯಕ್ರಮಕ್ಕೆ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆರುಗು ನೀಡಿದವು. ಬುಡಕಟ್ಟು ನೃತ್ಯ, ನಾಗಪುರ ಆಶ್ರಮ ಶಾಲೆಯ ವಿದ್ಯಾರ್ಥಿಗಳಿಂದ ಕನ್ನಡಾಂಬೆಯ ನೃತ್ಯ ಎಲ್ಲರನ್ನು ಆಕರ್ಷಿಸಿತು. ಗಿರಿಜನರ ಬುಡಕಟ್ಟು ನೃತ್ಯ, ಟಿಬೇಟಿಯನ್ ಕ್ಯಾಂಪ್ ಮಕ್ಕಳ ನೃತ್ಯ, ಧರ್ಮಾಪುರದ ಮಹದೇವ್ ತಂಡದ ಗಿರಿಜನ ಕಲಾವಿದರ ತಂಡದಿಂದ ಪರಿಸರ ನೃತ್ಯ, ವೀರನಹೊಸಳ್ಳಿ ಆಶ್ರಮ ಶಾಲೆಯ ವಿದ್ಯಾರ್ಥಿಗಳಿಂದ ಬುಡಕಟ್ಟು ಸಾಂಪ್ರದಾಯಿಕ ನೃತ್ಯ ಹಾಗೂ ನಾಗಪುರ ಪ್ರೌಢಶಾಲೆ ವಿದ್ಯಾರ್ಥಿಗಳ ನೃತ್ಯ ಗಜಪಯಣಕ್ಕೆ ಸಂಭ್ರಮದ ವಾತಾವರಣವನ್ನು ಹೆಚ್ಚಿಸಿತು.

ವೇದಿಕೆ ಕಾರ್ಯಕ್ರಮಕ್ಕೆ ಚಕ್ಕರ್ ಹಾಕಿದ ಸಚಿವರು

ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಉಮೇಶ್ ಕತ್ತಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ಪುಷ್ಪಾರ್ಚನೆ ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಸಚಿವರು ಪಾಲ್ಗೊಳ್ಳದೇ ವಾಪಸ್ಸಾಗಿದ್ದಕ್ಕೆ ಹಾಡಿ ಜನರು ಹಾಗೂ ಸ್ಥಳೀಯರು ಬೇಸರ ವ್ಯಕ್ತಪಡಿಸಿದರು. ಸಚಿವರು ಬರುತ್ತಾರೆ, ಆನೆಗಳ ಮಾವುತರ ಸಂಕಷ್ಟ ಆಲಿಸುತ್ತಾರೆ ಎಂದು ನೀರಿಕ್ಷಿಸಿದ್ದ ಮಾವುತ, ಕಾವಾಡಿಗಳಿಗೂ ನಿರಾಸೆಗೆ ಒಳಗಾದರು. ಆನೆಗಳಿಗೆ ಪುಷ್ಪಾರ್ಚನೆ ಮಾಡಿದ ಕೆಲವೇ ಹೊತ್ತಲ್ಲಿ ಸಚಿವರು ವೀರನಹೊಸಳ್ಳಿ ಗೇಟ್‌ನಿಂದಲೇ ಮೈಸೂರಿನತ್ತ ಪ್ರಯಾಣಿಸಿದರು.

ಫಲ ತಾಂಬೂಲ ನೀಡಿ ಆಹ್ವಾನ: ದಸರಾ ಮಹೋತ್ಸವದಲ್ಲಿ ಭಾಗಿಯಾಗಿರುವ ಮೊದಲ ತಂಡದ 9 ಆನೆಗಳ ಕಾವಾಡಿಗಳು ಮತ್ತು ಮಾವುತರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಗಜಪಯಣದ ವೇದಿಕೆ ಕಾರ್ಯಕ್ರಮದಲ್ಲಿ ಫಲ ತಾಂಬೂಲ ನೀಡಿ ಸ್ವಾಗತಿಸಿದರು. ಈ ವೇಳೆ ಅರಣ್ಯ ಇಲಾಖೆಯ ಕೆಲ ಅಧಿಕಾರಿಗಳಿಗೂ ಫಲ–ತಾಂಬೂಲ ನೀಡಲಾಯಿತು.

ಗಣ್ಯರ ಗೈರು: ಗಜಪಯಣಕ್ಕೆ ಸಂಸದರಾದ ಪ್ರತಾಪ್ ಸಿಂಹ, ಶಾಸಕರಾದ ತನ್ವೀರ್ ಸೇಠ್, ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಡಾ. ಯತೀಂದ್ರ ಸಿದ್ದ ರಾಮಯ್ಯ, ಅನಿಲ್ ಚಿಕ್ಕಮಾದು, ಕೆ.ಮಹದೇವು, ಬಿ.ಹರ್ಷವರ್ಧನ, ಅಶ್ವಿನ್‌ಕುಮಾರ್, ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಸೇರಿದಂತೆ ಇತರ ಪ್ರಮುಖ ಜನಪ್ರತಿನಿಧಿಗಳು ಗೈರಾಗಿದ್ದರು.

ಎರಡನೇ ತಂಡದಲ್ಲಿ ಬರುವ ಆನೆಗಳು: ಶ್ರೀರಾಮ, ಪಾರ್ಥಸಾರಥಿ, ಗೋಪಿ, ವಿಜಯ, ವಿಕ್ರಮ ಎರಡನೇ ತಂಡದಲ್ಲಿ ಆಗಮಿಸಲಿವೆ. ಜಂಬೂಸವಾರಿಗೆ ಒಂದು ತಿಂಗಳು ಇರುವಂತೆಯೇ ಎರಡನೇ ತಂಡದ ಆನೆಗಳು ಮೈಸೂರಿಗೆ ಆಗಮಿಸಲಿವೆ.

ಅರಣ್ಯ ಭವನದಲ್ಲಿ ವಾಸ್ತವ್ಯ: ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ 14 ಆನೆಗಳ ಪೈಕಿ ಮೊದಲ ತಂಡದಲ್ಲಿ ಆಗಮಿಸಿರುವ ಅಭಿಮನ್ಯು, ಮಹೇಂದ್ರ, ಕಾವೇರಿ, ಚೈತ್ರ, ಲಕ್ಷ್ಮೀ, ಅರ್ಜುನ, ಗೋಪಾಲಸ್ವಾಮಿ, ಧನಂಜಯ, ಭೀಮ ಆನೆಗಳ ತಂಡ ಮಧ್ಯಾಹ್ನ 2 ಗಂಟೆಗೆ ಮೈಸೂರಿನತ್ತ ಪಯಣ ಬೆಳೆಸಿದವು. ಸಂಜೆ 4ರ ವೇಳೆಗೆ ಮೈಸೂರಿನ ಅರಣ್ಯ ಭವನದ ಆವರಣಕ್ಕೆ ಆಗಮಿಸಿ ವಾಸ್ತವ್ಯ ಹೂಡಿದವು. ಆ. 10ಕ್ಕೆ ಆನೆಗಳ ತಂಡ ಅರಮನೆ ಆವರಣ ಪ್ರವೇಶಿಸಲಿವೆ.

“ಈ ಸಾಲಿನ ದಸರಾ ಮಹೋತ್ಸವದ ಗಜಪಡೆಗೆ ಅರಣ್ಯ ಸಚಿವ ಉಮೇಶ್ ಕತ್ತಿ ಅವರ ಮಾರ್ಗದರ್ಶನದಲ್ಲಿ ಆನೆಗಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವದ ಗಜಪಯಣಕ್ಕೆ ಚಾಲನೆ ನೀಡಿದ್ದೇವೆ. ಪೂಜೆ ಉತ್ತಮವಾಗಿ ನೆರವೇರಿದೆ. ಎಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ. ಮುಂದಿನ ಕಾರ್ಯಕ್ರಮದ ಯಶಸ್ಸಿಗೂ ಕ್ರಮ ಕೈಗೊಳ್ಳಲಾಗುತ್ತದೆ. ವಿರೋಧ ಪಕ್ಷ ನಾಯಕರು, ಜನಪ್ರತಿನಿಧಿಗಳ ವಿಶ್ವಾಸಕ್ಕೆ ತೆಗೆದುಕೊಂಡು ದಸರಾ ಮಹೋ ತ್ಸವವನ್ನು ಅದ್ಧೂರಿಯಾಗಿ ನಡೆಸಲಾಗುತ್ತದೆ.

–ಎಸ್.ಟಿ.ಸೋಮಶೇಖರ್,
ಜಿಲ್ಲಾ ಉಸ್ತುವಾರಿ ಸಚಿವ

ಶೂ ಧರಿಸಿಯೇ ಗಜಪೂಜೆ ಸಲ್ಲಿಸಿದ ಸಚಿವ ಕತ್ತಿ

ಮೈಸೂರು,ಆ.7(ಎಂಟಿವೈ)– ಪ್ರತ್ಯೇಕ ರಾಜ್ಯದ ಕೂಗು ಸೇರಿದಂತೆ ಹಲವು ವಿವಾದಾತ್ಮಕ ಹೇಳಿಕೆ ನೀಡುತ್ತಲೇ ಟೀಕೆಗೆ ಗುರಿಯಾಗುತ್ತಿರುವ ಅರಣ್ಯ ಸಚಿವ ಉಮೇಶ್ ಕತ್ತಿ ಗಜಪಯಣದ ಕಾರ್ಯಕ್ರಮದಲ್ಲಿ ಶೂ ಧರಿಸಿಯೇ ಪೂಜೆ ಮಾಡುವ ಮೂಲಕ ಟೀಕೆಗೆ ಒಳಗಾದರು. ವೀರನಹೊಸಹಳ್ಳಿಯಲ್ಲಿ ನಡೆದ 'ಗಜಪಯಣ'ದ ಕಾರ್ಯಕ್ರಮದಲ್ಲಿ ಪೂಜೆ ವೇಳೆ ಪಾಲ್ಗೊಂ ಡಿದ್ದ ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳು ತಾವು ಧರಿಸಿದ್ದ ಶೂ ಹಾಗೂ ಚಪ್ಪಲಿಯನ್ನು ಬಿಟ್ಟು ಭಕ್ತಿಯಿಂದ ಆನೆಗಳ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆದರೆ, ಸಚಿವ ಉಮೇಶ್ ಕತ್ತಿ ಅವರು ಪೂಜೆ ಮಾಡುವಾಗಿನಿಂದ ಪುಷ್ಪಾರ್ಚನೆ ಮಾಡುವವರೆಗೂ ಶೂ ಧರಿಸಿಯೇ ಇದ್ದರು. ಕಾರ್ಯಕ್ರಮದ ಸಂಪ್ರದಾಯ ದಂತೆ ಗಣ್ಯರೆಲ್ಲರೂ ಪಾದರಕ್ಷೆ ತೆಗೆದು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಹೆಚ್.ಪಿ. ಮಂಜುನಾಥ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸೇರಿದಂತೆ ಎಲ್ಲ ಗಣ್ಯರು ಸಂಪ್ರದಾಯ ವನ್ನು ಪಾಲಿಸಿದ್ದರು. ಆದರೆ, ಸಚಿವ ಉಮೇಶ ಕತ್ತಿ ಕೊನೆಯವರೆಗೂ ಶೂ ಧರಿಸಿಯೇ ಇದ್ದರು. ಇದರಿಂದ ಸಾಮಾಜಿಕ ಜಾಲತಾಣಗಳಲ್ಲಿ ಉಮೇಶ್ ಕತ್ತಿ ವಿರುದ್ಧ ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದರೆ, ಕೆಲವರು ಮಾಜಿ ಸಿಎಂ ಸಿದ್ದರಾಮಯ್ಯ ಸಾಕ್ಸ್ ಹಾಕಿಕೊಂಡು ಪುಷ್ಪಾರ್ಚನೆ ಮಾಡಿದ್ದಕ್ಕೆ ಟೀಕಿಸಿದ್ದವರು ಈಗೇನು ಹೇಳುತ್ತಾರೆ ಎಂದು ಪ್ರಶ್ನಿಸಿದ್ದಾರೆ.

ಉಮೇಶ್ ಕತ್ತಿ ಸ್ಪಷ್ಟನೆ

ಚಾ.ನಗರ: ಗಜಪಡೆ ಬೀಳ್ಕೊಡುವಾಗ ತಾನು ಧರಿಸಿದ್ದು ಬಟ್ಟೆ ಶೂ, ಇದನ್ನು ದೊಡ್ಡ ವಿವಾದ ಮಾಡುವ ಅಗತ್ಯವಿಲ್ಲ ಎಂದು ಸಚಿವ ಉಮೇಶ್ ಕತ್ತಿ ಸ್ಪಷ್ಟನೆ ನೀಡಿದ್ದಾರೆ. ಚಾಮರಾಜ ನಗರ ಜಿಲ್ಲೆ ಮೇಕೆದಾಟು ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದ್ದ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, ಗಜಪಡೆಗೆ ಪೂಜೆ ವೇಳೆ ನಾನು ಶೂ ಧರಿಸಿರಲಿಲ್ಲ. ಆದರೆ ಮಳೆಯಾಗಿದ್ದರಿಂದ ಗಜಪಡೆಯನ್ನು ಬೀಳ್ಕೊಡುವಾಗ ಶೂ ತೆಗೆಯಲಿಲ್ಲ. ಅದು ಬಟ್ಟೆ ಶೂ ಆಗಿದ್ದರಿಂದ ಹಾಗೆ ಮಾಡಿದೆ. ನನಗೆ 61 ವರ್ಷ ವಯಸ್ಸಾಗಿದೆ, ಬುದ್ಧಿ ಇದೆ. ಈ ವಿಚಾರವನ್ನು ದೊಡ್ಡ ವಿವಾದ ಮಾಡುವ ಅಗತ್ಯವಿಲ್ಲ. ಬೇಕಿದ್ದರೆ ನಾನು ಹಾಕಿಕೊಳ್ಳುವ ಶೂ ಪರಿಶೀಲಿಸಬಹುದು, ಅದು ಬಟ್ಟೆಯಿಂದ ಮಾಡಿದ್ದಾಗಿದೆ ಎಂದು ಸಮಜಾಯಿಷಿ ನೀಡಿದ್ದಾರೆ.

ಭೋರ್ಗರೆಯುತ್ತಿದೆ ಮಂಡ್ಯದ ಬೆಂಕಿ ಫಾಲ್ಸ್...!

ಎಂ.ಕೆ.ಮೋಹನ್‌ರಾಜ್

- ಗಗನಚುಕ್ಕಿ, ಜೋಗ್ ಜಲಪಾತ ಮೀರಿಸುತ್ತದೆ ಶಿಂಷಾ ಜಲಪಾತ
- ಬೆಂಗಳೂರಿಗೆ ಸಮೀಪವಿದ್ದರೂ ಜನರಿಗೇ ಗೊತ್ತಿಲ್ಲ ಈ ಫಾಲ್ಸ್
- ನೋಡುಗರ ಮೈ ನವಿರೇಳಿಸುವ ಫಾಲ್ಸ್‌ಗೆ ಬೇಕು ಪ್ರಚಾರ
- ಮೂಲಭೂತ ಸೌಕರ್ಯ ಕಲ್ಪಿಸುವಲ್ಲಿ ಪ್ರವಾಸೋದ್ಯಮ ಇಲಾಖೆ ವಿಫಲ



ಹಲಗೂರು, ಆ.7– ಪ್ರಕೃತಿ ಸೌಂದರ್ಯವನ್ನು ಹೊದ್ದಿಕೊಂಡು ರಾರಾಜಿಸುವ ಜಲಧಾರೆಗಳಿಗೆ ಕರುನಾಡಿನಲ್ಲಿ ಬರವಿಲ್ಲ. ಕೆಲವು ಜಲಪಾತಗಳು ನಿತ್ಯವಾದರೆ, ಮತ್ತೆ ಕೆಲವು ಮಳೆಗಾಲದಲ್ಲಿ ಮಾತ್ರ ಗೋಚರಿಸುತ್ತವೆ. ಈ ರೀತಿ ಮಳೆಗಾಲದಲ್ಲಿ ಗೋಚರಿಸುವ ಜಲಧಾರೆಯೊಂದು ರಾಜಧಾನಿ ಬೆಂಗಳೂರಿಗೆ ಸಮೀಪದಲ್ಲಿಯೇ ಇದೆ. ಆದರೆ, ಈ ಜಲಪಾತ ಎಲ್ಲಿದೆ? ಇದರ ವಿಶೇಷತೆ ಏನೆಂಬುದು ಯಾರಿಗೂ ಅಷ್ಟಾಗಿ ತಿಳಿದಿಲ್ಲ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯ ಗಾಣಾಳು ಸಮೀಪ ಶಿಂಷಾನದಿ ಸೃಷ್ಟಿಸಿರುವ ಈ ಜಲಪಾತ ನೋಡುಗರ ಕಣ್ಮನ ಸೆಳೆಯುತ್ತಿದೆ.

ಈ ಜಲಪಾತ ವರ್ಷಪೂರ್ತಿ ಇರುವುದಿಲ್ಲ. ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗಿ ಶಿಂಷಾನದಿ ತುಂಬಿ ಹರಿದಾಗ ಮಾತ್ರ ಇಲ್ಲಿ ಫಾಲ್ಸ್ ಸೃಷ್ಟಿಯಾಗುತ್ತದೆ. ನೀರಿನ ರಭಸಕ್ಕೆ ಮಂಜಿನ ಹೊಗೆ ಸೃಷ್ಟಿ ಆಗುವುದರಿಂದ ಇದನ್ನು 'ಬೆಂಕಿ ಫಾಲ್ಸ್' ಎಂದು ಕರೆಯಲಾಗುತ್ತದೆ. ಇನ್ನು ಕಾಡಿನ ಮಧ್ಯೆ ಇರುವ ಈ ಫಾಲ್ಸ್‌ಗೆ ಸರಿಯಾದ ರಸ್ತೆ ಮಾರ್ಗ ಇಲ್ಲ. ಹಾಗಾಗಿ, ಮಂಡ್ಯ ಜಿಲ್ಲೆಯ ಜನರಿಗೂ ಕೂಡಾ ಈ ಜಲಪಾತದ ಬಗ್ಗೆ ಅಷ್ಟೇನೂ ತಿಳಿದಿಲ್ಲ.

ನಾನಾ ಹೆಸರುಗಳಿಂದ ಪ್ರಸಿದ್ಧಿ: ಸ್ಥಳೀಯರು ಈ ಜಲಪಾತಕ್ಕೆ ತಮ್ಮ ಕಲ್ಪನೆಯಂತೆ ಹೆಸರಿಟ್ಟಿದ್ದಾರೆ. ಈ ಜಲಪಾತ ಕೊಂಡದಮ್ಮನ ದೇವಸ್ಥಾನದ ಬಳಿ ಇರುವುದರಿಂದ 'ಕೊಂಡ ಫಾಲ್ಸ್' ಎಂತಲೂ, ಶಿಂಷಾ ನದಿಯ ಜಲಪಾತವಾದ್ದರಿಂದ 'ಶಿಂಷಾ ಫಾಲ್ಸ್' ಎಂತಲೂ, ನೀರು ಉಕ್ಕುವಾಗ ಬೆಂಕಿ ಕಾಣುವಂತೆ ಭಾಸವಾಗುವ ಹಿನ್ನೆಲೆಯಲ್ಲಿ 'ಬೆಂಕಿ ಫಾಲ್ಸ್' ಎಂತಲೂ ಕರೆಯಲಾಗುತ್ತದೆ.

ಜಲಧಾರೆಯ ಸೌಂದರ್ಯ ನಿಜಕ್ಕೂ ರೋಮಾಂಚನವಾಗಿದೆ. ಆದರೂ, ಗಗನ ಚುಕ್ಕಿ–ಭರಚುಕ್ಕಿ, ಜೋಗ ಜಲಪಾತದಂತೆ ಪ್ರಕೃತಿ ವೈಭವ ಹೊಂದುವ ಜೊತೆಗೆ, ಅವುಗಳ ಚೆಲುವನ್ನೂ ನಾಚಿಸುವ ಈ ಜಲಪಾತ ಹೆಚ್ಚು ಜನರನ್ನು ಆಕರ್ಷಿಸದಿರುವುದು ನಿಜಕ್ಕೂ ವಿಪರ್ಯಾಸವೇ ಸರಿ.

ಹೋಗುವ ದಾರಿ: ಮಳವಳ್ಳಿ ತಾಲೂಕಿನ ಹಲಗೂರಿನಿಂದ ಮುತ್ತತ್ತಿಗೆ ಹೋಗುವ ಮಾರ್ಗದಲ್ಲಿ ಹಲಗೂರಿನಿಂದ 5ಕಿ.ಮೀ. ಚಲಿಸಿದರೆ ಅಲ್ಲಿ ರಸ್ತೆ ಇಬ್ಭಾಗವಾಗುತ್ತದೆ. ಎಡ ರಸ್ತೆ ಮುತ್ತತ್ತಿಗೆ ಹೋದರೆ, ಬಲ ರಸ್ತೆ ಬೀರೋಟ ಗ್ರಾಮದ ಕಡೆಗೆ ಹೋಗುತ್ತದೆ. ಬೀರೋಟ ಮಾರ್ಗದಲ್ಲಿ ಕರಲಕಟ್ಟೆ, ಗಾಣಾಳು, ಕೆಂಚಬೋವಿದೊಡ್ಡಿ ಗ್ರಾಮಗಳನ್ನು ದಾಟಿದರೆ ಕೆಂಚಬೋವಿದೊಡ್ಡಿ ಗ್ರಾಮ ಬಿಟ್ಟು ಕೇವಲ 200 ಮೀಟರ್ ಸಾಗಿ ಮುಖ್ಯರಸ್ತೆಯಿಂದ ಬಲಕ್ಕೆ ತಿರುಗಿ (ಅಲ್ಲಿ ನಾಮಫಲಕ ಇಲ್ಲದ್ದರಿಂದ ಯಾರನ್ನಾದರೂ ಕೇಳಿದರೆ ಒಳ್ಳೆಯದು) ಕಿರಿದಾದ, ಬೇಲಿ ಇರುವ ರಸ್ತೆಯಲ್ಲಿ ಸಾಗಬೇಕು. ಇಲ್ಲಿಂದ ಕಚ್ಚಾರಸ್ತೆಯಲ್ಲಿ ಮೂರ್ನಾಲ್ಕು ಕಿ.ಮೀ ನಡೆದರೆ ರುದ್ರಮನೋಹರ ಜಲವೈಭವ ನೋಡಬಹುದಾಗಿದೆ.

ಮಾರ್ಗಸೂಚಿ ಕೊರತೆ: ಇಲ್ಲೊಂದು ಜಲಪಾತವಿದೆ ಎಂಬುದನ್ನು ಸೂಚಿಸುವ ಮಾರ್ಗಸೂಚಿಯಾಗಲಿ, ನಾಮಫಲಕಗಳಾಗಲಿ ಇಲ್ಲ. ರಸ್ತೆಯನ್ನು ನೋಡಿದರೆ ಇಲ್ಲಿ ಯಾವ ಜಲಪಾತವೂ ಇಲ್ಲ ಎನ್ನಿಸದಿರದು. ಅಲ್ಲಿ ಯಾರಾದರೂ ದನ–ಕುರಿ ಮೇಯಿಸುವವರು ಸಿಕ್ಕರೆ ಅವರಿಂದಷ್ಟೇ ಮಾಹಿತಿ ಪಡೆದು ಮುಂದೆ ಸಾಗಬಹುದು.

ವಿದ್ಯಾರ್ಥಿಗಳು ಕ್ರೀಡಾ ಮನೋಭಾವ ಮೈಗೂಡಿಸಿಕೊಳ್ಳಲು ಸಲಹೆ



ಪಾಂಡವಪುರ, ಆ.7– ಕ್ರೀಡಾಕೂಟದಲ್ಲಿ ಸೋಲು–ಗೆಲುವು ಸಾಮಾನ್ಯವಾಗಿದ್ದು, ವಿದ್ಯಾರ್ಥಿಗಳು ಇದನ್ನು ಸಮಾನವಾಗಿ ಸ್ವೀಕರಿಸುವ ಮೂಲಕ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬೇಕು. ಕ್ರೀಡಾ ಮನೋಭಾವ ಮೈಗೂಡಿಸಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ ಸಲಹೆ ನೀಡಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಡೆದ 2022–23ನೇ ಹಿರಿಯ ಪ್ರಾಥಮಿಕ ಶಾಲೆಗಳ ಟೌನ್ ವೃತ್ತ ಮಟ್ಟದ ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಅವರು, ಗ್ರಾಮೀಣ ಮಕ್ಕಳು ಎಲ್ಲಾ ಕ್ರೀಡೆಗಳಲ್ಲಿ ಪಾಲ್ಗೊಂಡು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಇವರಿಗೆ ಶಿಕ್ಷಕರು ಉತ್ತಮ ಮಾರ್ಗದರ್ಶನ ನೀಡುವ ಮೂಲಕ ಇವರ ಪ್ರತಿಭೆಗೆ ಸೂಕ್ತ ಅವಕಾಶ ಕಲ್ಪಿಸಬೇಕು ಎಂದರು. ಗ್ರಾಮೀಣ ಭಾಗದ ಹೆಚ್ಚಿನ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಸತತ ಪರಿಶ್ರಮ, ಗುರಿಮುಟ್ಟುವ ಛಲವನ್ನು ಕ್ರೀಡಾಪಟುಗಳು ಮೈಗೂಡಿಸಿಕೊಂಡು ಉತ್ತಮ ಕ್ರೀಡಾಪಟುಗಳಾಗಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ವೀಣಾ ಮಾತನಾಡಿ, ವಿದ್ಯಾರ್ಥಿಗಳು ಮೊದಲು ಶಿಸ್ತು–ಸಂಯಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡುವ ಜೊತೆಗೆ ಕ್ರೀಡೆಯಲ್ಲಿ ಭಾಗವಹಿ ಸಿದರೆ ಖಂಡಿತವಾಗಿ ಜಯಗಳಿಸಲು ಸಾಧ್ಯವಾಗುತ್ತದೆ ಎಂದರು.

ಗುಂಡು ಎಸೆಯುವ ಮೂಲಕ ಕಾರ್ಯಕ್ರಮವನ್ನು ಪುರಸಭೆ ಅಧ್ಯಕ್ಷೆ ಅರ್ಚನಾ ಚಂದ್ರು ಚಾಲನೆ ನೀಡಿದರು. ಕ್ರೀಡಾ ಜ್ಯೋತಿಯನ್ನು ಪುರಸಭೆ ಸದಸ್ಯ ಬಿ.ವೈ.ಬಾಬು ಸ್ವೀಕರಿಸಿದರು. ಕ್ರೀಡೆಯಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು.

ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಬಸವರಾಜು, ಗ್ರೇಡ್–1 ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಶಿವಕುಮಾರ್, ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ್, ಶಿಕ್ಷಕರಾದ ಚಂದ್ರಶೇಖರ್, ಬಸವರಾಜು ಹಾಜರಿದ್ದರು.

ಜಾನಪದ ಕಲೆ ಉಳಿಸಿ, ಬೆಳೆಸಲು ಮುಂದಾಗಿ: ನಲಿಕೃ



ಮದ್ದೂರು, ಆ.7– ಜಾನಪದ ಕಲೆಗಳು ಅಳಿವಿನಂಚಿಗೆ ತಲುಪುತ್ತಿದ್ದು, ಆಧುನಿಕ ಸಮಾಜದಲ್ಲಿ ನಾಗರಿಕರು ಪ್ರಾಚೀನ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಜಾನಪದ ಕಲೆ ಉಳಿಸಿ, ಬೆಳೆಸಲು ಎಲ್ಲರೂ ಮುಂದಾಗಬೇಕು ಎಂದು ಪ್ರಾತಿಪರ ಸಂಘಟನೆಗಳ ಒಕ್ಕೂಟದ ಮಾರ್ಗದರ್ಶಕ ನ.ಲಿ.ಕೃಷ್ಣ ಸಲಹೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಕರ್ನಾಟಕ ಜನಪದ ಪರಿಷತ್ ಪದಾಧಿಕಾರಿಗಳ ಸಭೆ ಮತ್ತು ನೂತನ ಸಮಿತಿಯ ಆಯ್ಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಾನಪದ ಕಲಾವಿದರು ಅಸಂಘಟಿತ ವರ್ಗದಲ್ಲಿದ್ದಾರೆ. ಕಲಾವಿದರೂ ಸಂಘಟಿತರಾಗಿ ಹಕ್ಕುಗಳಿಗಾಗಿ ನಿರಂತರವಾಗಿ ದುಡಿಯಬೇಕಾದ ಅನಿವಾರ್ಯತೆ ಇದೆ. ಆಧುನಿಕ ದಿನಗಳಲ್ಲಿ ಜಾನಪದ ಕಲೆಗಳು ನಶಿಸಿ ಹೋಗುತ್ತಿವೆ. ನಿಜವಾದ ಕಲಾವಿದರನ್ನು ಗುರುತಿಸಿ ಗೌರವಿಸಬೇಕಾದದ್ದು, ಪ್ರತಿಯೊಬ್ಬರ ಜವಾಬ್ದಾರಿ. ಕರ್ನಾಟಕ ಜಾನಪದ ಪರಿಷತ್ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕು ಎಂದರು.

ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಪಿ.ಸ್ವಾಮಿ ಮಾತನಾಡಿ, ಜಾನಪದ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸಬೇಕಾದರೆ ಸಂಘಟನೆ ಅತ್ಯಗತ್ಯ. ಮುಂದಿನ ದಿನಗಳಲ್ಲಿ ಜಾನಪದ ಉತ್ಸವವನ್ನು ಮಾಡಲು ಎಲ್ಲಾ ರೀತಿಯ ತಯಾರಿ ಮಾಡಲಾಗಿದೆ. ತಾಲೂಕು ಘಟಕದ ಪದಾಧಿಕಾರಿಗಳು ಕ್ರಿಯಾಶೀಲರಾಗಿ ಕೆಲಸ ಮಾಡಿ ಕಲಾವಿದರನ್ನು ಗುರುತಿಸಿ ಸಂಘಟನೆ ವಿಸ್ತರಿಸಬೇಕು ಎಂದರು.

ಈ ವೇಳೆ ನೂತನ ಗೌರವಾಧ್ಯಕ್ಷರಾಗಿ ವಿನಯ, ರಾಮಕೃಷ್ಣ, ಲಕ್ಷ್ಮೀ, ಮಂಜುಳಾ, ಬೋರೇಗೌಡ, ಗೌರವ ಮಾರ್ಗದರ್ಶಕರಾಗಿ ನ.ಲಿ.ಕೃಷ್ಣ ಚಿಕ್ಕಬೋರಯ್ಯ, ಅಧ್ಯಕ್ಷರಾಗಿ ಚಾಮನಹಳ್ಳಿ ಮಂಜು, ಉಪಾಧ್ಯಕ್ಷರಾಗಿ ಆನೆದೊಡ್ಡಿ ಜಯರಾಮು, ಬೈರೇಗೌಡ, ಜಿ.ಬಿ.ಮಿಥುನ್, ಪ್ರಧಾನ ಕಾರ್ಯದರ್ಶಿ ಜಯಲಕ್ಷ್ಮೀ, ಪುಟ್ಟಸ್ವಾಮಿ, ಖಜಾಂಚಿ ಕೆ.ಟಿ. ಶಿವಕುಮಾರ, ಸಂಚಾಲಕರಾಗಿ ಬಿ.ಎಂ. ಸತ್ಯ, ಸಿ.ಎಸ್.ಕುಮಾರ್, ನಾರಾಯಣಸ್ವಾಮಿ, ಡಿ.ವೈ.ನಾಗೇಶ್, ಹುಣಸೆಮರದ ದೊಡ್ಡಿ ಸ್ವಾಮಿ, ಪತ್ರಿಕಾ ಕಾರ್ಯದರ್ಶಿಯಾಗಿ ಬಿ.ಎ. ಮಧುಕುಮಾರ, ನಿರ್ದೇಶಕರಾಗಿ ಗುರುಸಿದ್ದಯ್ಯ, ಸಬ್ಬನಹಳ್ಳಿ ಕುಮಾರ್, ಬಿ.ಎಂ. ಮುತ್ತುರಾಜು, ಚೌಡಯ್ಯ, ಸಿ.ಬಿ.ಶೋಭಾ, ಸುಂದರೇಶ, ಜಯಣ್ಣ, ನಿಂಗರಾಜು, ಅನಿಲ್, ಶಿವಣ್ಣ ಸ್ವಾಮಿ, ಸವಿತಾ ಚಂದ್ರೇಶ್, ಸಿ.ಎಸ್.ಮಹದೇವು, ಸಿದ್ದೇಗೌಡ, ತಿಪ್ಪೂರು ಮನು, ಧರಣಿ ಪುಟ್ಟೇಗೌಡ, ಶೇಖರ್, ವೆಂಕಟೇಶ್, ಅನಿಲ್‌ಕುಮಾರ್, ಜಯಮ್ಮ ಸಿ.ಎಸ್. ಸಿದ್ದರಾಜು ಅವನ್ನು ಆಯ್ಕೆ ಮಾಡಲಾಯಿತು.

ಇಂದು ವಿದ್ಯುತ್ ವ್ಯತ್ಯಯ

ಮದ್ದೂರು, ಆ.7– ತಾಲೂಕಿನ ಕೆ.ಎಂ. ದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹೊಸ ಸಿಟಿ ಹಾಗೂ ಪಿಟಿ ಅಳವಡಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ. 8ರ ಬೆಳಗ್ಗೆ 8.30ರಿಂದ ಸಂಜೆ 6.30ವರೆಗೆ ಅಂಬರಹಳ್ಳಿ, ಬಿದರಹಳ್ಳಿ, ಡಿ.ಎ.ಕೆರೆ, ಮಡೇನಹಳ್ಳಿ, ಯಲಾದಹಳ್ಳಿ, ತೊರೆಬೊಮ್ಮನಹಳ್ಳಿ ಮತ್ತು ಮೆಣಸಗೆರೆ ಫೀಡರ್‌ಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರನಿಗೆ ಗಾಯ

ನಾಗಮಂಗಲ, ಆ.7– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹೊಣಕೆರೆ ಹೋಬಳಿಯ ಕೊಣನೂರು ಗ್ರಾಮದ ಬಳಿ ನಡೆದಿದೆ. ಗ್ರಾಮದ ನಿವಾಸಿ ಹಾಗೂ ನಿವೃತ್ತ ಚೆಸ್ಕಾಂ ನೌಕರ ರಾಜಣ್ಣ ಗಾಯಗೊಂಡವರು. ಇವರು ಮನೆಯಿಂದ ಕೆಲಸ ನಿಮಿತ್ತ ಬೈಕ್‌ನಲ್ಲಿ ಪಟ್ಟಣಕ್ಕೆ ಹೋಗುತ್ತಿದ್ದಾಗ ಮೈಸೂರು ಕಡೆಯಿಂದ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದಿದೆ. ಪರಿಣಾಮ ರಾಜಣ್ಣ ಅವರ ಎಡಗಾಲು ಮುರಿತವಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ಇವರನ್ನು ಸ್ಥಳೀಯರು ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿ ಚುಂಚನಗಿರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಗಾಂಜಾ ಮಾರಾಟ: ಇಬ್ಬರ ಬಂಧನ

ಮಳವಳ್ಳಿ, ಆ.7– ಪಟ್ಟಣದ ಸಾರ್ವಜನಿಕ ಪ್ರದೇಶದಲ್ಲಿ ಗಾಂಜಾ ಮಾರಾಟ ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಪುರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎ.ಕೆ.ರಾಜೇಶ್ ನೇತೃತ್ವದ ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಪಟ್ಟಣದ ಸಿದ್ಧಾರ್ಥ ನಗರ ಬಡಾವಣೆಯ ಎಂ.ಶುಶ್ರುತ ಬಿನ್ ಮಹದೇವಸ್ವಾಮಿ, ಡಿ.ಜೆ.ಶಿವಾನಂದ ಬಿನ್ ಯೋಗರಾಜ್ ಬಂಧಿತ ಆರೋಪಿಗಳಾಗಿದ್ದಾರೆ. ಇವರಿಂದ 22 ಗ್ರಾಂ. ಗಾಂಜಾ ವಶಪಡಿಸಿಕೊಂಡಿದ್ದಾರೆ. ಇವರು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಾರ್ವಜನಿಕ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದಾರೆಂಬ ಖಚಿತ ಮಾಹಿತಿ ಮೇರೆಗೆ ಪುರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎ.ಕೆ.ರಾಜೇಶ್, ಎಸ್‌ಐ ಸಿದ್ಧರಾಜು, ಎಎಸ್‌ಐ ಸುರೇಶ್, ಸಿಬ್ಬಂದಿ ಮಾದೇಶ್, ಪ್ರಕಾಶ್, ಉಮೇಶ್ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೀರನ್ನು ಕುದಿಸಿ ಆರಿಸಿ ಕುಡಿಯಿರಿ

ಮಂಡ್ಯ, ಆ.7– ಮಂಡ್ಯ ನಗರದಾದ್ಯಂತ ಹಾಗೂ ಕಾವೇರಿ ನದಿ ಬೇಸಿನ್‌ನಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ನಗರದ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕುಡಿಯುವ ನೀರು ಸರಬರಾಜು ಕೊಳವೆ ಮಾರ್ಗದ ಮೂಲಕ ಸರಬರಾಜಾಗುವ ನೀರನ್ನು ಕುದಿಸಿ ಆರಿಸಿ ಕುಡಿಯಬೇಕೆಂದು ಮಂಡ್ಯ ಉಪ ವಿಭಾಗ ಕನೀಸ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಕಾವೇರಿ

ಕುಶಾಲನಗರ ಸಾಯಿ, ಕುವೆಂಪು ಬಡಾವಣೆಗೆ ನುಗ್ಗಿದ ನೀರು



- ಭಯದಿಂದ ಮನೆ ಖಾಲಿ ಮಾಡುತ್ತಿರುವ ನಿವಾಸಿಗಳು
- ಹಲವೆಡೆ ಗದ್ದೆ ಮುಳುಗಡೆ
- ಮುಳುಗಿದ ಸೋಪಾನಕಟ್ಟೆ

ಕುಶಾಲನಗರ, ಆ.7– ಜೀವನದಿ ಕಾವೇರಿ ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ಬಡಾವಣೆಗಳಿಗೆ ನೀರು ನುಗ್ಗಿ ಅಲ್ಲಿನ ನಿವಾಸಿಗಳು ಆತಂಕ ದಿಂದ ಸುರಕ್ಷಿತ ಪ್ರದೇಶಗಳತ್ತ ತೆರಳುತ್ತಿದ್ದಾರೆ.

ಹಾರಂಗಿ ಜಲಾಶಯದಿಂದ 20 ಸಾವಿರ ಕ್ಯೂಸೆಕ್ ನೀರು ಬಿಡುಗಡೆ. ಕೆಳಸೇತುವೆ ಮುಳುಗಡೆ ಯಾಗಿದೆ. ಹಲವು ಗ್ರಾಮಗಳಿಗೆ ಸಂಪರ್ಕ ಕಡಿತ ಗೊಂಡಿದೆ. ಕುಶಾಲನಗರ ಜಿಲ್ಲೆಯಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನಾಡಿನ ಜೀವ ನದಿ ಕಾವೇರಿ ಭಾನುವಾರ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ನದಿಯ ಹೆಚ್ಚುವರಿ ನೀರು ಸಾಯಿ ಹಾಗೂ ಕುವೆಂಪು ಬಡಾವಣೆಗಳಿಗೆ ನುಗ್ಗುತ್ತಿದೆ.

ನದಿಯ ನೀರು ರಾಜಕಾಲುವೆ ಮೂಲಕ ಬಡಾವಣೆಗೆ ನುಗ್ಗುತ್ತಿರುವ ಹಿನ್ನೆಲೆಯಲ್ಲಿ ಮತ್ತೆ ಪ್ರವಾಹ ಪರಿಸ್ಥಿತಿ ಎದುರಾಗಬಹುದು ಎಂಬ ಆತಂಕ ನಿವಾಸಿಗಳಿಗೆ ಉಂಟಾಗಿದೆ. ಇದರಿಂದ ಜನರು ತಮ್ಮ ಮನೆಯ ಸಾಮಗ್ರಿಗಳನ್ನು ಲಾರಿಯಲ್ಲಿ ತುಂಬಿಸಿಕೊಂಡು ಸುರಕ್ಷಿತ ಪ್ರದೇಶಗಳತ್ತ ತೆರಳುತ್ತಿದ್ದಾರೆ. ಕಳೆದ ವಾರ ಬಿಡುವು ಕೊಟ್ಟಿದ್ದ ಮಳೆ ಈಗ ಮತ್ತೆ ಆರಂಭಗೊಂಡಿದೆ.



ಹಾರಂಗಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಜಲಾಶಯದಿಂದ ಸುಮಾರು 20 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಬಿಡಲಾಗಿದೆ. ಜೊತೆಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಮೂರು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಹಳ್ಳ, ಕೊಳ್ಳಗಳಲ್ಲಿ ನೀರಿನ ಹರಿವು ಏರತೊಡಗಿದೆ. ಕೆರೆಗಳಲ್ಲಿಯೂ ಕೂಡ ನೀರಿನ ಮಟ್ಟದಲ್ಲಿ ಹೆಚ್ಚಳ ಕಂಡುಬಂದಿದ್ದು, ಗದ್ದೆಗಳು ನೀರಿನಿಂದ ಜಲಾವೃತ ಗೊಂಡಿವೆ. ಕಣಿವೆ ಬಳಿಯ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ನೀರು ಪಕ್ಕದ ಹಳೆ ಕೂಡಿಗೆ ವಾಟರ್ ಗೇಜ್ ಬಳಿಯ ಕುಮಾರ್ ಎಂಬುವವರ ಗದ್ದೆಗೆ ನೀರು ನುಗ್ಗಿದ್ದು, ಸಂಪೂರ್ಣ ಜಲಾವೃತಗೊಂಡಿದೆ.

ಜಿಲ್ಲೆಯಲ್ಲಿ ಇಂದು ಶಾಲೆಗಳಿಗೆ ರಜೆ

ಮಡಿಕೇರಿ, ಆ.7– ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರೆದಿದ್ದು, ಸೋಮವಾರ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳು ಮತ್ತು ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಈ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ವೇದ ಮೂರ್ತಿ ಅವರು ಆದೇಶ ಹೊರಡಿಸಿದ್ದಾರೆ.

ಅದೇ ರೀತಿ ಕುಶಾಲನಗರ ಬಳಿಯ ಗಂಧದಕೋಟೆ ತೊಡು ಜಲಾವೃತಗೊಂಡಿದೆ ಕುಶಾಲನಗರ ಹೋಬಳಿ ವ್ಯಾಪ್ತಿಯ ಚಿಕ್ಲಿಹೊಳೆ ಜಲಾಶಯ ಈಗಾಗಲೇ ಸಂಪೂರ್ಣ ಭರ್ತಿಯಾಗಿದೆ. ಹಾರಂಗಿ ಜಲಾಶಯಕ್ಕೆ ನೀರಿನ ಒಳಹರಿವಿನಲ್ಲಿ ಏರಿಕೆ ಕಂಡು ಬಂದಿದೆ. ಉತ್ತಮ ಮಳೆ ಆಗುತ್ತಿರುವುದರಿಂದ ಕೃಷಿ ಚಟುವಟಿಕೆ ಆರಂಭಗೊಂಡಿದೆ. ಕುಶಾಲನಗರ, ಸುಂಟಿಕೊಪ್ಪ, ನಂಜರಾಯಪಟ್ಟಣ, ವಾಲ್ನೂರು, ಶಿರಂಗಾಲ, ಹೆಬ್ಬಾಲೆ, ಸಿದ್ದಲಿಂಗಪುರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ನಿರಂತರವಾಗಿ ಸುರಿಯುತ್ತಿದೆ.

ರಭಸದಿಂದ ಸುರಿಯುತ್ತಿರುವ ಗಾಳಿ ಮಳೆಯಿಂದಾಗಿ ಅನೇಕ ಕಡೆಗಳಲ್ಲಿ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ. ಕಾವೇರಿ ನದಿಯಲ್ಲಿ ನೀರಿನ ಮಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡು ಬರುತ್ತಿದ್ದು, ಮೈದುಂಬಿ ಹರಿಯುತ್ತಿದೆ. ನದಿ ಪಾತ್ರದ ಜನತೆ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ಮೀನುಗಾರರು ಎಚ್ಚರಿಕೆಯಿಂದ ಇರುವಂತೆ ನೀರಾವರಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಪುಟ್ಟಸ್ವಾಮಿ ಸೂಚನೆ ನೀಡಿದ್ದಾರೆ.

ಮುಳುಗಿದ ಸೋಪಾನಕಟ್ಟೆ: ಪಟ್ಟಣದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಕಾವೇರಿ ನದಿ ಮೈ ದುಂಬಿ ಹರಿಯುತ್ತಿದ್ದು, ಇಲ್ಲಿನ ಸೋಪಾನಕಟ್ಟೆ ಮುಳುಗಡೆಯಾಗಿದೆ ಇದರಿಂದ ಮಹಿಳೆಯರು ಬಟ್ಟೆತೊಳೆಯಲು ಹೋಗದಂತ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ನೀರಿನ ಪ್ರಮಾಣ ಕೂಡ ಕ್ಷಣದಿಂದ ಕ್ಷಣಕ್ಕೆ ಏರಿಕೆಯಾಗುತ್ತಿದೆ.

ಜಲಾಶಯದಿಂದ ನೀರು ಹರಿಸುವ ಮುನ್ನ ಸೈರನ್ ಮೊಳಗಿಸಿ ನದಿ ತಟದ ಜನರಿಗೆ ಅಪಾಯದ ಮುನ್ಸೂಚನೆ ನೀಡಿದ ಬಳಿಕ ನೀರು ಹರಿಸಲಾಗುತ್ತಿದ್ದು ನದಿ ತಟದ ಜನತೆ ಎಚ್ಚರಿಕೆ ವಹಿಸಬೇಕು ಎಂದು ನೀರಾವರಿ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಕೊಡಗು ಮಳೆಹಾನಿ ಪರಿಹಾರ ವಿತರಣೆಯಲ್ಲಿ ತಾರತಮ್ಯ ಮಾಡಿಲ್ಲ

ಸಾಮಾಜಿಕ ಜಾಲತಾಣಗಳಲ್ಲಿ ತಾರತಮ್ಯ ಆರೋಪಕ್ಕೆ ಶಾಸಕರು, ಜಿಲ್ಲಾಧಿಕಾರಿಗಳ ಸ್ಪಷ್ಟನೆ

- ಪರಿಹಾರ ಹಣ ಕಡಿಮೆ ಇರುವ ಜಿಲ್ಲೆಗಳಿಗೆ ಮಾತ್ರ ಹಣ ಬಿಡುಗಡೆ
- ಕೊಡಗು ಜಿಲ್ಲೆಯಲ್ಲಿ 35 ಕೋಟಿ ರೂ. ಇದೆ: ಜಿಲ್ಲಾಧಿಕಾರಿ

ಮಡಿಕೇರಿ, ಆ.7– ರಾಜ್ಯ ಸರಕಾರ ಮಳೆ ಪರಿಹಾರ ವಿತರಣೆಯಲ್ಲಿ ತಾರತಮ್ಯ ಮಾಡಿಲ್ಲ ಎಂದು ಶಾಸಕ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಮತ್ತು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಮಳೆ ಹಾನಿ ಪ್ರದೇಶಗಳಿಗೆ ತುರ್ತು ಪರಿಹಾರ ಬಿಡುಗಡೆ ಮಾಡಿದ್ದು, ಆ ಪಟ್ಟಿಯಲ್ಲಿ ಕೊಡಗು ಜಿಲ್ಲೆಯ ಹೆಸರು ಇರಲಿಲ್ಲ. ಇದರಿಂದ ಆಕ್ರೋಶಗೊಂಡ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಸರಕಾರ ಕೊಡಗಿಗೆ ಮಲತಾಯಿ ಧೋರಣೆ ತೋರುತ್ತಿದೆ ಎಂದು ಆರೋಪಿಸಿದರಲ್ಲದೇ, ಜಿಲ್ಲೆಯ ಶಾಸಕರು, ಸಂಸದರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ಇದಕ್ಕೆ ಸ್ಪಷ್ಟನೆ ನೀಡಿದ ಶಾಸಕ ಕೆ.ಜಿ. ಬೋಪಯ್ಯ, ಮುಖ್ಯಮಂತ್ರಿಗಳು ಮಳೆಹಾನಿ ಪ್ರದೇಶಗಳಿಗೆ ತುರ್ತು ಪರಿಹಾರ ನೀಡಲು ಮಾತ್ರವೇ ಹಣ ಬಿಡುಗಡೆ ಮಾಡಿದ್ದಾರೆ. ಆ ಹಣವನ್ನು ಪರಿಹಾರಕ್ಕೆ ಮಾತ್ರವೇ ಮೀಸಲಿಡಲಾಗಿದೆ. ಬೆಳೆಹಾನಿ, ರಸ್ತೆ, ಸೇತುವೆ, ಮೂಲಭೂತ ಸೌಕರ್ಯಗಳ ದುರಸ್ತಿಗಾಗಿ ಬಿಡುಗಡೆಯಾದ ಪರಿಹಾರ ಅಲ್ಲ ಎಂದು ಸ್ಪಷ್ಟಪಡಿಸಿದರು.

ಕೊಡಗು ಜಿಲ್ಲಾಧಿಕಾರಿ ಖಾತೆಯಲ್ಲಿ ಈಗಾಗಲೇ 71 ಕೋಟಿ ರೂ.ಗಳ ಹಣವಿದೆ. ಆ ಪೈಕಿ ತುರ್ತು ಕಾಮಗಾರಿ ನಿರ್ವಹಣೆಗಾಗಿ 35 ಕೋಟಿ ರೂ.ಗಳನ್ನು ಬಳಸಬಹುದಾಗಿದೆ. ಈಗಾಗಲೇ ಸಂಪೂರ್ಣ ಮನೆ ಕಳೆದು ಕೊಂಡವರಿಗೆ 95 ಸಾವಿರ ನೀಡಲಾಗಿದೆ. ಇನ್ನುಳಿದ ಹಣವನ್ನು ಮಳೆ ಇಳಿಕೆಯಾದ ಬಳಿಕ ನೀಡಲಾಗುತ್ತದೆ. ಮನೆಯಲ್ಲಿದ್ದ ವಸ್ತುಗಳು ಹಾನಿಯಾಗಿದ್ದರೆ 10 ಸಾವಿರ ಪರಿಹಾರ ನೀಡಲಾಗುತ್ತಿದೆ. ಭಾಗಶಃ ಮನೆ ಬಿದ್ದಿದ್ದರೆ 3 ಲಕ್ಷ, ಅಲ್ಪ ಹಾನಿಯಾಗಿದ್ದರೆ 1 ಲಕ್ಷ ರೂ.ಗಳನ್ನು ನೀಡಲಾಗುತ್ತದೆ. ಕಾಳಜಿ ಕೇಂದ್ರದಲ್ಲಿದ್ದವರು ಮನೆಗೆ ತೆರಳುವ ಸಂದರ್ಭ 15 ದಿನಕ್ಕಾಗುವಷ್ಟು ದಿನ ಬಳಕೆ ವಸ್ತುಗಳನ್ನು ನೀಡಲಾಗುತ್ತದೆ ಎಂದು ಕೆ.ಜಿ. ಬೋಪಯ್ಯ ಮಾಹಿತಿ ನೀಡಿದರು. ಜನತೆ ಯಾವುದೇ ರೀತಿಯಲ್ಲಿ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಅಭಯ ನೀಡಿದ್ದಾರೆ. ಮಡಿಕೇರಿ ತಾಲೂಕಿನ 8 ಗ್ರಾಮ ಪಂಚಾಯತ್‌ನಲ್ಲಿ 18 ಮನೆಗಳು ಹಾನಿಗೊಳಗಾಗಿವೆ. 10 ಲಕ್ಷ ರೂ. ಪರಿಹಾರ ನೀಡಲಾಗಿದೆ. ಸಂಪೂರ್ಣ ಮನೆ ಕಳೆದುಕೊಂಡವರಿಗೆ 5 ಲಕ್ಷ ರು. ಪರಿಹಾರ ನೀಡಲಾಗುತ್ತಿದೆ. ಯಾರದ್ದೇ ಟೀಕೆಗಳಿಗೆ ಜನ ಕಿವಿಗೊಡಬೇಡಿ. ಕೊಡಗಿನ ಶಾಸಕರು ಜಿಲ್ಲೆಯ ಜನರ ಹಿತಕಾಯಲು ಬದ್ಧರಾಗಿದ್ದೇವೆ ಎಂದು ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅಭಯ ನೀಡಿದ್ದಾರೆ.

ವಿರಾಜಪೇಟೆಯಲ್ಲಿ ಯಾಂತ್ರೀಕೃತ ಭತ್ತ ಬೇಸಾಯಕ್ಕೆ ಚಾಲನೆ



ವಿರಾಜಪೇಟೆ, ಆ.7– ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಕೊಡಗು ಜಿಲ್ಲೆಯಲ್ಲಿ ಯಂತ್ರದ ಮೂಲಕ ಭತ್ತ ಬೇಸಾಯ ಅನುಷ್ಠಾನಕ್ಕೆ ತಂದು ಹಡಿಲು(ಪಾಳು) ಭೂಮಿಗೆ ಹೊಸ ಜೀವ ನೀಡಿ ದೇಶಕ್ಕೆ ಮಾದರಿಯಾಗಿದೆ ಎಂದು ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ 2022–23ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ 1000 ಎಕರೆ ಪ್ರದೇಶದಲ್ಲಿ ಅನುಷ್ಠಾನಗೊಳ್ಳುತ್ತಿರುವ ಯಾಂತ್ರಿಕೃತ ಭತ್ತ ಬೇಸಾಯ (ಯಂತ್ರಶ್ರೀ) ಯೋಜನೆಗೆ ವಿರಾಜಪೇಟೆ ಬಳಿಯ ಮಗ್ಗುಲ ಗ್ರಾಮದ ವಾಟೇರಿರ ಎಸ್.ಪೂವಯ್ಯ ಅವರ ಭತ್ತದ ಗದ್ದೆಯಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಯಂತ್ರದ ಮೂಲಕ ಭತ್ತದ ಕೃಷಿ ಮಾಡುತ್ತಿರುವುದು ಗದ್ದೆಗೆ ಹೊಸ ಜೀವ ನೀಡಿದಂತಾಗಿದೆ. ಇದು ಉತ್ತಮ ಕಾರ್ಯ ಎಂದರು.

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಶಬಾನಾ ಎಂ.ಶೇಖ್ ಅವರು, ಯಂತ್ರದ ಮೂಲಕ ಯಂತ್ರಶ್ರೀ ನಾಟಿಗೆ ಚಾಲನೆ ನೀಡಿದ ಬಳಿಕ ಮಾತನಾಡಿ, ಕರ್ನಾಟಕ ಸರ್ಕಾರ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಬಾಡಿಗೆ ಅಧಾರಿತ ಸೇವಾ ಕೇಂದ್ರ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿದ್ದು ಇದನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾದರಿಯಾಗಿ ಅನುಷ್ಠಾನಗೊಳಿಸಿದೆ. ಇದರಿಂದ ಸಾವಿರಾರು ಜನರಿಗೆ ಉಪಯೋಗವಾಗಿದೆ ಎಂದರು.

ಗ್ರಾಮಾಭಿವೃದ್ಧಿ ಯೋಜನೆಯ ಕೊಡಗು ನಿರ್ದೇಶಕರಾದ ಲೀಲಾವತಿ ಮಾತಾಡಿದರು. ಮಡಿಕೇರಿ ಘಟಕದ ವಿಸ್ತರಣಾಧಿಕಾರಿ ಡಾ. ಕೆಂಚಾರೆಡ್ಡಿ ಮಾತಾಡಿ, ರೈತರಿಗೆ ನೀಡುತ್ತಿರುವ ತರಬೇತಿಗಳ ಪ್ರಾತ್ಯಕ್ಷಿಕೆಗಳ ಬಗ್ಗೆ ತಿಳಿಸಿಕೊಟ್ಟರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ, ವಿರೇಂದ್ರ ಕುಮಾರ್ ಭತ್ತದ ಬೆಳೆಯಲ್ಲಿ ಬರುವ ರೋಗಗಳ ಹತೋಟಿ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸಹಾಯಕ ಕೃಷಿ ನಿರ್ದೇಶಕ ಶಿವಮೂರ್ತಿ ಕೃಷಿ ಸವಲತ್ತಿನ ಬಗ್ಗೆ ತಿಳಿಸಿದರು. ವಲಯ ಮೇಲ್ವಿಚಾರಕ ನಾಗರಾಜ್ ಮಾತನಾಡಿದರು. ಮಗ್ಗುಲ ಗ್ರಾಮದ ವಾಟೇರಿರ ಎಸ್. ಪೂವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಮಂಗಳೂರು ಮುಲ್ಕಿಯ ನವಿನ್ ಚಂದ್ರ ನಿತ್ಯಾನಂದ ಆಗ್ರೋ ಕೈ ಚಾಲಿತ ಯಂತ್ರದ ಮೂಲಕ ಬೀಜ ಹಾಕುವ ಪ್ರಾತ್ಯಕ್ಷಿಕೆ ನೀಡಿದರು. ಯೋಜನಾಧಿಕಾರಿ ಬಿ.ದಿನೇಶ್ ಸ್ವಾಗತಿಸಿದರು.

ಸುಣ್ಣದಕೆರೆ ಸ್ಮಶಾನ ವಿವಾದ: ಶಾಸಕರ ಮಧ್ಯ ಪ್ರವೇಶಕ್ಕೆ ಆಗ್ರಹ

ಗುಡ್ಡೆಹೊಸೂರು, ಆ.7– ಗುಡ್ಡೆಹೊಸೂರು ಗ್ರಾಪಂ ವ್ಯಾಪ್ತಿಯ ಸುಣ್ಣದಕೆರೆ ಗ್ರಾಮದಲ್ಲಿ ಗುರುತಿಸಿರುವ ಸ್ಮಶಾನ ಜಾಗದ ವಿವಾದ ತಾರಕಕ್ಕೇರಿದ್ದು, ಶಾಸಕರು, ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲಿಸಿ ನ್ಯಾಯ ಒದಗಿಸಿಕೊಡಬೇಕು ಎಂದು ಗಿರಿಜನ ಕುಟುಂಬಗಳು ಆಗ್ರಹಿಸಿವೆ.

ಗುಡ್ಡೆಹೊಸೂರು ಮತ್ತು ಬೊಳ್ಳೂರು ಗ್ರಾಮಗಳ ನಿವಾಸಿಗಳಿಗೆಂದು ಸುಣ್ಣದ ಕೆರೆಯಲ್ಲಿ ಸ್ಮಶಾನಕ್ಕೆ ಐದು ಎಕರೆ ಜಾಗ ಗುರುತಿಸಲಾಗಿದೆ. ಆದರೆ ಈ ಭಾಗದ 40 ಕುಟುಂಬಗಳು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿವೆ. ಆದಿವಾಸಿಗಳಿಗೆಂದು ತೋಟಗಾರಿಕೆ ಇಲಾಖೆ ಹಣ್ಣುಹಂಪಲು ಬೆಳೆಯಲು ಒದಗಿಸಿರುವ ವನಪ್ರದೇಶದಲ್ಲಿ ಸ್ಮಶಾನ ನಿರ್ಮಿಸಲಾಗುತ್ತಿದೆ. ಸ್ಥಳೀಯ ನಿವಾಸಿಗಳ ಅಭಿಪ್ರಾಯ ಸಂಗ್ರಹಿಸದೆ, ಸಮ್ಮತಿ ಪಡೆಯದೆ ಸ್ಮಶಾನಕ್ಕೆ ಜಾಗ ಗುರುತಿಸಲಾಗಿದೆ ಎಂದು ನಿವಾಸಿಗಳು ದೂರಿದ್ದಾರೆ.

ಜೊತೆಗೆ ಈ ಸ್ಥಳದಲ್ಲಿ ನಾಗದೇವರ ಬನ, ಶ್ರೀ ಚಾಮುಂಡೇಶ್ವರಿ, ಮುನೇಶ್ವರ ದೇವರ ಬನಗಳು ಇದ್ದು ಇಲ್ಲಿ ಸ್ಮಶಾನ ನಿರ್ಮಿಸಿದರೆ ಮುಂದೆ ಗ್ರಾಮಕ್ಕೆ



ಭಾರಿ ದುರಂತಕ್ಕೆ ಕಾರಣವಾಗಲಿದೆ ಎಂದು ಗ್ರಾಮಸ್ಥರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಇದೇ ಮಾರ್ಗದಲ್ಲಿ ಶಾಲಾ ಮಕ್ಕಳು ತಿರುಗಾಡಬೇಕಿದ್ದು ಭಯದ ವಾತಾವರಣ ನಿರ್ಮಾಣವಾಗಲಿದೆ. ಗ್ರಾಪಂ ನಲ್ಲಿ ಕೆಲವರು ಇಲ್ಲಸಲ್ಲದ ರಾಜಕೀಯ ನಡೆಸಿ ಇಲ್ಲಿ ಸ್ಮಶಾನಕ್ಕೆ ಜಾಗ ಗುರುತಿಸಲಾಗಿದೆ ಎಂದಿದ್ದಾರೆ.

ಇದಕ್ಕೆ ಪರ್ಯಾಯವಾಗಿ ನಾವುಗಳು ಬೇರೆ ಸ್ಥಳ ಗುರುತಿಸಿದ್ದು ಆ ನಿರ್ಜನ ಪ್ರದೇಶದಲ್ಲಿ ಸ್ಮಶಾನ ನಿರ್ಮಿಸಲು ಯಾವುದೇ ಅಭ್ಯಂತರವಿಲ್ಲ ಎಂದು ಸುಣ್ಣದಕೆರೆ ನಿವಾಸಿಗಳಾದ ಶ್ರೀ ಬೇಟೆ ಚಾಮುಂಡೇಶ್ವರಿ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಎಸ್.ಎಂ. ನಾರಾಯಣ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಕವಿತಾ, ಅರ್ಚಕ ಇಂದುಕುಮಾರ್ ತಿಳಿಸಿದರು.

ಈ ಬಗ್ಗೆ ಜಿಲ್ಲಾಧಿಕಾರಿಗಳು, ಶಾಸಕರು ಸ್ಥಳಕ್ಕೆ ಭೇಟಿ ನೀಡಿ ನಮ್ಮ ಸಮಸ್ಯೆ ಆಲಿಸಿ ನ್ಯಾಯ ಒದಗಿಸುವಂತೆ ಲ್ಯಾಂಪ್ಸ್ ನಿರ್ದೇಶಕಿ ಕಮಲ, ಸ್ಥಳೀಯರಾದ ರಜಿತ್, ರಾಜಪ್ಪ ಮಮತಾ, ಧನಲಕ್ಷ್ಮಿ, ಜ್ಯೋತಿ, ತಮ್ಮು, ಜಾನಕಿ ಮತ್ತಿತರರು ಆಗ್ರಹಿಸಿದ್ದಾರೆ.

ಮೇಕೆದಾಟು ಯೋಜನೆ ಜಾರಿ ಶತಸಿದ್ಧ

ಅರಣ್ಯ ಸಚಿವ ಉಮೇಶ್ ಕತ್ತಿ



ಹನೂರು, ಆ.7– ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಸುವ ನಿಟ್ಟಿನಲ್ಲಿ ಮೇಕೆದಾಟು ಯೋಜನೆಯನ್ನು ಜಾರಿ ಮಾಡುವುದು ಶತಸಿದ್ಧ ಎಂದು ಅರಣ್ಯ ಸಚಿವ ಉಮೇಶ್ ಕತ್ತಿ ತಿಳಿಸಿದರು.

ಚಾಮರಾಜನಗರ ಜಿಲ್ಲಾ ಪ್ರವಾಸ ನಿಮಿತ್ತ ಹನೂರು ತಾಲೂಕಿನ ಕಾವೇರಿ ವನ್ಯಧಾಮದ ಮೇಕೆದಾಟು ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದ ವೇಳೆ ಸುದ್ದಿಗಾರರ ಪ್ರಶ್ನೆಗೆ ಅವರು ಉತ್ತರಿಸಿದರು.

ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಅವಶ್ಯಕತೆ ಇದ್ದು, ಮೇಕೆದಾಟು ಯೋಜನೆಯನ್ನು ಜಾರಿ ಮಾಡೇ ಮಾಡುತ್ತೇವೆ ಎಂದರಲ್ಲದೆ, ಹೊಗೇನಕಲ್ ಜಲಪಾತ ವೀಕ್ಷಣಾ ಗೋಪುರ, ಸೇತುವೆ ಸೇರಿದಂತೆ ಕಾಡಂಚಿನ ಕುಗ್ರಾಮಗಳಿಗೆ ಮೂಲಸೌಕರ್ಯ ಕಲ್ಪಿಸುವತ್ತ ಸ್ಥಳೀಯ ಶಾಸಕರ ಮನವಿ ಮೇರೆಗೆ ಗಮನ ಹರಿಸಲಾಗುವುದು. ಚಂಗಡಿ ಪುನರ್ವಸತಿ ಯೋಜನೆ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಮಲೆಮಹದೇಶ್ವರ ವನ್ಯಜೀವಿ ಧಾಮವನ್ನು ಹುಲಿ ಯೋಜನೆಯಾಗಿ ಘೋಷಿಸುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಸೋಮಣ್ಣ ಜಿಲ್ಲಾ ಉಸ್ತುವಾರಿ ಸಚಿವರು, ಅವರು ಮಲೆಮಹದೇಶ್ವರ ವನ್ಯಜೀವಿ ಧಾಮ ಹುಲಿ ಸಂರಕ್ಷಿತ ಅರಣ್ಯ ಆಗುವುದಿಲ್ಲ ಎಂದು ಹೇಳಿರುವುದು ಅವರ ಅಭಿಪ್ರಾಯ. ನಾನು ಅರಣ್ಯ ಇಲಾಖೆ ಸಚಿವನಾಗಿ ವನ್ಯಜೀವಿ ಮತ್ತು ಕಾಡುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಗಮನ ಹರಿಸುತ್ತೇನೆ. ನಮ್ಮ ಅಭಿಪ್ರಾಯಗಳು ಏನೇ ಇದ್ದರೂ ಸಂಪುಟ ಸಭೆಯಲ್ಲಿ ಚರ್ಚಿಸಿದ ಬಳಿಕ ಮುಖ್ಯಮಂತ್ರಿಗಳು ಕೈಗೊಳ್ಳುವ ತೀರ್ಮಾನವೇ ಅಂತಿಮ ಎಂದು ಸ್ಪಷ್ಟಪಡಿಸಿದರು.

ಗಜಪಡೆಗೆ ಪೂಜೆ ವೇಳೆ ಅಗೌರವ ತೋರಿಲ್ಲ: ಹುಣಸೂರು ತಾಲೂಕಿನ ವೀರನಹೊಸಹಳ್ಳಿಯಲ್ಲಿ ದಸರಾ ಗಜಪಯಣದ ಪೂಜೆ ವೇಳೆ ಅಗೌವ ತೋರಲಾಗಿದೆ ಎಂಬ ಬಗ್ಗೆ ಕೇಳಾದ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಾನು ಹೋಗುವ ಮುನ್ನವೇ ಗಜಪಡೆಗೆ ಪೂಜೆ ಕಾರ್ಯ ಕೈಗೊಳ್ಳಲಾಗಿತ್ತು. ನನಗೂ ಕೂಡ 61 ವರ್ಷ ವಯಸ್ಸಾಗಿದ್ದು, ಅಗೌರವ ತೋರಬೇಕೆಂಬ ಉದ್ದೇಶ ನನಗಿರಲಿಲ್ಲ. ಅಲ್ಲಿನ ಅಧಿಕಾರಿಗಳು ಮತ್ತು ಮಾವುತರ ಆಣತಿಯಂತೆ ಮಳೆಯಿದ್ದ ಕಾರಣ ರಚ್ಚೆ ಉಂಟಾಗಿದ್ದರಿಂದ ಕಾಲಿನ ಹಿಡಿತ ತಪ್ಪುತ್ತದೆ ಎಂದು ಬಟ್ಟೆಯಿಂದ ಕೂಡಿದ ಶೂ ಧರಿಸಿ ಅಲ್ಲಿಗೆ ತೆರಳಿದ್ದೆ ಎಂದು ಸಮಜಾಯಿಸಿ ನೀಡಿದರು. ಈ ಸಂದರ್ಭದಲ್ಲಿ ಸಿಸಿಎಫ್ ಬಿ.ಕೆಸಿಂಗ್, ಡಿಎಫ್‌ಓಗಳಾದ ಏಡುಕುಂಡಲು, ನಂದೀಶ್, ಎಸಿಎಫ್‌ಗಳಾದ ಭಾಗ್ಯಲಕ್ಷ್ಮಿ, ಅಂಕರಾಜು, ಆರ್‌ಎಫ್‌ಓ ಸೈಯದ್ ನದಾಫ್, ಡಿಆರ್‌ಎಫ್‌ಓ ಶ್ರೀನಿವಾಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಸಕಾಲಕ್ಕೆ ಚಿಕಿತ್ಸೆ ಸಿಗದೆ ಯುವಕ ಸಾವು

ಆಸ್ಪತ್ರೆ ಮುಂದೆ ಶವವಿಟ್ಟು ರಸ್ತೆ ತಡೆ ನಡೆಸಿ ಪ್ರತಿಭಟನೆ





ಗುಂಡ್ಲುಪೇಟೆ, ಆ.7–ಎದೆನೋವಿನಿಂದ ಬಳಲುತ್ತಿದ್ದ ಯುವಕನೊಬ್ಬ ಸಕಾಲದಲ್ಲಿ ಚಿಕಿತ್ಸೆ ದೊರಕದೆ ಸಾವಿಗೀಡಾದ ಘಟನೆ ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಭಾನುವಾರ ನಡೆದಿದ್ದು, ಆಕ್ರೋಶಗೊಂಡ ಸಂಬಂಧಿಕರು ಹಾಗೂ ಗ್ರಾಮಸ್ಥರು ಮೃತದೇಹವನ್ನು ಆಸ್ಪತ್ರೆಯ ಮುಂಭಾಗದಲ್ಲಿಟ್ಟು ರಸ್ತೆ ತಡೆದು ಪ್ರತಿಭಟಿಸಿದರು.

ತೆರಕಣಾಂಬಿ ಗ್ರಾಮದ ಮಹೇಶ(32) ಮೃತ ಯುವಕ. ಇವರಿಗೆ ಭಾನುವಾರ ಬೆಳಗ್ಗೆ 7 ಗಂಟೆ ಸುಮಾರಿಗೆ ಎದೆ ನೋವು ಕಾಣಿಸಿಕೊಂಡಿದೆ. ಕುಟುಂಬಸ್ಥರು ತಕ್ಷಣ ಗ್ರಾಮದ ಆಸ್ಪತ್ರೆಗೆ ಕರೆತಂದಿದ್ದಾರೆ. ಈ ವೇಳೆ ಆಸ್ಪತ್ರೆಯಲ್ಲಿ ವೈದ್ಯರಿಲ್ಲದ ಕಾರಣ ರೋಗಿಯನ್ನು ಕೂಡಲೇ ಚಾಮರಾಜ ನಗರದ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವಂತೆ ಕರ್ತವ್ಯದಲ್ಲಿದ್ದ ನರ್ಸ್ ತಿಳಿಸಿದ್ದಾರೆ. ಮಹೇಶರನ್ನು ಜಿಲ್ಲಾಸ್ಪತ್ರೆಗೆ ಕರೆದೊಯ್ಯಲು ಮುಂದಾದರು. ಆದರೆ ಆಸ್ಪತ್ರೆ ಆವರಣದಲ್ಲಿ 108 ವಾಹನ ಇದ್ದರೂ ಚಾಲಕನಿಲ್ಲದೆ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲು ಪರದಾಡುವಂತಾಯಿತು. ಈ ವೇಳೆಗಾಗಲೇ ಮಹೇಶ್ ಅಸುನೀಗಿದ್ದರು.

ರಸ್ತೆ ತಡೆದು ಪ್ರತಿಭಟನೆ: ಇದರಿಂದ ರೊಚ್ಚಿಗೆದ್ದ ಸಂಬಂಧಿಕರು ಹಾಗೂ ಗ್ರಾಮಸ್ಥರು ತೆರಕಣಾಂಬಿ ಆಸ್ಪತ್ರೆ ಮುಂದೆ ಆಸ್ಪತ್ರೆ ಮುಂಭಾಗದ ರಸ್ತೆಯಲ್ಲಿ ಶವವಿಟ್ಟು ರಸ್ತೆ ತಡೆದು ಪ್ರತಿಭಟಿಸಿದರು.

ಸಮರ್ಪಕ ವೈದ್ಯರು, ಸಿಬ್ಬಂದಿ ಇಲ್ಲದೆ ಇಂತಹ ಘಟನೆಗಳು ನಡೆಯುತ್ತಿವೆ. ತೆರಕಣಾಂಬಿ ಆಸ್ಪತ್ರೆಗೆ ಖಾಯಂ ವೈದ್ಯರಿಲ್ಲದೆ ರೋಗಿಗಳು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. '108' ವಾಹನವನ್ನು ಬೇರೆ ಆಸ್ಪತ್ರೆಗೆ ನಿಯೋಜಿಸಿದ್ದರಿಂದ ಸಕಾದಲ್ಲಿ ಚಿಕಿತ್ಸೆ ದೊರಕದೆ ಬಡರೋಗಿಗಳು ಸಾವಿಗೀಡಾಗುತ್ತಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಕಾಲದಲ್ಲಿ ಚಿಕಿತ್ಸೆ ದೊರಕದೆ ಸಾವಿಗೀಡಾದ ಮೃತನ ಕುಟುಂಬಕ್ಕೆ ಕೂಡಲೇ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪಟ್ಟು ಬಿಡದ ಪ್ರತಿಭಟನಾಕಾರರು: ರಸ್ತೆ ತಡೆಯಿಂದ ವಾಹನಗಳ ಸಂಚಾರಕ್ಕೆ ಕೆಲ ಗಂಟೆಗಳ ಕಾಲ ಅಡಚಣೆಯುಂಟಾಗಿತ್ತು. ಸ್ಥಳಕ್ಕೆ ಆಗಮಿಸಿದ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥನಾಯ್ಕ ರಸ್ತೆತಡೆ ತೆರವುಗೊಳಿಸುವಂತೆ ಮನವರಿಕೆ ಮಾಡಿದರೂ ಒಪ್ಪದ ಪ್ರತಿಭಟನಾಕಾರರು, ಸ್ಥಳಕ್ಕೆ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕಾಗಮಿಸಬೇಕು ಎಂದು ಪಟ್ಟು ಹಿಡಿದರು.

ಪೊಲೀಸರೊಂದಿಗೆ ವಾಗ್ವಾದ: ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆದು ಕೆಲಕಾಲ ಉದ್ವಿಗ್ನ ಪರಿಸ್ಥಿತಿ ಉಂಟಾಯಿತು. ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿ ಪೊಲೀಸರು ರಸ್ತೆ ತಡೆ ತೆರವುಗೊಳಿಸಿದರು. ಬೇಗೂರು ಹಾಗೂ ಗುಂಡ್ಲುಪೇಟೆಯ ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಕಿರಣ್ ಕುಮಾರ್ ಹಾಗೂ ಮುದ್ದರಾಜ್ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿ ನಿಯಂತ್ರಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪ್ರಭಾರ ವೈದ್ಯಾಧಿಕಾರಿ ಡಾ.ಹರೀಶ್ ಹಾಗೂ ಪ್ರಭಾರ ತಾಲೂಕು ಆರೋಗ್ಯಾಧಿಕಾರಿ ಡಾ.ಗಿರಿದಾಸ್ ಮಾತನಾಡಿ, ಸದ್ಯ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ಇದನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸಲಾಗುತ್ತಿದೆ. ಅಲ್ಲಿಯವರೆಗೆ ರಾತ್ರಿ ಹಾಗೂ ಹಗಲು ಪಾಳಿಯಲ್ಲಿ ತಲಾ ಒಬ್ಬರು ವೈದ್ಯರನ್ನು ನಿಯೋಜಿಸಿ, 108 ವಾಹನ ಸದಾ ಸಿದ್ಧವಾಗಿರುವಂತೆ ಮಾಡಲಾಗುವುದು ಎಂದು ಭರವಸೆ ನೀಡಿದರು. ಬಳಿಕ ನಂತರ ಪ್ರತಿಭಟನೆ ಕೈಬಿಡಲಾಯಿತು. ಈ ಸಂದರ್ಭದಲ್ಲಿ ಮೃತರ ಸಂಬಂಧಿಕರು, ಗ್ರಾಮದ ಮುಖಂಡರು ಹಾಗೂ ಯುವಕರಿದ್ದರು.

ಕೊಳ್ಳೇಗಾಲದಲ್ಲಿ ಮಹನೀಯರ ಪುತ್ಥಳಿಗಳ ಅನಾವರಣ

ಪೂರಕ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಬಹುಮಾನ ವಿತರಣೆ

ಕೊಳ್ಳೇಗಾಲ, ಆ.7–ನಗರದ ಗುರು ಭವನದಲ್ಲಿ ಏರ್ಪಡಿಸಿದ್ದ ಪೂರಕ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ನಗದು ಬಹುಮಾನ, ಪುತ್ಥಳಿಗಳ ಅನಾವರಣ, ಇಲಾಖಾ ಕಲಿಕಾ ಪ್ರಗತಿ ಕಾರ್ಯಕ್ರಮಕ್ಕೆ ಶಾಸಕ ಮಹೇಶ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಿಇಓ ಕಚೇರಿ ಆವರಣದಲ್ಲಿಂದು ಸಂಭ್ರಮ ಹಾಗೂ ವಿಶೇಷತೆ ಮನೆ ಮಾಡಿದೆ. ಭಾರತದ ಮೊದಲ ಶಿಕ್ಷಕಿ ಸಾವಿತ್ರ ಬಾಯಿಪುಲೆ, ಹೆಣ್ಣು ಮಕ್ಕಳ ಶಾಲೆ ತೆರೆದ ಮಹಾತ್ಮ ಬಾಯಿ ಪುಲೆ, ಹಿಂಭಾಗದ ಸಂಪನ್ಮೂಲ ಕೇಂದ್ರದಲ್ಲಿ ಬುದ್ಧ, ಬಸವ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಯನ್ನು ಪೂರಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಮಕ್ಕಳಿಂದಲೇ ನನ್ನ ಸಮ್ಮುಖದಲ್ಲಿ ಉದ್ಘಾಟಿಸಲಾಗಿದೆ. ರಾಜ್ಯದ ಎಲ್ಲಾ ಕಚೇರಿಗಳ ಪೈಕಿ



ಕೊಳ್ಳೇಗಾಲ ಬಿಇಓ ಕಚೇರಿ ಮಾದರಿಯಾಗಿದೆ. ಕಳೆದ ವರ್ಷ ಕಲುಷಿತಗೊಂಡಿದ್ದ ಈ ವಾತಾವರಣ 1 ವರ್ಷದಲ್ಲಿ ಶಿಕ್ಷಕರು, ಬಿಇಓ ಕಚೇರಿ ಸಹಭಾಗಿತ್ವದಲ್ಲಿ ಶಿಕ್ಷಕರು ವೈಯಕ್ತಿಕ ಹಣದೊಂದಿಗೆ ಈ ಎಲ್ಲಾ ಕಾರ್ಯ ಮಾಡಿದ್ದು ಇದು ಇತರರಿಗೂ ಮಾದರಿ ಎಂದರು.

ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯಲ್ಲಿ 3,826 ಮಂದಿ ಹಾಜರಾಗಿದ್ದು, 3,662 ಮಕ್ಕಳು ತೇರ್ಗಡೆಯಾಗಿದ್ದರು. 164 ಮಕ್ಕಳು ಅನುತ್ತೀರ್ಣರಾಗಿದ್ದರು. ಇದನ್ನ ಮನಗಂಡ ನಾನು ಪೂರಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಮಕ್ಕಳಿಗೆ 1 ಸಾವಿರ ನಗದು ಬಹುಮಾನ ಘೋಷಿಸಿದೆ. ಜೊತೆಗೆ ಅವರಿಗೂ ವಿಶೇಷ ತರಗತಿ ಕೊಡಿಸಿದ ಹಿನ್ನೆಲೆ ಈ ಪೈಕಿ 113 ಮಕ್ಕಳು ತೇರ್ಗಡೆಯಾಗಿದ್ದಾರೆ. ಅವರನ್ನು ಅಭಿನಂದಿಸುವೆ ಎಂದರು.

ಪೂರಕ ಪರೀಕ್ಷೆಯಲ್ಲಿ ಕೊಳ್ಳೇಗಾಲದಿಂದ 21, ಯಳಂದೂರಿನಿಂದ 2 ಮತ್ತು ಸಂತೇಮರಳ್ಳಿ ಭಾಗದಿಂದ 5 ಮಕ್ಕಳು ಸೇರಿದಂತೆ 28 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿಲ್ಲ. ಈ ಬಗ್ಗೆ ಸಂಬಂಧಪಟ್ಟ ಶಾಲಾ ಶಿಕ್ಷಕರು ಹಾಗೂ ಶಿಕ್ಷಣಾಧಿಕಾರಿಗಳು ಜವಾಬ್ದಾರಿ ವಹಿಸಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರ ಪಾಟೀಲ್ ಕೊಳ್ಳೇಗಾಲ ವಲಯಕ್ಕೆ ಬಂದು ನಾಲ್ಕು ವರ್ಷಗಳಾಗಿವೆ. ಅವರು ಬಂದಾಗಿನಿಂದ ಶೈಕ್ಷಣಿಕ ಚಟುವಟಿಕೆ ಉತ್ತಮ ರೀತಿ ಸಾಗುತ್ತಿದೆ. ಹಾಗಾಗಿ ಇನ್ನು 1 ವರ್ಷಗಳ ಕಾಲ ಅವರು ಕೊಳ್ಳೇಗಾಲದಲ್ಲೇ ಮುಂದುವರೆಯಲಿದ್ದಾರೆ ಎಂದು ಹೇಳಿದರು.

ಕೊಳ್ಳೇಗಾಲ ಬಿಇಓ ಚಂದ್ರಪಾಟೀಲ್, ತಹಸೀಲ್ದಾರ್ ಮಂಜುಳಾ, ಯಳಂದೂರು ಬಿಇಓ ಕಾಂತರಾಜು, ನಗರಸಭೆ ಅಧ್ಯಕ್ಷೆ ಸುಶೀಲ, ಮಾಜಿ ಅಧ್ಯಕ್ಷ ಸೆಲ್ವರಾಜು, ಸದಸ್ಯರಾದ ಸಿ.ಎಂ.ಪರಮೇಶ್ವರಯ್ಯ, ಸೋಮು, ಮೋಳೆ ನಟರಾಜು, ಶಿರೀಸಾ, ಕವಿತಾ, ಪೌರಾಯುಕ್ತ ನಂಜುಂಡಸ್ವಾಮಿ, ಶಿಕ್ಷಕರ ಸಂಘದ ಶ್ರೀಧರ್, ಸಿದ್ದರಾಜು, ಬುಕಾನಿ, ಉಮೇಶ್, ಚಿಕ್ಕರಾಜು, ಚಾಮರಾಜು, ಬಸವರಾಜು, ಮಂಜುಳಾ, ನಾಗಸುಂದರಿ, ಶಾಂತರಾಜು, ಪುಷ್ಪಲತಾ, ಗಿರೀಶ, ಪ್ರವೀಣ್ ಇನ್ನಿತರರಿದ್ದರು.

ಪಾತಮ್ಮ ನಿಧನ



ಚಾಮರಾಜನಗರ, ಆ.7– ತಾಲೂಕಿನ ಕರಿನಂಜನಪುರದ ನಿವಾಸಿ ಲೇ. ಪುಟ್ಟಸುಬ್ಬಪ್ಪ ಪತ್ನಿ ಪಾತಮ್ಮ(96) ಭಾನುವಾರ ಮಧ್ಯಾಹ್ನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಚಾಮರಾಜನಗರ ಪಟ್ಟಣ ಠಾಣೆ ಎಎಸ್‌ಐ ದೊರೆಸ್ವಾಮಿ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸ್ವಗ್ರಾಮ ಕರಿನಂಜನಪುರದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಅಕ್ರಮ ಮದ್ಯ ನಾಶ

ಚಾಮರಾಜನಗರ, ಆ. 7– ಚಾಮರಾಜನಗರ ಹಾಗೂ ಯಳಂದೂರು ತಾಲೂಕಿನಾದ್ಯಂತ ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿದ್ದ ಪ್ರಕರಣಗಳ ಸಂಬಂಧ ಅಬಕಾರಿ ಹಾಗೂ ಪೊಲೀಸ್ ಇಲಾಖೆ ಜಪ್ತಿ ಮಾಡಿದ್ದ 126 ಲೀಟರ್ ಅಕ್ರಮ ಮದ್ಯವನ್ನು ನಾಶಪಡಿಸಲಾಯಿತು.

ನಗರದ ರಾಮಸಮುದ್ರ ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ಅಬಕಾರಿ ಉಪ ಅಧೀಕ್ಷಕ ಎಂ.ಡಿ.ಮೋಹನ್ ಅವರ ಆದೇಶದ ಮೇರೆಗೆ ತಹಶೀಲ್ದಾರ್ ಐ.ಇ.ಬಸವರಾಜು ಸಮ್ಮುಖದಲ್ಲಿ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿದ್ದ ವಿವಿಧ ಬ್ರಾಂಡಿನ 126 ಲೀಟರ್ ಮದ್ಯವನ್ನು ನಾಶಪಡಿಸಲಾಗಿದೆ. ಈ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕ ಮೀನಾ, ಉಮಾಶಂಕರ್, ಸಿಬ್ಬಂದಿ ರಾಜೇಶ್ ಇತರರು ಹಾಜರಿದ್ದರು.



ಗುಂಡ್ಲುಪೇಟೆ ತಾಲೂಕು ಕುರುಬರ ಸಂಘದಿಂದ ಕನಕ ಭವನದಲ್ಲಿ ಸಮಾಜದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ನೂತನವಾಗಿ ಆಯ್ಕೆಯಾದ ಗ್ರಾಪಂ ಅಧ್ಯಕ್ಷರುಗಳಿಗೆ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮವನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಉದ್ಘಾಟಿಸಿದರು. ತಾಲೂಕು ಕುರುಬ ಸಂಘದ ಅಧ್ಯಕ್ಷ ಸುರೇಶ್, ನಿವೃತ್ತ ಪ್ರಾಂಶುಪಾಲ ರಾಮೇಗೌಡ, ಮುಖಂಡರಾದ ಮುನಿರಾಜು, ಬಸವರಾಜು, ಮಾದೇವಸ್ವಾಮಿ, ಮಧು, ರಾಜು ಮತ್ತು ತಾಲೂಕು ಕುರುಬ ಸಂಘದ ಪದಾಧಿಕಾರಿಗಳು ಸದಸ್ಯರು ಇನ್ನಿತರರು ಉಪಸ್ಥಿತರಿದ್ದರು.

ಚಾಮರಾಜನಗರದಲ್ಲಿ ನಾಳೆ ಧ್ವಜ ಸತ್ಯಾಗ್ರಹ

ಚಾಮರಾಜನಗರ, ಆ.7–ಕೇಂದ್ರ ಸರ್ಕಾರ ಕರೆ ನೀಡಿರುವ ಹರ್‌ಘರ್ ತಿರಂಗ ಅಭಿಯಾನದಲ್ಲಿ ಪಾಲಿಸ್ಟರ್ ಧ್ವಜದ ಬದಲು ಮೌಲ್ಯಗಳನ್ನು ಪ್ರತಿನಿಧಿಸುವ ಖಾದಿ ಧ್ವಜವನ್ನೇ ಬಳಸಬೇಕು ಎಂದು ಆಗ್ರಹಿಸಿ ಆ.9ರಂದು ನಗರದಲ್ಲಿ ಧ್ವಜ ಸತ್ಯಾಗ್ರಹ ನಡೆಸಲಾಗುತ್ತದೆ ಎಂದು ಧ್ವಜ ಸತ್ಯಾಗ್ರಹ ಸಮಿತಿಯ ಮುಖ್ಯಸ್ಥ ಪ್ರೊ.ಜಿ.ಎಸ್.ಜಯದೇವ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಖಾದಿಯು ಕೇವಲ ಬಟ್ಟೆಯಲ್ಲ ಸ್ವಾವಲಂಬನೆ ಮತ್ತು ಸಂಯಮದ ಸಂಕೇತ. ಮಹಾತ್ಮ ಗಾಂಧೀಜಿ ಮತ್ತು ಮೌಲ್ಯಗಳನ್ನು ಪ್ರತಿನಿಧಿಸುವ ಖಾದಿ ಧ್ವಜವನ್ನೇ ಬಳಸಬೇಕು ಎಂದು ಪ್ರತಿಭಟನಾ ಮೆರವಣಿಗೆ ನಡೆಸಲಾಗುತ್ತಿದೆ. ಸಮಿತಿಯ ಸಹಯೋಗದಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟು ದೊಡ್ಡಅಂಗಡಿ ಬೀದಿ, ಚಿಕ್ಕಅಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡೀವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದಲ್ಲಿ ಸಮಾವೇಶಗೊಳ್ಳಲಾಗುವುದು ಎಂದರು.

ಕೇಂದ್ರ ಧ್ವಜ ಸಂಹಿತೆಗೆ ತಿದ್ದುಪಡಿ ಮಾಡಿದ್ದು, ಕೃತಕ ನೂಲುಗಳು ಅಂದರೆ ಪಾಲಿಸ್ಟರ್, ಟೆರೀನ್, ವಿಸ್ಕೋಸ್ ಇತ್ಯಾದಿಗಳಿಂದಲೂ ತಯಾರಿಸಿದ ಧ್ವಜ ಹಾರಿಸಬಹುದು ಎಂದು ತಿಳಿಸಿದೆ. ಇದು ಅಪಾಯಕಾರಿ ಎಂದರು. ಸಮಿತಿಯ ಕೆ.ವೆಂಕಟರಾಜು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಗಾಂಧಿವಾದಿ ಸಿ.ಪಿ.ಹುಚ್ಚೇಗೌಡ, ಮುಖಂಡರಾದ ಸಿ.ಬಿ.ನಾಗರಾಜು, ಸ್ವಯಂ ಸೇವಾ ಸಂಘಗಳ ಒಕ್ಕೂಟದ ಸುರೇಶಕುಮಾರ್, ಸರಸ್ವತಿ ಹಾಜರಿದ್ದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ವರ್ಣರಂಜಿತ ಚಾಲನೆ



ಶಿವಮೊಗ್ಗ ಸ್ಟ್ರೈಕರ್ಸ್ ನಾಯಕ ಕೃಷ್ಣಪ್ಪ ಗೌತಮ್, ಬೆಂಗಳೂರು ಬ್ಲಾಸ್ಟರ್ಸ್ ನಾಯಕ ಮಯಂಕ್ ಅಗರ್‌ವಾಲ್, ಗುಲ್ಬರ್ಗಾ ಮೈಸ್ಟಿಕ್ಸ್ ನಾಯಕ ಮನೀಷ್ ಪಾಂಡೆಗೆ ಶುಭ ಕೋರಿದರು. ಆ.26ರವರೆಗೂ ಪಂದ್ಯಾವಳಿ ನಡೆಯಲಿದ್ದು, ಆ.15ರವರೆಗೆ ಮೊದಲ ಹಂತದ ಪಂದ್ಯಗಳು ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಮೈದಾನದಲ್ಲಿ ಹಾಗೂ ಆ.17 ರಿಂದ ಆ.26 ರವರೆಗಿನ 2ನೇ ಹಂತದ ಪಂದ್ಯಗಳು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಕ್ರಿಕೆಟ್ ಹಬ್ಬ: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕ್ರಿಕೆಟ್ ಹಬ್ಬ ಆರಂಭವಾಗಿದ್ದು, ಮೊದಲ ದಿನ ಸಾವಿರಾರು ಕ್ರೀಡಾಭಿಮಾನಿಗಳು ಕ್ರಿಕೆಟ್ ನೋಡಿ ಸಂಭ್ರಮಿಸಿದರಲ್ಲದೆ ತಮ್ಮ ನೆಚ್ಚಿನ ಆಟಗಾರರನ್ನು ಕಣ್ತುಂಬಿಕೊಂಡರು. ಟೂರ್ನಿ ಉದ್ಘಾಟನೆ ವೇಳೆ ವಿವಿಧ ನೃತ್ಯ ತಂಡಗಳು 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಟೂರ್ನಿ ಟೈಟಲ್ ಹಾಡಿಗೆ ನೃತ್ಯ ಪ್ರದರ್ಶನ ನೀಡುವ ಮೂಲಕ ಹೊಸ ಮೆರಗು ನೀಡಿದವು. ಈ ವೇಳೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ವಿನಯ್ ಮೃತ್ಯುಂಜಯ, ಕೆಎಸ್‌ಸಿಎ ಮೈಸೂರು ವಿಭಾಗದ ಅಧ್ಯಕ್ಷ ಆರ್.ಕೆ.ಹರಿಕೃಷ್ಣ ಕುಮಾರ್, ಸಂಚಾಲಕ ಎಸ್.ಸುಧಾಕರ್ ರಾಯ್, ಇರ್ಫಾನ್ ಸೈಟ್, ಪ್ರಾಯೋಜಕರಾದ ಮೈಸೂರು ವಾರಿಯರ್ಸ್ ತಂಡದ ಅರ್ಜುನ್ ರಂಗ, ಹುಬ್ಬಳ್ಳಿ ಟೈಗರ್ಸ್ ತಂಡದ ಸುಶೀಲ್ ಜಿಂದಾಲ್, ಮಂಗಳೂರು ಯುನೈಟೆಡ್ ತಂಡದ ಬಿ.ಎಂ.ಫಾರೂಕ್, ಶಿವಮೊಗ್ಗ ಸ್ಟ್ರೈಕರ್ಸ್ ಡಿ.ವಿ.ರವಿ, ಬೆಂಗಳೂರು ಬ್ಲಾಸ್ಟರ್ಸ್ ತಂಡದ ವೆಂಕಟ್, ಗುಲ್ಬರ್ಗಾ ಮೈಸ್ಟಿಕ್ಸ್ ತಂಡದ ಸೈಯದ್ ಮಹಮ್ಮದ್ ಅಲಿ ಮತ್ತಿತರರಿದ್ದರು.

ಅಥ್ಲೀಟ್‌ಗಳ ಪದಕ ಬೇಟೆ

ಕೀರನ್ ಮ್ಯಾಕ್ಡೊನಾಲ್ಡ್‌ರನ್ನು ಸೋಲಿಸಿ ಚಿನ್ನ ಗೆದ್ದಿದ್ದರು. ಇತ್ತ ಭಾರತದ ಮಹಿಳಾ ಹಾಕಿ ತಂಡ ನ್ಯೂಜಿಲ್ಯಾಂಡ್ ತಂಡವನ್ನು ಮಣಿಸಿ ಕಂಚು ಗೆದಿದ್ದು, ಪೆನಾಲ್ಟಿ ಶೂಟೌಟ್‌ನಲ್ಲಿ 2–1 ಅಂತರದ ಗೋಲುಗಳನ್ನು ಹೊಡೆಯುವ ಮೂಲಕ ಹಾಕಿ ಪದಕ ಗೆದ್ದಿದೆ. ಇದರ ಬೆನ್ನಲ್ಲೇ ಭಾರತ ತಂಡ ಮತ್ತೆ 5 ಪದಕಗಳನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದ್ದು, ಮಹಿಳೆಯರ ಜಾವೆಲಿನ್ ಥ್ರೋ ವಿಭಾಗದಲ್ಲಿ ಅನ್ನು ರಾಣಿ ಕಂಚಿನ ಪದಕ ಗೆದ್ದಿದ್ದರೆ, 10 ಸಾವಿರ ಮೀ. ರೇಸ್ ವಾಕ್ ನಲ್ಲಿ ಭಾರತದ ಸಂದೀಪ್ ಕುಮಾರ್ ಕಂಚಿನ ಪದಕ ಜಯಿಸಿದ್ದಾರೆ. ಇನ್ನು ಪುರುಷರ ಟ್ರಿಪಲ್ ಜಂಪ್‌ನಲ್ಲಿ ಭಾರತದ ಎಲ್ಡೋಸ್ ಪಾಲ್ ಚಿನ್ನ ಗೆದ್ದರೆ ಮತ್ತು ಅಬ್ದುಲ್ಲಾ ಅಬೂಬಕ್ಕರ್ ಬೆಳ್ಳಿ ಪದಕ ತಂದುಕೊಟ್ಟಿದ್ದಾರೆ.

ಬಾಕ್ಸಿಂಗ್‌ನಲ್ಲಿ ನಿಕಾತ್ ಜರೀನ್ ಚಿನ್ನ ಗೆದ್ದಿದ್ದಾರೆ. ಮಹಿಳೆಯರ 48–50 ಕೆಜಿ ತೂಕದ ವಿಭಾಗದಲ್ಲಿ ಉತ್ತರ ಐರ್ಲೆಂಡ್‌ನ ಕಾರ್ಲಿ ಮ್ಯಾಕ್ ನೌಲ್ ಅವರನ್ನು ಸೋಲಿಸುವ ಮೂಲಕ ಬಂಗಾರದ ಪದಕ ಗೆದ್ದು ಸಂಭ್ರಮಿಸಿದರು. ಫೈನಲ್ ಪಂದ್ಯದಲ್ಲಿ ನಿಕಾತ್ ಜರೀನ್ 5–0 ಅಂತರದಿಂದ ಗೆದ್ದು ಚಾಂಪಿಯನ್ ಹಾಗಿ ಹೊರಹೊಮ್ಮಿದರು. ಕಾಮನ್ ವೆಲ್ತ್ ಗೇಮ್ಸ್ 2022 ರಲ್ಲಿ ಭಾರತದ ಆಥ್ಲೀಟ್ ಗಳು ಉತ್ತಮ ಪ್ರದರ್ಶನ ತೋರುತ್ತಿದ್ದು, ಈವರೆಗೂ 17 ಚಿನ್ನ, 13 ಬೆಳ್ಳಿ ಮತ್ತು 21 ಕಂಚಿನ ಪದಕ ಗೆಲ್ಲುವುದರೊಂದಿಗೆ ಭಾರತ ಪದಕಗಳ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಅಕ್ರಮ ನಿವೇಶನ ಮಾರಾಟ

ಪಡೆದ 40 ಮಂದಿಯ ಪಟ್ಟಿಯನ್ನು ಪ್ರಾಧಿಕಾರ ಬಿಡುಗಡೆ ಮಾಡಿದೆ ಎಂದು ಪ್ರಾಧಿಕಾರದ ಉಪಾಧ್ಯಕ್ಷ ವಿಶಾಲ್ ಸಿಂಗ್ ತಿಳಿಸಿದರು. ಎಲ್ಲ 40 ಜನರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಮಿಲ್ಕಿಪುರದ ಬಿಜೆಪಿಯ ಮಾಜಿ ಶಾಸಕ ಗೋರಖನಾಥ್ ಬಾಬಾ ಅವರ ಹೆಸರೂ ಕೂಡ ಪಟ್ಟಿಯಲ್ಲಿದೆ. ಆದರೆ ಮೇಯರ್ ರಿಷಿಕೇಶ್ ಉಪಾಧ್ಯಾಯ ಮತ್ತು ಶಾಸಕ ವೇದ್ ಪ್ರಕಾಶ್ ಗುಪ್ತಾ ಅವರು ನಿರಪರಾಧಿ ಎಂದು ಹೇಳಿಕೊಂಡಿದ್ದಾರೆ. ಪ್ರಾಧಿಕಾರವು ಬಿಡುಗಡೆ ಮಾಡಿದ ಆಪಾದಿತ ಅಪರಾಧಿಗಳ ಪಟ್ಟಿಯಲ್ಲಿ ಪಿತೂರಿ ಇದೆ ಎಂದು ಆರೋಪಿಸಿದ್ದಾರೆ.

ಈ ವರ್ಷದ ಆರಂಭದಲ್ಲಿ ನಡೆದ ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯದಲ್ಲಿ ಪ್ರತಿಸ್ಪರ್ಧಿ ಪಕ್ಷಗಳು ಅಯೋಧ್ಯೆಯಲ್ಲಿ ಅಕ್ರಮ ಭೂಮಿ ಖರೀದಿ ಮತ್ತು ಮಾರಾಟದ ವಿಷಯವನ್ನು ಪ್ರಸ್ತಾಪಿಸಿದ್ದವು.ಈ ಕುರಿತು ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸುವಂತೆ ಆಗ್ರಹಿಸಿ ಸ್ಥಳೀಯ ಸಂಸದ ಲಲ್ಲು ಸಿಂಗ್ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಪತ್ರ ಬರೆದಿದ್ದರು. ಇದೀಗ ಪಟ್ಟಿ ಬಹಿರಂಗವಾಗುತ್ತಿದ್ದಂತೆ ಸಮಾಜವಾದಿ ಪಕ್ಷ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದೆ.

ರಣಭೀಕರ ಮಳೆ

ಭಾಗಮಂಡಲ–ಅಯ್ಯಂಗೇರಿ ರಸ್ತೆ ಸಂಪರ್ಕ ಬಂದ್ ಆಗಿದೆ. ಮಡಿಕೇರಿ–ಭಾಗಮಂಡಲ ರಸ್ತೆಯ ಮೇಲೆ 1 ಅಡಿ ನೀರು ಹರಿಯುತ್ತಿದ್ದು, ವಾಹನ ಸಂಚಾ ರಕ್ಕೆ ತೊಡಕಾಗಿಲ್ಲ. ಸಾರ್ವಜನಿಕರ ಸಂಚಾರಕ್ಕೆ ಬೋಟ್ ವ್ಯವಸ್ಥೆ ಮಾಡಲಾಗಿದ್ದು, ಅಗ್ನಿ ಶಾಮಕ ಇಲಾಖೆ, ಗೃಹ ರಕ್ಷಕ ದಳದವರನ್ನು ಸ್ಥಳದಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಕಾವೇರಿ ನದಿ ಪ್ರವಾಹ ಮಟ್ಟ ಮೀರಿ ಹರಿಯುತ್ತಿದ್ದು, ಕೊಟ್ಟಮುಡಿ, ಹೊದವಾಡ, ಕೊಂಡಂಗೇರಿ, ನೆಲ್ಯ ಹುದಿಕೇರಿ, ಗುಹ್ಯ, ಕರಡಿಗೋಡು ಮತ್ತಿತ್ತರ ಕಡೆ ಗಳಲ್ಲಿ ಪ್ರವಾಹ ಎದುರಾಗಿದ್ದು, ಮನೆಗಳಿಗೆ ನೀರು ನುಗ್ಗುವ ಆತಂಕ ಕಾಡುತ್ತಿದೆ.

ಭೂ ಕುಸಿತ: ಮಡಿಕೇರಿ ಚೆಟ್ಟಳ್ಳಿ ರಸ್ತೆಯಲ್ಲಿ ಭೂ ಕುಸಿದು ಮರಗಳು ಉರುಳಿ ಬಿದ್ದಿದ್ದು, ಕಾರ್ಯಾಚರಣೆ ನಡೆಸಿ ರಸ್ತೆ ಸಂಚಾರ ಸುಗಮಗೊಳಿಸಲಾಗಿದೆ. ಭಾರೀ ಗಾಳಿ ಸಹಿತ ಮಳೆ ಸುರಿಯುತ್ತಿರುವ ಕಾರಣ ಹತ್ತಾರು ಮನೆಗಳಿಗೆ ಹಾನಿ ಸಂಭವಿಸಿದೆ. ಕರಿಕೆ ವ್ಯಾಪ್ತಿಯಲ್ಲೂ ಮಳೆ ಆರ್ಭಟಿಸುತ್ತಿದ್ದು, ಕರಿಕೆ–ಭಾಗಮಂಡಲ ರಸ್ತೆಯ ಮೇಲಡ್ಕ ಎಂಬಲ್ಲಿ ಭೂ ಕುಸಿತವಾಗಿದೆ. ಮರಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ತೆರವುಗೊಳಿಸಿದ್ದು, ಸ್ಥಳೀಯಾಡಳಿತ ಜೆಸಿಬಿ ಯಂತ್ರದ ಮೂಲಕ ಮಣ್ಣನ್ನು ತೆರವು ಮಾಡಿದೆ. ಕರಿಕೆ–ಭಾಗಮಂಡಲ ರಸ್ತೆಯ ಒಂದು ಬದಿಯಲ್ಲಿ ಭಾರೀ ಭೂ ಕುಸಿತವಾಗಿದ್ದು, ರಸ್ತೆಗೆ ಹಾನಿ ಸಂಭವಿಸಿದೆ.

ತೋಟದಲ್ಲಿ ಜಲಸ್ಫೋಟ: ದಕ್ಷಿಣ ಕೊಡಗಿನ ಪೊನ್ನಂಪೇಟೆ ವ್ಯಾಪ್ತಿಯಲ್ಲಿ ಕಳೆದ 5 ದಿನಗಳಿಂದ ಎಡೆಬಿಡದೆ ಧಾರಾಕಾರ ಮಳೆ ಸುರಿದಿದೆ. ಪೊನ್ನಂಪೇಟೆ ಬಿರುನಾಣಿ ಗ್ರಾಮದ ನಿವಾಸಿ ಚೊಟ್ಟಂಗಡ ಬೋಸ್ ಎಂಬವರ ಕಾಫಿ ತೋಟದ ನಡುವೆ ಜಲಸ್ಫೋಟ ಸಂಭವಿಸಿ ಭೂ ಕುಸಿತವಾಗಿದೆ. ಭಾರಿ ಪ್ರಮಾಣದಲ್ಲಿ ನೀರು ಉಕ್ಕಿ ಹರಿದಿದ್ದು, ಕಾಫಿ ಗಿಡಗಳು ಕೊಚ್ಚಿ ಹೋಗಿವೆ. ಸ್ಥಳದಲ್ಲಿ ಮತ್ತಷ್ಟು ಬಿರುಕುಗಳು ಮೂಡಿದ್ದು, ತೋಟಕ್ಕೆ ಹಾನಿ ಸಂಭವಿಸುವ ಎಲ್ಲಾ ಸಾಧ್ಯತೆಗಳು ಕಂಡು ಬರುತ್ತಿದೆ. ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಬೆಳೆಗಾರ ಬೋಸ್ ಅವರು ತೋಟಕ್ಕೆ ತೆರಳಿ ಪರಿಶೀಲನೆ ನಡೆಸಿದ ಸಂದರ್ಭ ಈ ಘಟನೆ ಬೆಳಕಿಗೆ ಬಂದಿದೆ.

ಕುಟುಂಬಗಳ ಸ್ಥಳಾಂತರ: ಜಿಲ್ಲೆಯಲ್ಲಿ ಭಾರೀ ಮಳೆ ಮುಂದುವರೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಪ್ರಾಕೃತಿಕ ವಿಕೋಪ ಪೀಡಿತ 2ನೇ ಮೊಣ್ಣಂಗೇರಿ ವ್ಯಾಪ್ತಿಯ ನಿವಾಸಿಗಳನ್ನು ಸುರಕ್ಷಿತ ಪ್ರದೇಶಗಳೀಗೆ ಸ್ಥಳಾಂತರಿಸಲಾಗಿದೆ. ಕೆಲ ದಿನಗಳ ಹಿಂದೆ ಭಾರೀ ಜಲಸ್ಫೋಟಕ್ಕೆ ನಲುಗಿದ್ದ ರಾಮಕೊಲ್ಲಿ ವ್ಯಾಪ್ತಿಯಲ್ಲಿರುವ 21 ಕುಟುಂಬಗಳ 71 ಸದಸ್ಯರನ್ನು ಕಾಟಕೇರಿ ಶಾಲೆಯ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಸ್ಥಳಕ್ಕೆ ಮಡಿಕೇರಿ ತಹಶೀಲ್ದಾರ್, ಗ್ರಾಮ ಪಂಚಾಯಿತಿ ಟಾಸ್ಕ್ ಫೋರ್ಸ್ ಪದಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸೇತುವೆ ಮುಳುಗಡೆ: ಹಾರಂಗಿ ಜಲಾಶಯದ ಗರಿಷ್ಟ ನೀರಿನ ಸಂಗ್ರಹಾ ಸಾಮರ್ಥ್ಯ 2859 ಅಡಿಗಳಾಗಿದ್ದು, ಜಲಾಶಯಕ್ಕೆ ಭಾರೀ ಒಳ ಹರಿವು ದಾಖಲಾಗಿದೆ. ಜಲಾಶಯದಿಂದ 20 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದ್ದು, ಜಲಾಶಯದ ಮುಂಭಾಗವಿರುವ ಸೇತುವೆ ಮುಳುಗಡೆಯಾಗಿದೆ. ಕಾವೇರಿ ನದಿ ಪಾತ್ರದ ಜನರು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಜಲಾಶಯ ಅಧಿಕಾರಿಗಳು ಮನವಿ ಮಾಡಿದ್ದಾರೆ. ಕಾವೇರಿ ನದಿ ಪ್ರವಾಹ ಮತ್ತು ಜಲಾಶಯದಿಂದ ಹೆಚ್ಚುವರಿ ನೀರನ್ನು ನದಿಗೆ ಹರಿಸಿದ ಪರಿಣಾಮ ಕುಶಾಲನಗರ ಗಂಧದಕೋಟಿ ಸಮೀಪ ಭತ್ತದ ಗದ್ದೆಗಳಿಗೆ ನೀರು ನುಗ್ಗಿದ್ದು, ಪ್ರವಾಹ ಸೃಷ್ಟಿಸಿದೆ. ಪಕ್ಕದಲ್ಲೇ ಖಾಸಗಿ ನರ್ಸರಿ ಕೂಡ ಇದ್ದು, ನೀರು ನುಗ್ಗುವ ಪರಿಸ್ಥಿತಿ ತಲೆದೋರಿರುವ ಕಾರಣ ನರ್ಸರಿಯಲ್ಲಿದ್ದ ಎಲ್ಲಾ ಗಿಡಗಳನ್ನು ಸ್ಥಳಾಂತರ ಮಾಡಲಾಗಿದೆ. ಗುಡ್ಡೆಹೊಸೂರು–ಹಾರಂಗಿ–ಸೋಮವಾರಪೇಟೆ ರಸ್ತೆ ಬಂದ್ ಆಗಿದೆ. ಇದೇ ರೀತಿ ಮಳೆ ಮುಂದುವರೆದಲ್ಲಿ ಮಡಿಕೇರಿ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ತಾವರೆಕೆರೆ ಬಳಿ ಬಂದ್ ಆಗುವ ಸಾಧ್ಯತೆಗಳು ಕಂಡು ಬಂದಿದೆ.

ಪರಿಹಾರ ವಿತರಣೆ: ಗಾಳಿಬೀಡು ವಣಚಲು ಗ್ರಾಮದ ನಿವಾಸಿ ಲೀಲಾವತಿ, ಕರ್ಣಂಗೇರಿ ಗ್ರಾಮದ ಮೊಯ್ದು, ರಾಜು, ಕಾಂತೂರು ಮೂರ್ನಾಡು ಎಂ.ಬಾಡಗ ಗ್ರಾಮದ ನಿವಾಸಿ ಗಾಯತ್ರಿ ಎಂಬವರ ಮನೆಗಳಿಗೆ ಹಾನಿಯಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಈ ಪೈಕಿ ಲೀಲಾವತಿ, ಮೊಯ್ದು ಅವರಿಗೆ ಶಾಸಕ ಅಪ್ಪಚ್ಚು ರಂಜನ್ ತಲಾ 50 ಸಾವಿರ ರೂ.ಗಳ ಪರಿಹಾರ ವಿತರಿಸಿದ್ದಾರೆ. ಮಕ್ಕಂದೂರು ಗ್ರಾಮದ ನಿವಾಸಿ ಸೀತಮ್ಮ ಎಂಬವರ ಮನೆಗೆ ನೀರು ನುಗ್ಗಿ ಮಳೆಯಿಂದ ಹಾನಿಯಾಗಿದ್ದು, 10 ಸಾವಿರ ರೂ. ಪರಿಹಾರ ನೀಡಲಾಗಿದೆ.

ವಿಶ್ವಕರ್ಮ ಸೇವಾ ಟ್ರಸ್ಟ್ ಉದ್ಘಾಟನೆ

ಮೂರ್ತಿ ಕೆತ್ತಿ, ರೂಪ ನೀಡಿ, ಪ್ರತಿಷ್ಠಾಪನೆ ನಂತರ ವಿಶ್ವಕರ್ಮರು ದೇವಸ್ಥಾನದ ಹೊರಗೆ, ಪೂಜಾರಿಗಳು ಒಳಗೆ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ

ಮೈಸೂರು, ಆ.7(ಆರ್‌ಕೆಬಿ)– ವಿಶ್ವಕರ್ಮ ಸಮಾಜದಲ್ಲಿ ಶೇ.90ಕ್ಕಿಂತ ಅಧಿಕ ಬಡವರೇ ಇದ್ದಾರೆ. ಆದರೆ ಬುದ್ಧಿವಂತರು. ಮೂರ್ತಿ ಕೆತ್ತಿ, ಅದಕ್ಕೆ ರೂಪ ನೀಡಿ, ಅದು ಪ್ರತಿಷ್ಠಾಪನೆ ಆದ ಮೇಲೆ ವಿಶ್ವಕರ್ಮರು ಹೊರಗಿರುತ್ತಾರೆ. ಪೂಜಾರಿಗಳು ಒಳಗಿರುತ್ತಾರೆ. ವಿಶ್ವಕರ್ಮರು ಕಡೆದ ಮೂರ್ತಿ ಇರುವ ದೇವಸ್ಥಾನದೊಳಗೆ ವಿಶ್ವಕರ್ಮರೇ ಹೋಗುವಂತಿಲ್ಲ. ಇದು ಇಂದಿನ ಜಾತಿ ವ್ಯವಸ್ಥೆ ಎಂದು ಮಾಜಿ ಮುಖ್ಯಮಂತ್ರಿ, ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್‌ನ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಶ್ವಕರ್ಮರು ಕಾಯಕ ಜೀವಿಗಳು, ಯಾರ್‍ಯಾರು ಕಾಯಕ ಮಾಡುತ್ತಾರೋ ಅವರ್‍ಯಾರು ಶ್ರೀಮಂತರಲ್ಲ. ಕಾಯಕದ ಆಧಾರದ ಮೇಲೆ ಜಾತಿಗಳಾದವು. ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಹೀಗೆ 4 ಪಂಗಡಗಳಿವೆ. ಕಾಯಕ ಮಾಡುವವರು ಎಂದರೆ ಉತ್ಪಾದನೆ ಮಾಡುವವರು ಎಂದರ್ಥ. ಸ್ವಾತಂತ್ರ್ಯ ಪೂರ್ವದಲ್ಲಿ ಕಾಯಕ ಮಾಡಿ ಉತ್ಪಾದನೆ ಮಾಡುವವರು ನಾವು, ಆದರೆ ಅದನ್ನು ಅನುಭವಿಸುತ್ತಿರಲಿಲ್ಲ. ಅದನ್ನು ಮೇಲ್ವರ್ಗದವರು ಅನುಭವಿಸುತ್ತಿದ್ದರು. ಇದು ಚತುರ್ವರ್ಣ ವ್ಯವಸ್ಥೆ, ಇದು ಸ್ವಾತಂತ್ರ್ಯ ನಂತರವೂ ಇಂದಿಗೂ ಮುಂದುವರೆದಿದೆ ಎಂದು ಹೇಳಿದರು.

ದಲಿತ ವರ್ಗದವರು ದೇವಸ್ಥಾನಕ್ಕೆ ಬಿಡದಿರುವುದನ್ನು ವಿರೋಧಿಸಿ, ನಾರಾಯಣ ಗುರು ಅವರು, ನೀವೇ ದೇವಸ್ಥಾನ ಕಟ್ಟಿಕೊಳ್ಳಿ, ನೀವೇ ಪೂಜೆ ಮಾಡಿ, ನೀವೇ ಪೂಜಾರಿಗಳಾಗಿ. ಒಳಗೆ ಬಿಡದಿದ್ದ ಮೇಲೆ ಒಳಗೆ ಹೋಗಬೇಡಿ ಎಂದು ಕರೆ ನೀಡಿದ್ದರು. ನಾರಾಯಣ ಗುರುಗಳು ಕೇರಳ, ಕರ್ನಾಟಕದಲ್ಲಿ ದೇವಸ್ಥಾನಗಳನ್ನು ಕಟ್ಟಿಸಿದರು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಬರೆದ ನಂತರ ವಿದ್ಯೆ, ಆಸ್ತಿ ಬದುಕಲು ಅವಕಾಶ ಸಿಕ್ಕಿದೆ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಅನುಭವ ಮಂಟಪ ಮಾಡಿದರು. 'ಇವನಾರವ... ಇವನಾರವ... ಎಂದೆಣಿಸದಿರಯ್ಯ...ಇವ ನಮ್ಮವ ಇವ ನಮ್ಮ ಎಂದೆಣಿಸಯ್ಯ...' ಎಂದು ಹೇಳಿದರೂ ಇನ್ನೂ ಜಾತಿ ಹೋಗಿಲ್ಲ 900 ವರ್ಷಗಳಾದರೂ ಜಾತಿ, ವರ್ಗ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಸಮಾನತೆ ಹೋಗಿಲ್ಲ. ಎಲ್ಲರೂ ಮನುಷ್ಯರಾಗಿ ಬದುಕಬೇಕಲ್ಲವೇ? ಅದು ಸಾಧ್ಯವಾಗಿದೆಯೇ ಎಂದು ಪ್ರಶ್ನಿಸಿದರು. ಬರೀ ಬಾಯಿಯಲ್ಲಿ ವಚನ ಹೇಳುವುದಲ್ಲ. ಅದರಂತೆ ನಡೆದುಕೊಳ್ಳಬೇಕು. ಇನ್ನೊಬ್ಬರನ್ನು ದೂಷಿಸುವುದಕ್ಕಿಂತ ಸಮಾಜದಲ್ಲಿ ನಾವು ಮುಂದೆ ಬರಬೇಕು, ಸಂಘಟಿತರಾಗಬೇಕು ಎಂದು ಕರೆ ನೀಡಿದರು.

ರಕ್ತಕ್ಕೆ ಜಾತಿ ಇದೆಯೇ?: ರೋಗ ಬಂದಾಗ ಯಾವ ಜಾತಿಯವನ ರಕ್ತವಾದರೂ ಸರಿ ದೇಹದೊಳಗೆ ಸೇರಿಸಿಕೊಂಡು, ರೋಗ ವಾಸಿಯಾದ ಬಳಿಕ ಮತ್ತೆ ನೀನು ಯಾವ ಜಾತಿ ಎನ್ನುತ್ತಾರಲ್ಲ. ಇದು ಮನುಷ್ಯತ್ವವೇ ಎಂದು ಪ್ರಶ್ನಿಸಿದರು.

ಇವೆಲ್ಲವೂ ಹೋಗಬೇಕಾದರೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸ್ವಾಭಿಮಾನದಿಂದ ಬದುಕಲು ಶಿಕ್ಷಣ ಮುಖ್ಯ. ಸ್ವಾಭಿಮಾನ ಇದ್ದರೆ ಮನುಷ್ಯತ್ವ ಬರುತ್ತದೆ. ಇದು ಬರಬೇಕಾದರೆ ಶಿಕ್ಷಣ ಮುಖ್ಯ. ಹಾಗಾಗಿಯೇ ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮಂತ್ರ ಹೇಳಿದರು ಅಂಬೇಡ್ಕರ್ ಶೋಷಿತ ವರ್ಗದ ಜನರಿಗೆ ನೀಡಿದ ಮಂತ್ರ ಹಾಗಾಗಿ ಗುಂಪುಗಾರಿಕೆಗಳನ್ನು ಬಿಟ್ಟು ಎಲ್ಲರೂ ಸಂಘಟಿತರಾಗಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿಶ್ವಕರ್ಮ ಸಮುದಾಯದ ಪ್ರತಿಭಾವಂತರಿಗೆ ಗೌರವಿಸಿದರು.

ಮಧುಗಿರಿ ತಾಲೂಕು ನಿಟ್ಟರಹಳ್ಳಿ ವಿಶ್ವಕರ್ಮ ಶ್ರೀಗಳಾದ ಡಾ.ನೀಲಕಂಠಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಚಲನಚಿತ್ರ ನಟಿ ಭವ್ಯ, ವಿಶ್ವಕರ್ಮ ಸೇವಾ ಟ್ರಸ್ಟ್‌ನ ನಾಮಫಲಕ ಅನಾವರಣ ಮಾಡಿದರು. ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್.ನಂದಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಎಲ್.ನಾಗೇಂದ್ರ ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಎಂಎಲ್‌ಸಿ ಪುಟ್ಟಸಿದ್ದಶೆಟ್ಟಿ, ನಗರಪಾಲಿಕೆ ಸದಸ್ಯ ರಮೇಶ್ (ರಮಣಿ), ಕಾಂಗ್ರೆಸ್ ಮುಖಂಡರಾದ ಕೆ.ಹರೀಶ್‌ಗೌಡ, ಬಿ.ಜೆ. ವಿಜಯಕುಮಾರ್, ವಿಶ್ವಕರ್ಮ ಸೇವಾ ಟ್ರಸ್ಟ್‌ನ ಅಧ್ಯಕ್ಷ ಆನಂದೂರು ಪುಟ್ಟಸ್ವಾಮಾಚಾರ್, ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ, ಟ್ರಸ್ಟ್‌ನ ಪದಾಧಿಕಾರಿಗಳಾದ ಕೆ.ಎನ್.ಶಾಂತಮ್ಮ, ಎಸ್.ರಾಮಚಂದ್ರ, ವರುಣ ನಿಂಗಾಚಾರ್, ರವಿಕುಮಾರ್, ಮೀನಾಕ್ಷಮ್ಮ, ಸರಸ್ವತಿ, ರಾಮಲಿಂಗಚಾರ್, ಎಲ್. ಸತೀಶ್, ಶಿವಕುಮಾರ್, ಚಂದ್ರು ವಿ.ಆರ್. ಮಹೇಶ್, ಎಂ.ಎಸ್.ಶಂಕರ್, ಎಸ್.ನಾಗೇಂದ್ರ ಬಿ.ಎ.ಸಿದ್ದರಾಜು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಚಿತ್ರದಲ್ಲಿ ವಿಶ್ವಕರ್ಮ ಶ್ರೀಗಳಾದ ನೀಲಕಂಠಾಚಾರ್ಯ ಸ್ವಾಮೀಜಿ, ಶಾಸಕರಾದ ಎಲ್.ನಾಗೇಂದ್ರ, ಅನಿಲ್ ಚಿಕ್ಕಮಾದು, ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್.ನಂದಕುಮಾರ್, ಚಲನಚಿತ್ರ ನಟಿ ಭವ್ಯ, ವಿಶ್ವಕರ್ಮ ಸೇವಾ ಟ್ರಸ್ಟ್‌ನ ಅಧ್ಯಕ್ಷ ಆನಂದೂರು ಪುಟ್ಟಸ್ವಾಮಾಚಾರ್, ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ಇನ್ನಿತರರನ್ನು ಕಾಣಬಹುದು.

> ❝ ನಾನು ಮುಖ್ಯಮಂತ್ರಿಯಾಗಿದ್ದಾಗ ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಡಿ ಕೊಟ್ಟೆ. ಏಕೆಂದರೆ ವಿಶ್ವಕರ್ಮರಿಗೆ ಆರ್ಥಿಕ ಶಕ್ತಿ ತುಂಬುವುದು ಇದರ ಉದ್ದೇಶ. ನಿಮ್ಮ ಉತ್ಪಾದನೆಗಳಿಗೆ ಮಾರುಕಟ್ಟೆ ಸಿಗಲಿ ಎಂಬುದು ಇದರ ಮುಖ್ಯ ಉದ್ದೇಶ, ನಿಮ್ಮ ಆಶೀರ್ವಾದದಿಂದ ನಾವು ಅಧಿಕಾರಕ್ಕೆ ಬಂದರೆ ಮತ್ತೇ ವಿಶ್ವಕರ್ಮರ ಅಭಿವೃದ್ಧಿಗೆ ಆದ್ಯತೆ ನೀಡುತ್ತೇವೆ. ಬಿಜೆಪಿಯವರ ಬಂಡಲ್ ಮಾತುಗಳಿಗೆ ಮರುಳಾಗಿ ಅವರ ಜೊತೆಗೆ ಹೋಗಬೇಡಿ. ಯಾರು ನಿಮ್ಮ ಪರವಾಗಿ ಇರುತ್ತಾರೋ ಅವರ ಪರ ಇರಿ.
>
> -ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ಗ್ರಾಮೀಣ ಪ್ರದೇಶದ ಶಾಲೆಗಳಿಂದ ನೈತಿಕ ಶಿಕ್ಷಣ ಕಲಿಕೆ

'ಹರ್ ಘರ್ ತಿರಂಗಾ' ಅಭಿಯಾನಕ್ಕೆ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಶಿವಣ್ಣ ಚಾಲನೆ



ಮೈಸೂರು,ಆ.7(ಎಸ್‌ಪಿಎನ್)– ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ಮಾತೃಪ್ರೇಮ ಹಾಗೂ ಸಾಮಾಜಿಕ ಮೌಲ್ಯಗಳು ಶಾಲಾ ಹಂತದಿಂದಲೇ ಕಲಿಕೆಗೆ ಶಿಕ್ಷಕರು ಹೆಚ್ಚಿನ ಆದ್ಯತೆ ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಎಂ.ಶಿವಣ್ಣ ಅಭಿಪ್ರಾಯಪಟ್ಟರು.

ಮೈಸೂರು ತಾಲೂಕು ಹಾರೋಹಳ್ಳಿ–ಮೆಲ್ಲಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ 75ನೇ ವರ್ಷದ 'ಅಮೃತ ಮಹೋತ್ಸವ'ದ ಅಂಗವಾಗಿ 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಆ.15ಕ್ಕೆ 75 ವರ್ಷಗಳಾಗುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿರ್ದೇಶನದಂತೆ ಪ್ರತಿ ಮನೆಯಲ್ಲೂ ನಮ್ಮ ರಾಷ್ಟ್ರಧ್ವಜ ಹಾರಿಸುವ ಮೂಲಕ ಎಲ್ಲರೂ ರಾಷ್ಟ್ರಪ್ರೇಮ ಮೆರೆಯಬೇಕು ಎಂದು ತಿಳಿಸಿದರು.

ನಾನು 2005ನೇ ಇಸವಿಯಲ್ಲಿ ಕೆಎಎಸ್ ತೇರ್ಗಡೆ ಹೊಂದಿ, ಇದೀಗ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಪ ಆಯುಕ್ತರಾಗಿ ಕೆಲಸ ಮಾಡುತ್ತಿದ್ದೇನೆ. ಅಲ್ಲದೆ, ಇದೇ ವೇದಿಕೆಯಲ್ಲಿರುವ ಐಜಿಪಿ ಕಚೇರಿ(ದಕ್ಷಿಣ ವಲಯ)ಯ ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಅವರು, ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿ, ನಂತರ ಪೊಲೀಸ್ ಇಲಾಖೆಗೆ ಸೇರಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಅಲ್ಲದೆ, ನನ್ನ ಪತ್ನಿ ಕೂಡ ಕೆಇಎಸ್ ಪರೀಕ್ಷೆ ತೇರ್ಗಡೆ ಹೊಂದಿ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದ ಅವರು, ನಮ್ಮ ಬಾಲ್ಯದ ವ್ಯಾಸಂಗ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಆಗಿದೆ ಎಂಬುದು ಹೆಮ್ಮೆಯಿಂದ ಹೇಳುತ್ತೇನೆ. ಏಕೆಂದರೆ, ನಮಗೆ ನೈತಿಕ ಶಿಕ್ಷಣ ಕಲಿಸಿದ್ದು, ಗ್ರಾಮೀಣ ಶಾಲೆ ಎಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ ಎಂದರು.

ಆದರೆ, ಇತ್ತೀಚೆಗೆ ನಗರ ಪ್ರದೇಶದ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಅಂಕ ಆಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ನೈತಿಕ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಸೈನಿಕರು ಹಾಗೂ ದಕ್ಷಿಣ ವಲಯ ಐಜಿಪಿ ಕಚೇರಿಯ ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್, ಬಿಇಓ ಮಲ್ಲೇಶ್ವರಿ, ಮುಖ್ಯಶಿಕ್ಷಕಿ ಜ್ಯೋತಿ, ಶಿಕ್ಷಣ ಸಂಯೋಜಕ ಶಿವಕುಮಾರ್ ಆರಾಧ್ಯ, ಸಿಆರ್‌ಪಿ ದೀಪು, ಎಫ್‌ಡಿಎ ಡಿ.ಸಿ. ಮಂಜುನಾಥ್ ಹಾಗೂ ಬೋಧಕ–ಬೋಧಕೇತರ ವೃಂದ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ವೇಳೆ ನಿವೃತ್ತ ಮಾಜಿ ಸೈನಿಕರ ಒಕ್ಕೂಟದಿಂದ ಕುಕ್ಕರ್ ಅನ್ನು ಶಾಲೆಗೆ ವಿತರಿಸಲಾಯಿತು.

ಆರ್ಯ ವಾಲ್ವೇಕರ್‌ಗೆ ಮಿಸ್ ಇಂಡಿಯಾ USA–2022 ಕಿರೀಟ

ವಾಷಿಂಗ್ಟನ್, ಆ.7– ಅಮೆರಿಕದ ನ್ಯೂಜೆರ್ಸಿಯಲ್ಲಿ ನಡೆದ 40ನೇ ವಾರ್ಷಿಕೋತ್ಸವ ಸ್ಪರ್ಧೆಯಲ್ಲಿ ವರ್ಜೀನಿಯಾದ 18ರ ಯುವತಿ (ಭಾರತೀಯ ಅಮೆರಿಕನ್) ಆರ್ಯ ವಾಲ್ವೇಕರ್ 'ಮಿಸ್ ಇಂಡಿಯಾ USA–2022' ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ಯುಎಸ್‌ನ 30 ರಾಜ್ಯಗಳಿಂದ 74 ಸ್ಪರ್ಧಿಗಳು ಮಿಸ್ ಇಂಡಿಯಾ ಯುಎಸ್‌ಎ, ಮಿಸೆಸ್ ಇಂಡಿಯಾ ಯುಎಸ್‌ಎ ಹಾಗೂ ಮಿಸ್ ಟೀನ್ ಇಂಡಿಯಾ ಯುಎಸ್‌ಎ ವಿಭಾಗಗಳಲ್ಲಿ ಭಾಗವಹಿಸಿದ್ದರು. ವಾಷಿಂಗ್ಟನ್‌ನ ಅಕ್ಷಿ ಜೈನ್ ಮಿಸೆಸ್ ಇಂಡಿಯಾ ಯುಎಸ್‌ಎ, ನ್ಯೂಯಾರ್ಕ್‌ನ ತನ್ವಿ ಗ್ರೋವರ್ ಮಿಸ್ ಟೀನ್ ನ್ಯೂಯಾರ್ಕ್ ಕಿರೀಟ ಧರಿಸಿದರೆ ಭಾರತೀಯ ಅಮೆರಿಕನ್ನರಾದ ವಾಲ್ವೇಕರ್ ಮಿಸ್ ಇಂಡಿಯಾ ಕಿರೀಟ ಧರಿಸಿದ್ದಾರೆ.



ಈ ವೇಳೆ ತನ್ನ ಖುಷಿಯನ್ನು ಹಂಚಿಕೊಂಡಿರುವ ವಾಲ್ವೇಕರ್, 'ನನ್ನನ್ನು ಬೆಳ್ಳಿ ತೆರೆಯಲ್ಲಿ ನೋಡುವುದು, ಚಲನಚಿತ್ರ ಹಾಗೂ ಟಿವಿಯಲ್ಲಿ ಕೆಲಸ ಮಾಡುವುದು ನನ್ನ ಕನಸಾಗಿತ್ತು' ಎಂದು ಅವರು ಹೇಳಿಕೊಂಡಿದ್ದಾರೆ. ಈ ಕುರಿತ ಫೋಟೋಗಳನ್ನು ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ. ಪ್ರಪಂಚದಾದ್ಯಂತ ಇರುವ ಭಾರತೀಯ ಸಮುದಾಯಕ್ಕೆ ಅವರು ನೀಡಿದ ಸಹಕಾರಕ್ಕೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಯಾರಿದು ವಾಲ್ವೇಕರ್?: ವರ್ಜೀನಿಯಾದ ಬ್ರಿಯಾರ್ ವುಡ್ಸ್ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿನಿ ಆರ್ಯ ವಾಲ್ವೇಕರ್, ಈಕೆ ವಿವಿಧ ಜಾಗೃತಿ ಅಭಿಯಾನಗಳನ್ನು ಮಾಡಿದ್ದು, ಟಿಇಡಿಎಕ್ಸ್ ಕಾರ್ಯಕ್ರಮಗಳಲ್ಲಿ ಆರೋಗ್ಯಕರ ಮರುಚಿಂತನೆಯ ಉಪನ್ಯಾಸ ನೀಡಿದ್ದಾರೆ. ಯುಫೋರಿಯಾ ಡ್ಯಾನ್ಸ್ ಸ್ಟುಡಿಯೋದ ಸಂಸ್ಥಾಪಕರಾಗಿರುವ ವಾಲ್ವೇಕರ್, ಸ್ಥಳೀಯ ಮಕ್ಕಳಿಗೆ ಕಡಿಮೆ ಶುಲ್ಕದಲ್ಲೇ ನೃತ್ಯ ಹೇಳಿಕೊಡುತ್ತಿದ್ದಾರೆ. ಮಕ್ಕಳ ನಾಟಕಗಳಿಗೆ ನಿರ್ದೇಶಕರಾಗಿ ಸ್ವಯಂ ಸೇವಕರಾಗಿ ಕೆಲಸ ಮಾಡಿದ್ದಾರೆ. ಅಡುಗೆ ಮಾಡುವುದು, ಚರ್ಚೆ ಮಾಡುವುದು ಇವರ ಹವ್ಯಾಸವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಮಾದಿಗ ಸಮುದಾಯದ ಎಲ್ಲಾ ಒಳಪಂಗಡಗಳು ಒಂದಾಗಬೇಕು

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಕರೆ

ಮೈಸೂರು,ಆ.7(ಪಿಎಂ)– ಮಾದಿಗ ಸಮುದಾಯದ ಎಲ್ಲಾ ಒಳಪಂಗಡಗಳು ಒಂದು ಎಂಬ ವಾತಾವರಣ ಇಡೀ ದೇಶದಲ್ಲಿ ಸೃಷ್ಟಿಯಾಗಬೇಕು. ಅಂತೆಯೇ ರಾಜ್ಯದಲ್ಲಿ ಸಮುದಾಯ ಒಂದಾಗಲು ನೀವು ಮುನ್ನುಡಿ ಬರೆದರೆ, ನಿಮ್ಮ ಬೇಡಿಕೆಗಳನ್ನು ಸರ್ಕಾರದಿಂದ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಜೊತೆಗೆ ನನ್ನಿಂದ ಸಾಧ್ಯವಿರುವ ಬೇಡಿಕೆಗಳನ್ನು ಖಂಡಿತ ಈಡೇರಿಸುವುದಾಗಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಭರವಸೆ ನೀಡಿದರು.

ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಆದಿದ್ರಾವಿಡ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವನ್ನು ಆಗ್ರಹಿಸುವ ಸಲುವಾಗಿ ಅಖಿಲ ಕರ್ನಾಟಕ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಜನಾಂಗದ ಅಭಿವೃದ್ಧಿ ಟ್ರಸ್ಟ್ ಮತ್ತು ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಯುವಕರ ಅಭಿವೃದ್ಧಿ ಮಹಾಸಂಘದ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಆದಿದ್ರಾವಿಡ ಸಮಾಜದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ವಿವಿಧ ಹೆಸರುಗಳಿಂದ ಕರೆಯಲ್ಪಡುವ ಈ ಸಮಾಜದ ಎಲ್ಲರೂ ಒಂದಾಗಬೇಕು. ನಿಮ್ಮ ಸಂಘಟನೆ ಅದಕ್ಕೆ ಮುನ್ನುಡಿ ಬರೆದರೆ, ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಶೀಘ್ರದಲ್ಲಿ ಸರ್ಕಾರದಿಂದ ಮಂಜೂರು ಮಾಡಿಸಲು ಪ್ರಯತ್ನಿಸುತ್ತೇನೆ. ಅದಾಗಿಲ್ಲವೆಂದರೆ ನಾನೇ ಖರೀದಿಸಿ ಕೊಡುತ್ತೇನೆ. ಇಡೀ ರಾಜ್ಯದಲ್ಲಿ ಸಮುದಾಯ ಒಂದಾಗಬೇಕು. ನಿಮ್ಮ ಎಲ್ಲಾ ಬೇಡಿಕೆಗಳ ಸಂಬಂಧ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರ ಬಳಿ ಚರ್ಚೆ ಮಾಡುತ್ತೇನೆ. ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಮಾದಿಗ ಸಮುದಾಯ 40ರಿಂದ 50 ಉಪಜಾತಿಗಳು ಪರಸ್ಪರ ಸಂಬಂಧ ಇಲ್ಲದಂತೆ ಬದುಕುತ್ತಿವೆ. ತಮ್ಮತಮ್ಮಲ್ಲಿಯೇ ಸಾಮಾಜಿಕ ತಾರತಮ್ಯ ಅನುಸರಿಸುತ್ತಿವೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿರುವ ಸಮಾಜ ಒಂದಾಗಬೇಕು. ಬಾಬು ಜಗಜೀವನರಾಮ್ ನಮ್ಮ ಸಮಾಜ ಮುಖಂಡರು ಮಾತ್ರವಲ್ಲ, ರಾಷ್ಟ್ರ ನಾಯಕರು. ಆದಿದ್ರಾವಿಡ, ಆದಿ ಕರ್ನಾಟಕ, ಮಾದಿಗ, ಮೋಚಿ, ಚಮ್ಮಾರ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಎಲ್ಲರೂ ಬಾಬು ಜಗಜೀವನರಾಮ್ ನಮ್ಮ ಸಮುದಾಯದ ನಾಯಕರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಆದರೆ ನಾವೆಲ್ಲರೂ ಒಂದು ಎಂದು ಸಂಘಟಿತರಾಗುತ್ತಿಲ್ಲ ಎಂದು ವಿಷಾದಿಸಿದರು.

ದೇಶದ ಮತದಾರರಿಗೆ ಬದ್ಧತೆ ಇಲ್ಲ: ಒಳಮೀಸಲಾತಿ ರಾಜಕಾರಣಿಗಳಿಗೆ ಯಾರಿಗೂ ಬೇಕಿಲ್ಲ. ಓಟು ಅಷ್ಟೇ ಅವರಿಗೆ ಮುಖ್ಯ. ಈ ದೇಶದ ಮತದಾರರಿಗೆ ಬದ್ಧತೆ ಇಲ್ಲ, ಇದ್ದಿದ್ದರೆ ಭ್ರಷ್ಟರು ರಾಜಕಾರಣದಲ್ಲಿ ಇರುತ್ತಿರಲಿಲ್ಲ. ಬದ್ಧತೆ ಇಲ್ಲದ ಕಾರಣ ಯಾವ ಮಹೋತ್ಸವ ಮಾಡಿದರೂ ನಿಜವಾದ ಸ್ವಾತಂತ್ರ್ಯ ದೇಶಕ್ಕೆ ಲಭಿಸಿಲ್ಲ. ಸ್ವಾತಂತ್ರ್ಯ ಹೋರಾಟಗಾರರ ಕನಸು ನನಸಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಚಿವ, ಶಾಸಕರಿಗೇ ಗೊತ್ತಿಲ್ಲ: ನನಗೆ ನಿಮ್ಮ ಓಟು ಬೇಕಿಲ್ಲ. ನನ್ನ ಸಮಾಜ ಜಾಗೃತಿಯಾದರೆ ಸಾಕು. ಸಫಾಯಿ ಕರ್ಮಚಾರಿ ಆಯೋಗದ ಶೇ.40ರಷ್ಟು ಹಣವನ್ನು ಪೌರಕಾರ್ಮಿಕರ ಮಕ್ಕಳ ಕೌಶಲ್ಯ ತರಬೇತಿಗೆ ವಿನಿಯೋಗಿಸಲಾಗುತ್ತದೆ. ಉಚಿತ ಶಿಕ್ಷಣ ಪಡೆಯಲೂ ಅವಕಾಶವಿದೆ. ಆದರೆ ಈ ಬಗ್ಗೆ ನಾವ್ಯಾರೂ ತಿಳಿದುಕೊಳ್ಳುವುದಿಲ್ಲ. ಇದಕ್ಕಿಂತ ವಿಪರ್ಯಾಸ ಎಂದರೆ ಇಲಾಖಾ ಮಂತ್ರಿಗಳು, ಶಾಸಕರಿಗೇ ಗೊತ್ತಿರುವುದಿಲ್ಲ. ಸ್ವಚ್ಛತಾ ಯಂತ್ರೋಪಕರಣಗಳನ್ನು ಖರೀದಿಸಲು ಸಬ್ಸಿಡಿ ನೀಡಲಾಗುತ್ತಿದೆ. ಆ ಮೂಲಕ ಸ್ವಯಂ ಉದ್ಯೋಗಿಗಳಾಗಲು ಉತ್ತೇಜನ ನೀಡಲಾಗುತ್ತಿದೆ. ಆದರೆ ಈ ಯೋಜನೆ ಬಗ್ಗೆಯೂ ಸರಿಯಾಗಿ ಯಾರಿಗೂ ಗೊತ್ತಿಲ್ಲ ಎಂದರು.

ಹೊಸ ಯೋಜನೆ ಜಾರಿ: ಈ ದೇಶದ ದಲಿತ ಸಮುದಾಯ ಸ್ವಯಂ ಉದ್ಯೋಗಿಗಳಾಗಲು ಹಲವು ಯೋಜನೆಗಳನ್ನು ಮುಂದಿನ ತಿಂಗಳು ನಮ್ಮ ಸರ್ಕಾರ ಜಾರಿಗೊಳಿಸುತ್ತಿದೆ ಎಂದು ಎ.ನಾರಾಯಣಸ್ವಾಮಿ ತಿಳಿಸಿದರು.

ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಘೋಷಣೆ ಮಾಡಿದ್ದ ಪೌರಕಾರ್ಮಿಕರ ವಸತಿ ಶಾಲೆಯನ್ನು ಮೈಸೂರಿನಲ್ಲಿ ಆರಂಭಿಸಲು ನಾವೆಲ್ಲರೂ ಸೇರಿ ಪ್ರಯತ್ನಿಸೋಣ. ಈ ಸಮಾವೇಶದ ಫಲವಾಗಿ ಇದು ಕೈಗೂಡುವಂತೆ ನಾವು ಜೊತೆಯಾಗಿ ಕೆಲಸ ಮಾಡೋಣ ಎಂದರು. ಶಾಸಕ ಎಲ್.ನಾಗೇಂದ್ರ, ರಾಜ್ಯಸಭಾ ಮಾಜಿ ಸದಸ್ಯ ಕೆ.ಬಿ.ಕೃಷ್ಣಮೂರ್ತಿ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಪುರುಷೋತ್ತಮ್, ಹುಣಸೂರು ನಗರಸಭಾ ಸದಸ್ಯೆ ರಾಣಿ ಪೆರುಮಾಳ್, ನಂಜನಗೂಡು ನಗರಸಭಾ ಸದಸ್ಯ ಪಿ.ದೇವ, ಕೆಆರ್ ನಗರ ಪುರಸಭಾ ಸದಸ್ಯ ಶಂಕರ್, ಟ್ರಸ್ಟ್ ರಾಜ್ಯಾಧ್ಯಕ್ಷ ಬಿ.ಎಸ್.ಸುಬ್ರಮಣ್ಯ, ಕಾರ್ಯಾಧ್ಯಕ್ಷ ವಿ.ರಾಜು, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಸುರೇಶ್ ಕುಮಾರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಆದಿದ್ರಾವಿಡ ಸಮಾಜದ ಸಮಾವೇಶವನ್ನು ಡಾ.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ್ ಫೋಟೋಗಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಕೇಂದ್ರ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಉದ್ಘಾಟಿಸಿದರು.

ಬೇಡಿಕೆಗಳು

ಆದಿದ್ರಾವಿಡ ಜನಾಂಗದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ ನೀಡಬೇಕು. ಸದಾಶಿವ ಆಯೋಗದ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿಯ ಮೂಲಕ ಆದಿದ್ರಾವಿಡ ಪೌರಕಾರ್ಮಿಕರ ಅವಲಂಬಿತರಿಗೆ ತಮಿಳುನಾಡು ಮಾದರಿ ಒಳಮೀಸಲಾತಿ ನೀಡಬೇಕು. ಆದಿದ್ರಾವಿಡ ಸಮಾಜಕ್ಕೆ ನಾಮನಿರ್ದೇಶಿತ ವಿಧಾನ ಪರಿಷತ್ ಸ್ಥಾನ ಕಲ್ಪಿಸಬೇಕು. ಜಿಲ್ಲಾ ಕೇಂದ್ರಗಳಲ್ಲಿ ಆದಿದ್ರಾವಿಡ ಜನಾಂಗಕ್ಕೆ ಸಮುದಾಯ ಭವನ ನಿರ್ಮಿಸಲು ಸಿಎ ನಿವೇಶನ ಒದಗಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಎ.ನಾರಾಯಣಸ್ವಾಮಿ ಸೇರಿದಂತೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲಾ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಯಿತು.

> ನಾನು ಮಂತ್ರಿನೂ ಹೌದು, ಸಮಾಜ ಮಗನೂ ಹೌದು. ಮಂತ್ರಿಯಾದಾಕ್ಷಣ ನಾನು ಮಾದಿಗನಲ್ಲ ಎಂದು ಹೇಳಲಾಗದು. ನಮ್ಮ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಹಾಗೂ ಒಳಮೀಸಲಾತಿಯ ಅಗತ್ಯತೆಯನ್ನು ನಿವೃತ್ತ ನ್ಯಾಯಮೂರ್ತಿ ಉಷಾ ಮೆಹ್ರಾ ಆಯೋಗ ವರದಿಯಲ್ಲಿ ಹೇಳಲಾಗಿದೆ. ಆಂಧ್ರ ಪ್ರದೇಶಕ್ಕೆ ಸಂಬಂಧಿಸಿದಂತೆ ಅವರು ನೀಡಿರುವ ವರದಿಯಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ನಮ್ಮ ಸಮುದಾಯ ಹಿಂದುಳಿದಿರುವುದನ್ನು ಉಲ್ಲೇಖಿಸಲಾಗಿದೆ. ನಮ್ಮ ಸಹೋದರ ಸಮುದಾಯದವರು ಶೇ.73ರಷ್ಟು ಬಿಇ ಪದವೀಧರರಿದ್ದರೆ, ನಮ್ಮವರು ಕೇವಲ 23ರಷ್ಟಿದ್ದೇವೆ. ರಾಜ್ಯಕ್ಕೆ ಸಂಬಂಧಿಸಿದ ನ್ಯಾ.ಸದಾಶಿವ ಆಯೋಗದ ವರದಿಯಲ್ಲಿಯೂ ಇದೇ ರೀತಿಯ ಅಂಕಿ–ಅಂಶ ಕಾಣಬಹುದು.
>
> -ಎ.ನಾರಾಯಣಸ್ವಾಮಿ

ಮೈಸೂರು ಮಿತ್ರ ಸೋಮವಾರ 8 ಆಗಸ್ಟ್ 2022

ಹುಣಸೂರಲ್ಲಿ ಕನಕ ಭವನ ಉದ್ಘಾಟನೆ

ಸರ್ಕಾರದಲ್ಲಿ ಹಣವೂ ಇಲ್ಲ, ಅಭಿವೃದ್ಧಿಯೂ ಕನಸು

ವಿಪಕ್ಷ ನಾಯಕ ಸಿದ್ದರಾಮಯ್ಯ ಬೇಸರ



ಹುಣಸೂರು, ಆ.7– ನಾನು ಮುಖ್ಯಮಂತ್ರಿಯಾಗಿದ್ದಾಗ ಒಂದು ದಿನವೂ ಹಣದ ಕೊರತೆಯಾಗಿರಲಿಲ್ಲ. ಈಗಿನ ಸರ್ಕಾರದಲ್ಲಿ ಹಣವೂ ಇಲ್ಲ, ಅಭಿವೃದ್ಧಿಯೂ ಕನಸಾಗಿದೆ ಎಂದು ವಿರೋಧ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ 2.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕನಕ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಸರ್ಕಾರದ ಅವಧಿಯಲ್ಲಿ ರಾಜ್ಯಾದ್ಯಂತ ಎಲ್ಲಾ ಸಮುದಾಯಗಳ ಚಟುವಟಿಕೆಗಾಗಿ ಜಿಲ್ಲಾ, ತಾಲೂಕು ಮಟ್ಟದಲ್ಲಿ ಭವನ ನಿರ್ಮಿಸಿಕೊಳ್ಳಲು ಕೋಟ್ಯಾಂತರ ರೂ. ಅನುದಾನ ನೀಡಿದ್ದೆ ಎಂದ ಅವರು, ಈ ಭವನಗಳು ಸಾಮಾಜಿಕ ಕಾರ್ಯಗಳಿಗೆ ಪೂರಕವಾಗಿರಬೇಕೆಂದು ಆಶಿಸಿದರು. ತಾವು ಮುಖ್ಯಮಂತ್ರಿಯಾಗಿದ್ದ ವೇಳೆ ಇಲ್ಲಿನ ಕನಕ ಭವನಕ್ಕೆ ವೇಳೆ 1.5 ಕೋಟಿ ರೂ. ಅನುದಾನ ನೀಡಿದ್ದೆ. ಶಾಸಕ ಮಂಜುನಾಥ್ ವೈಯಕ್ತಿಕವಾಗಿ 10 ಲಕ್ಷ ನೀಡಿದ್ದಾರೆ. ಅಲ್ಲದೇ ಅನೇಕರು ಭವನ ನಿರ್ಮಾಣಕ್ಕೆ ಕೈ ಜೋಡಿಸಿರುವುದಕ್ಕೆ ಅಭಿನಂದನೆ ಸಲ್ಲಿಸಿ, 8 ವರ್ಷಗಳ ಹಿಂದೆ ನಾನೇ ಶಂಕುಸ್ಥಾಪನೆ ನೆರವೇರಿಸಿ, ಇಂದು ಉದ್ಘಾಟಿಸುತ್ತಿರುವುದು ಸಂತಸ ತಂದಿದೆ.

ಖಜಾನೆ ಖಾಲಿ ಮಾಡಿದ್ದೇ ಸರ್ಕಾರದ ಸಾಧನೆ: ತಮ್ಮ ಸರ್ಕಾರದ ಅವಧಿಯಲ್ಲಿ ಬಡವರಿಗಾಗಿ ತಂದಿದ್ದ ಅನೇಕ ಭಾಗ್ಯಗಳನ್ನು ಈಗಿನ ಸರ್ಕಾರ ಸ್ಥಗಿತಗೊಳಿಸಿದೆ. ಇವರ ಬಳಿ ಹಣವೂ ಇಲ್ಲ, ನಾನು ಸಿಎಂ ಆಗಿದ್ದಾಗ ಒಂದು ದಿನವೂ ಹಣದ ಕೊರತೆ ಇರಲಿಲ್ಲ. ಇದೊಂದು ಖಜಾನೆ ಖಾಲಿ ಮಾಡಿದ ಸರ್ಕಾರವೆಂದು ಟೀಕಿಸಿದರಲ್ಲದೇ ಈವರೆವಿಗೂ ಒಂದು ಮನೆಯನ್ನೂ ಕಟ್ಟಿಸಿಲ್ಲ ಇಂತಹ ಲೂಟಿ ಹೊಡೆಯುವ ಸರ್ಕಾರ ಇರಬೇಕಾ? ಎಂದು ಪ್ರಶ್ನಿಸಿದರು.

ಹುಣಸೂರಿನ ಋಣ ನನ್ನ ಮೇಲಿದೆ: ನನ್ನ ಮೇಲೆ ಹುಣಸೂರು ತಾಲೂಕಿನ ಜನತೆಯ ಋಣ ಬಹಳಷ್ಟಿದೆ. ಆಗಿನಿಂದಲೂ ನಾನು ಹೇಳಿದಂತೆ ಕೇಳಿದ್ದೀರಾ, ಬೆಂಬಲಿಸಿದ್ದೀರಾ, ಹುಣಸೂರು ಜನತೆಗೆ ಎಷ್ಟೇ ಅಭಿನಂದನೆ ಸಲ್ಲಿಸಿದರೂ ಸಾಲದು. ನಾನು ಸಿಎಂ ಆಗಿದ್ದಾಗ ಮಂಜುನಾಥ್ ಸಾಕಷ್ಟು ಕೆಲಸ ಮಾಡಿದ್ದಾರೆ. ಮತ್ತೊಂದು ಅವಕಾಶ ಸಿಕ್ಕಿದರೆ ಜನರ ಸೇವೆ ಮಾಡುವೆ. ನಿಮ್ಮ ಪ್ರೀತಿ ವಿಶ್ವಾಸ ಇರುವ ತನಕ ರಾಜಕೀಯದಲ್ಲಿರುತ್ತೇನೆ. ನನ್ನ 44 ವರ್ಷಗಳ ರಾಜಕೀಯ ಜೀವನದಲ್ಲಿ ರಾಜ್ಯದ ಜನತೆಯ ಋಣ ಸಾಕಷ್ಟಿದೆ ಎಂದು ಸ್ಮರಿಸಿದರು.

ಅನುಭವದ ಐರಾವತ ಸಿದ್ದರಾಮಯ್ಯ: ಶಾಸಕ ಹೆಚ್.ಪಿ. ಮಂಜುನಾಥ್ ಮಾತನಾಡಿ, ರಾಜ್ಯದ ಅಭಿವೃದ್ಧಿಯಲ್ಲಿ ಸಿದ್ದರಾಮಯ್ಯರ ಅನೇಕ ಕೊಡುಗೆಗಳಿವೆ. ತಾಲೂಕಿಗೆ ವಾಲ್ಮಿಕಿ ಸಮುದಾಯ ಭವನಕ್ಕೆ ಒಂದು ಕೋಟಿ, ಅಂಬೇಡ್ಕರ್, ಜಗಜೀವನರಾಂ ಭವನ ಸೇರಿದಂತೆ ಎಲ್ಲ ಜನಾಂಗಗಳ ಭವನಗಳಿಗೆ ಸಿದ್ದರಾಮಯ್ಯ ಅನುದಾನ ನೀಡಿದ್ದಾರೆ. ಇವರು ಜಾತಿ ರಾಜಕೀಯ ಮಾಡಿಲ್ಲ. ಎಲ್ಲ ಸಮುದಾಯವನ್ನು ಸಮಾನವಾಗಿ ಕಂಡಿರುವ ಜನನಾಯಕ. ಹುಣಸೂರಿನ ನೀರಾವರಿ ಯೋಜನೆ, ನಗರಸಭೆ ಮಂಜೂರು, ದೇವರಾಜ ಅರಸು ಆಸ್ಪತ್ರೆ, ಅರಸು ಭವನ ಸೇರಿದಂತೆ ಅನೇಕ ಕೊಡುಗೆಗಳನ್ನು ನೀಡಿರುವ ಸಿದ್ದರಾಮಯ್ಯನವರು ಭಾಗ್ಯರಾಮಯ್ಯ, ಅನುಭವದ ಐರಾವತ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಕನಕ ಪೀಠದ ಶಿವಾನಂದಪುರಿ ಸ್ವಾಮೀಜಿ, ನಗರಸಭೆ ಅಧ್ಯಕ್ಷೆ ಸವಿನಾ ಪರ್ವಿನ್, ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ತಿಮ್ಮಯ್ಯ, ತಮಿಳುನಾಡು ಕುರುಬರ ಅಭಿವೃದ್ಧಿ ಸಮಿತಿ ರಾಜ್ಯಾಧ್ಯಕ್ಷ ಕೃಷ್ಣಸ್ವಾಮಿ, ಮುಖಂಡರಾದ ರವಿಶಂಕರ್, ಅಮಿತ್ ದೇವರಹಟ್ಟಿ, ತಾಲೂಕು ಅಧ್ಯಕ್ಷ ಕುನ್ನೇಗೌಡ, ಗೌರವಾಧ್ಯಕ್ಷ ಡಾ.ಲೋಹಿತ್, ಪದಾಧಿಕಾರಿಗಳಾದ ಗಣೇಶ್ ಕುಮಾರಸ್ವಾಮಿ, ವಾಸೇಗೌಡ, ಮಂಡ್ಯ ಮಹೇಶ್, ಅಶೋಕ್ ರಾಜಲಿಂಗಯ್ಯ, ಬಸವರಾಜು, ಕಲ್ಕುಣಿಕೆ ರಮೇಶ್, ಬಿ.ಎನ್.ಜಯರಾಂ, ನೇರಳಕುಪ್ಪೆ ಮಹದೇವ್, ಪ್ರಭಾಕರ ಹೆಗ್ಗಡೆ ಸೇರಿದಂತೆ ಅನೇಕರಿದ್ದರು.

ಸಿದ್ದರಾಮಯ್ಯಗೆ ಕುರಿ ಕೊಡುಗೆ



ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನವರಿಗೆ ತಾಲೂಕಿನ ಉದ್ದೂರು ಗ್ರಾಮಸ್ಥರು ಕುರಿಯನ್ನು ಕೊಡುಗೆ ನೀಡಿದರು. ಸಭೆ ಆರಂಭದಿಂದಲೂ ಮುಖಂಡರು ಹಾಗೂ ಕಾರ್ಯಕರ್ತರು ಸಿದ್ದರಾಮಯ್ಯರನ್ನು ಸನ್ಮಾನಿಸಲು ಮುಗಿ ಬೀಳುತ್ತಿದ್ದ ದೃಶ್ಯ ಕಂಡು ಬಂತು. ಅಲ್ಲದೇ 'ಹೌದು ಹುಲಿಯಾ, ಟಗರು' ಎಂದು ಭಾಷಣದ ಮಧ್ಯೆ ಯುವಪಡೆ ಘೋಷಣೆ ಕೂಗುತ್ತಿದ್ದರು. ಕೆಲವರು ಹುಣಸೂರಿನಿಂದಲೇ ಸ್ಪರ್ಧಿಸಿ ಎಂದು ಕೂಗಿದರೂ ಸಿದ್ದರಾಮಯ್ಯ ಮಾತ್ರ ಪ್ರತಿಕ್ರಿಯಿಸಲಿಲ್ಲ.



ಹೆಚ್.ಡಿ.ಕೋಟೆ ತಾಲೂಕು ಆಡಳಿತ, ಆರೋಗ್ಯ ಇಲಾಖೆ, ಶಿಶು ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮತ್ತು ರೋಟರಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಹಾಗೂ ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ ಆಚರಣೆ ಹಮ್ಮಿಕೊಳ್ಳಲಾಯಿತು. ಈ ವೇಳೆ ತಹಸೀಲ್ದಾರ್ ರತ್ನಾಂಬಿಕೆ, ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಅಧಿಕಾರಿ ಆಶಾ, ಡಾ.ರವೀಶ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಪೂರ್ಣಿಮಾ, ಚರ್ಮರೋಗ ತಜ್ಞೆ ಡಾ. ಸಹನಾ, ರೋಟರಿ ಅಧ್ಯಕ್ಷ ಗಣೇಶ್ ಲಾಡ್, ಆಶಾ ಕಾರ್ಯಕರ್ತೆಯರು ಮತ್ತು ಗರ್ಭಿಣಿಯರು ಹಾಜರಿದ್ದರು.

ಕಾಲೇಜು ಹೆಚ್ಚುವರಿ ಕಟ್ಟಡ ಕಾಮಗಾರಿಗೆ ಚಾಲನೆ



ಭೇರ್ಯ, ಆ.7– ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಲ್ಲಿ ಇಂಜಿನಿಯರಿಂಗ್ ಕಾಲೇಜು ತೆರೆಯುವಂತೆ ಸರ್ಕಾರದ ಮೇಲೆ ಒತ್ತಡ ಹಾಕಿದ್ದೇನೆ. ಸದ್ಯದಲ್ಲಿ ಕಾಲೇಜು 'ಆರಂಭ'ಕ್ಕೆ ಅನುಮತಿ ದೊರಕಬಹುದು ಎಂದು ಶಾಸಕ ಸಾ.ರಾ. ಮಹೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಸರ್ಕಾರಿ ಪಾಲಿಟೆಕ್ನಿಕ್ ಡಿಪ್ಲೊಮಾ ಕಾಲೇಜಿನಲ್ಲಿ 80 ಲಕ್ಷ ವೆಚ್ಚದ ಹೆಚ್ಚುವರಿ ಕಟ್ಟಡ ಕಾಮಗಾರಿಗೆ ಶಂಕುಸ್ಥಾಪನೆ ಹಾಗೂ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ನಗರ ಬಿಟ್ಟರೆ ಜಿಲ್ಲೆಯಲ್ಲಿ ಅವಳಿ ತಾಲೂಕಿನಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಉನ್ನತ ವ್ಯಾಸಂಗಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ. ಎರಡೂ ತಾಲೂಕಿನಲ್ಲಿಯೂ ಶೈಕ್ಷಣಿಕವಾಗಿ ಎಲ್ಲಾ ರೀತಿಯ ಸೌಲಭ್ಯ ಒದಗಿಸಲಾಗಿದೆ ಎಂದರು.

ಇದಕ್ಕೂ ಮೊದಲು ಶಾಸಕರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ 55 ಲಕ್ಷ ವೆಚ್ಚದ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜು ಕೊಠಡಿಯನ್ನು ಉದ್ಘಾಟಿಸಿದರು. ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ತಾಪಂ ಮಾಜಿ ಸದಸ್ಯೆ ಶೋಭಾ, ಗ್ರಾಪಂ ಅಧ್ಯಕ್ಷೆ ಗೀತಾ, ಸಹಕಾರ ಬ್ಯಾಂಕ್ ಅಧ್ಯಕ್ಷ ಮಂಜುನಾಥ್, ಮಾಜಿ ಅಧ್ಯಕ್ಷ ಅರವಿಂದ್, ಗ್ರಾಪಂ ಸದಸ್ಯರಾದ ಬಲರಾಮ್, ಬಾಲು, ಅರುಣ್ ಕುಮಾರ್, ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ರಾಧಕೃಷ್ಣ, ಮಾಜಿ ಪ್ರಧಾನ ಕಾರ್ಯದರ್ಶಿ ಧನಂಜಯ, ಲೋಕಿ, ಮುರಳಿ, ಸಾ.ರಾ.ಯುವ ಸೇನೆ ರಾಜ್ಯಾಧ್ಯಕ್ಷ ಗೌತಮ, ಸಚಿನ್, ಗುತ್ತಿಗೆದಾರ ಗೋವಿಂದರಾಜು, ಪ್ರಾಂಶುಪಾಲ ವೀರಭದ್ರಸ್ವಾಮಿ, ಎಸ್ಐ ಕುಮುದ, ಉಪನ್ಯಾಸಕರು ಇದ್ದರು.

ಅಪಘಾತದಲ್ಲಿ ಮೃತಪಟ್ಟ ಫಸಿಯೂದ್ದೀನ್ ಮನೆಗೆ

ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ, ಸಾಂತ್ವನ



ಬೈಲಕುಪ್ಪೆ, ಆ.7– ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವಕ್ಕೆ ತೆರಳಿ ವಾಪಸ್ಸಾಗುತ್ತಿದ್ದ ವೇಳೆ ಅಪಘಾತದಲ್ಲಿ ಮೃತಪಟ್ಟ ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ಫಸಿಯೂದ್ದೀನ್ ಮನೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ನಂತರ ಮಾತನಾಡಿದ ಅವರು, ಫಸಿಯೂದ್ದೀನ್ ಕುಟುಂಬದವರು ಯಾವುದೇ ಕಾರಣಕ್ಕೂ ಆತಂಕಕ್ಕೆ ಒಳಗಾಗಬಾರದು. ನಿಮ್ಮೊಂದಿಗೆ ನಾವಿದ್ದೇವೆ ಎಂದು ಭರವಸೆ ನೀಡಿದ ಅವರು, ನಿಮಗೆ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದರು.

ಇದೇ ವೇಳೆ ಫಸಿಯುದ್ದೀನ್ ಕುಟುಂಬಕ್ಕೆ ಸಿದ್ದರಾಮಯ್ಯನವರು 2 ಲಕ್ಷ ರೂ.ಗಳ ವೈಯಕ್ತಿಕ ಸಹಾಯಧನ ನೀಡಿದರು. ಅಲ್ಲದೇ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಎಲ್ಲಾ ರೀತಿಯ ಸಹಕಾರ ಕೊಡಿಸುವುದಾಗಿ ಭರವಸೆ ನೀಡಿದರು.

ಫಸಿಯೂದ್ದೀನ್ ಸಹೋದರ ಸಲಾವುದ್ದೀನ್ ಡಯಾಲಿಸಿಸ್‌ನಲ್ಲಿದ್ದು ಅವರ ವಿವರಗಳನ್ನು ಮಾಜಿ ಶಾಸಕ ಕೆ.ವೆಂಕಟೇಶ್‌ಗೆ ನೀಡುವಂತೆ ಸೂಚಿಸಿದ ಸಿದ್ದರಾಮಯ್ಯ, ಚಿಕಿತ್ಸೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಶಾಸಕ ಜಮೀರ್ ಅಹ್ಮದ್‌ಗೂ ಈ ಬಗ್ಗೆ ಸೂಚಿಸಿದ್ದೇನೆ. ಅವರು ನಿಮ್ಮ ಮನೆಗೆ ಆಗಮಿಸಿ ಸಹಾಯ, ಸಹಕಾರ ನೀಡುವರು ಎಂದ ಸಿದ್ದರಾಮಯ್ಯ, ಇದೇ ವೇಳೆ ಅಪಘಾತದಲ್ಲಿ ಗಾಯಗೊಂಡ ಶೌಕತ್ ಪಾಷ, ಯಕ್ಬಲ್ ಪಾಷ, ಅಬ್ದುಲ್ ಖಾದರ್ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿ ಆಸ್ಪತ್ರೆ ವೆಚ್ಚ ಭರಿಸುವುದಾಗಿ ತಿಳಿಸಿದರು.


ಈ ಸಂದರ್ಭ ಮಾಜಿ ಶಾಸಕ ಕೆ.ವೆಂಕಟೇಶ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪ ಅಮರ್‌ನಾಥ್, ಕಾಂಗ್ರೆಸ್ ಮುಖಂಡ ಟಿ.ಡಿ.ಗಣೇಶ್, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖಂಡ ಗ್ರಾಪಂ ಸದಸ್ಯ ಸುಹೇಲ್ ಪಾಷ, ಜಾಮೀಯಾ ಮಸೀದಿ ಅಧ್ಯಕ್ಷ ನಫೀಜ್ ಖಾನ್, ಉಪಾಧ್ಯಕ್ಷ ನಜತ್ ಪಾಷ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ರಹಮ್ ಜಾನ್ ಬಾಬು, ಟಿ.ಡಿ.ಸ್ವಾಮಿ, ತಾಪಂ ಮಾಜಿ ಸದಸ್ಯ ಶಂಕರೇಗೌಡ ಸೇರಿದಂತೆ ಮತ್ತಿತರರಿದ್ದರು.

ಗಾಂಧಿನಗರದಲ್ಲಿ ಪಡಿತರ ಉಪ ಕೇಂದ್ರ ಉದ್ಘಾಟನೆ



ಪಿರಿಯಾಪಟ್ಟಣ, ಆ.7– ಗ್ರಾಮದ ಕೂಲಿ ಕಾರ್ಮಿಕರು ಹಾಗೂ ಮಹಿಳೆಯರು 5 ಕಿ.ಮೀ ದೂರದ ಪೂನಾಡಹಳ್ಳಿಗೆ ಹೋಗಿ ಪಡಿತರ ತರುವ ಸಂಕಷ್ಟ ಮನಗಂಡು ಗ್ರಾಮಸ್ಥರ ಮನವಿ ಮೇರೆಗೆ ಗಾಂಧಿನಗರದಲ್ಲೇ ಪಡಿತರ ಉಪಕೇಂದ್ರ ತೆರೆಯಲಾಗಿದೆ ಎಂದು ಶಾಸಕ ಕೆ. ಮಹದೇವ್ ತಿಳಿಸಿದರು.

ಗ್ರಾಮದಲ್ಲಿ ಶುಕ್ರವಾರ ಪಡಿತರ ಉಪ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದ ಜನರು ಚುನಾವಣೆ ವೇಳೆ ಗ್ರಾಮದಲ್ಲಿ ಪಡಿತರ ಉಪಕೇಂದ್ರ ಸ್ಥಾಪಿಸುವಂತೆ ಬೇಡಿಕೆ ಇಟ್ಟಿದ್ದರು. ಅದು ಶಿರಸ್ತೇದಾರ್ ಸಣ್ಣಸ್ವಾಮಿ ಸಹಕಾರದೊಂದಿಗೆ ಈಡೇರಿದೆ ಗ್ರಾಮಸ್ಥರು ಮತದಾನ ಮಾಡಲು ಪಕ್ಕದ ಬಸವನ ಹಳ್ಳಿಗೆ ಹೋಗಬೇಕಿದೆ. ಶೀಘ್ರ ಚುನಾವಣಾಧಿಕಾರಿಗಳೊಂದಿಗೆ ಚರ್ಚಿಸಿ ಮತಗಟ್ಟೆ ಸ್ಥಾಪನೆಗೆ ಕ್ರಮ ಕೈಗೊಳ್ಳುವುದಾಗಿ ಅವರು ತಿಳಿಸಿದರು. ಈ ವೇಳೆ ಆಹಾರ ಶಿರಸ್ತೇದಾರ್ ಸಣ್ಣಸ್ವಾಮಿ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡರಾದ ಅಣ್ಣೇಗೌಡ, ಶಿವಣ್ಣಶೆಟ್ಟಿ, ಜಲೇಂದ್ರ, ಗಗನ್, ಸ್ವಾಮಿನಾಯಕ್, ಅಶೋಕ್ ಸೇರಿದಂತೆ ಗ್ರಾಮಸ್ಥರಿದ್ದರು.



ಮಾಜಿ ಸಿಎಂ ಸಿದ್ದರಾಮಯ್ಯನವರ 75ನೇ ಹುಟ್ಟುಹಬ್ಬದ ಅಮೃತ ಮಹೋತ್ಸವದ ಅಂಗವಾಗಿ ಭಾನುವಾರ ಸಂಜೆ ಹುಣಸೂರಿನ ಸಿಬಿಟಿ ಕಾಲೋನಿ, ಹುಂಡಿಮಾಳ, ರತ್ನಪುರಿ ಗ್ರಾಮಸ್ಥರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಿದರು. ಈ ವೇಳೆ ತಮಿಳುನಾಡು ರಾಜ್ಯ ಕುರುಬ ಸಂಘದ ಅಧ್ಯಕ್ಷ ಕೃಷ್ಣಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕುನ್ನೇಗೌಡ ಇನ್ನಿತರರಿದ್ದರು.



ನಂಜನಗೂಡು ತಾಲೂಕಿನ ತಾಂಡವಪುರ, ಅಡಕನಹಳ್ಳಿ, ಹೆಬ್ಯಾ ಗ್ರಾಮಗಳ ರೈತರಿಗೆ ಏಷಿಯನ್ ಪೈಂಟ್ಸ್ ಹಾಗೂ ನ್ಯಾಷನಲ್ ಆಗ್ರೋ ಫೌಂಡೇಶನ್ ಸಂಸ್ಥೆ ವತಿಯಿಂದ ಉಚಿತವಾಗಿ ಸಸಿ ವಿತರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ನಾಗಮಣಿ, ಶೀಲಾ, ಸಿಬ್ಬಂದಿಗಳಾದ ಈಶ್ವರ್, ಗಣೇಶ, ಪ್ರಸಾದ್, ಶಿವಸ್ವಾಮಿ ಹಾಜರಿದ್ದರು.

ನ್ಯಾ.ಸದಾಶಿವ ಆಯೋಗದ ವರದಿ ಜಾರಿಗೊಳಿಸುವ ಬಗ್ಗೆ ಭರವಸೆ ನೀಡದ

ಯಾವುದೇ ಪಕ್ಷವನ್ನು ಮಾದಿಗ ಸಮುದಾಯ ಬೆಂಬಲಿಸಲ್ಲ

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಎಚ್ಚರಿಕೆ



ತಿ.ನರಸೀಪುರ, ಆ.7– ಮಾದಿಗ ಸಮುದಾಯದ ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆ ಹಿತದೃಷ್ಟಿಯಿಂದ ನ್ಯಾ.ಸದಾಶಿವ ಆಯೋಗದ ವರದಿ ಜಾರಿಗೊಳಿಸುವ ಬಗ್ಗೆ ರಾಜಕೀಯ ಪಕ್ಷಗಳಿಂದ ಸೂಕ್ತ ಭರವಸೆ ಸಿಗಬೇಕು. ನ್ಯಾಯ, ಸೂಕ್ತ ಭರವಸೆ ನೀಡದ ಯಾವುದೇ ಪಕ್ಷವನ್ನು ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಸಮುದಾಯ ಬೆಂಬಲಿಸುವುದಿಲ್ಲ ಎಂದು ಡಾ.ಬಾಬು ಜಗಜೀವನ್ ರಾಂ ಸಮತಾ ಆಂದೋಲನದ ರಾಜ್ಯಾಧ್ಯಕ್ಷ, ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಎಚ್ಚರಿಸಿದರು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದಾಶಿವ ಆಯೋಗವನ್ನು ಸರ್ಕಾರ ಜಾರಿಗೆ ತರಬೇಕು. ಆಯೋಗದ ವರದಿ ಜಾರಿಗೆ ತರದ ಹೊರತು ಮಾದಿಗರ ಉದ್ಧಾರದ ಭಾಷಣ ಬರೀ ಬೊಗಳೆಯಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಣ ನೀಡಿದರೆ, ಆಸೆ ಆಮಿಷ ಒಡ್ಡಿದರೇ ಸಮುದಾಯದ ಜನ ಮತ ಹಾಕುತ್ತಾರೆ ಅಂದರೆ ಸಾಧ್ಯವಿಲ್ಲ. ದುಡ್ಡೇ ಇಲ್ಲದ ಕಾಲದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲೆಗಳ ದ್ವಿಸದಸ್ಯ ಕ್ಷೇತ್ರದಿಂದ ಆಯ್ಕೆಗೊಂಡಿದ್ದೆ ಎಂದ ಅವರು, ಮುಖ್ಯಮಂತ್ರಿಗಳು ಸದಾಶಿವ ಆಯೋಗ ವರದಿ ಜಾರಿ ಗೊಳಿಸಿದರೂ ಸಂತೋಷ. ಇಲ್ಲವೇ ಮುಂದಾದರೂ ಜಾರಿ ಮಾಡುವ ಬಗ್ಗೆ ಘೋಷಣೆ ಮಾಡಬೇಕು. ನಾನೊಂದು ಪಕ್ಷದ ಕಾರ್ಯಕರ್ತನಾಗಿದ್ದರೂ, ಸಮುದಾಯದ ಹಿತಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧನಿದ್ದೇನೆ. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಸೇರಿದಂತೆ 10 ಜಿಲ್ಲೆಗಳ ಒಂದೊಂದು ವಿಧಾನಸಭಾ ಕ್ಷೇತ್ರಗಳಲ್ಲೂ 15 ರಿಂದ 25 ಸಾವಿರ ಮಾದಿಗ ಮತದಾರರು ಇದ್ದಾರೆ. ಆಡಳಿತ ಪಕ್ಷವಲ್ಲದೆ ಆಯೋಗ ವರದಿ ಜಾರಿ ಬಗ್ಗೆ ಖಚಿತ ಭರವಸೆ ನೀಡದ ರಾಜಕೀಯ ಪಕ್ಷಗಳಿಗೆ ಮತ ನೀಡುವುದು ಕಷ್ಟವಾಗಲಿದೆ ಎಂದರು. ಸದಾಶಿವ ಆಯೋಗದ ವರದಿ ಜಾರಿ ಬಗ್ಗೆ ಹಲವು ಹೋರಾಟ, ಸಮಾವೇಶ ನಡೆದಿವೆ. ದೇಶ ಮತ್ತು ರಾಜ್ಯದಲ್ಲಿ ಅನೇಕ ಪಕ್ಷಗಳಿವೆ. ಶಾಸನ ಸಭೆಯಲ್ಲಿ ಸಮುದಾಯದ ಜನಪ್ರತಿನಿಧಿಗಳು, ಸರ್ಕಾರದಲ್ಲಿ ಸಚಿವರಿದ್ದರೂ ಯಾವುದೇ ಪ್ರಯೋಜನವಿಲ್ಲ. ಯಾರೂ ಕೂಡ ಸಂಪುಟ ಸಭೆಯಲ್ಲಿ ಈ ಬಗ್ಗೆ ಮಾತಾಡುತ್ತಿಲ್ಲ. ನಾನೊಬ್ಬ ಸಮಾಜದ ಸಾಮಾನ್ಯ ವ್ಯಕ್ತಿಯಾಗಿ ವರದಿ ಜಾರಿಗಾಗಿ ಧ್ವನಿ ಎತ್ತುತ್ತಿದ್ದೇನೆ. ಸಮುದಾಯದ ಬೇಡಿಕೆಯಂತೆ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲೂ ಸದಾಶಿವ ಆಯೋಗ ವರದಿ ಜಾರಿ ಗೊಳಿಸುವ ಬಗ್ಗೆ ಘೋಷಣೆ ಮಾಡಬೇಕು. ಈ ಬಗ್ಗೆ ಭರವಸೆ ನೀಡದ ಹೊರತು ಸಮುದಾಯದ ಜನರು ಬೆಂಬಲಿಸುತ್ತಾರೆ ಎಂಬ ನಂಬಿಕೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಬಾಬು ಜಗಜೀವನ್ ರಾಂ ಸಂಘದ ತಾಲೂಕು ಅಧ್ಯಕ್ಷ ಮಲಿಯೂರು ಡಿ.ಶಂಕರ್, ಬನ್ನೂರು ಪುರಸಭಾ ಸದಸ್ಯ ಶಿವಣ್ಣ ಉಪಸ್ಥಿತರಿದ್ದರು.

> **6 ಪುರಸಭಾ ಕಾಂಗ್ರೆಸ್ ಸದಸ್ಯರೊಬ್ಬರ ಕುಮ್ಮಕ್ಕಿನಿಂದಾಗಿ ಪುರಸಭೆ ಬಿಜೆಪಿ ಸದಸ್ಯ ಎಸ್.ಕೆ. ಕಿರಣ್ ಅವರ ಮೇಲೆ ಹಲ್ಲೆ ನಡೆಸಿರುವ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು. ನಮ್ಮದೇ ಸರ್ಕಾರವಿದ್ದರೂ, ಪಕ್ಷದಿಂದ ಯಾವುದೇ ಪ್ರತಿಫಲಾಪೇಕ್ಷೆ ಬಯಸದ ನಿಷ್ಠಾವಂತ ಕಾರ್ಯಕರ್ತನ ಮೇಲಿನ ಹಲ್ಲೆ ನಿಜಕ್ಕೂ ಖಂಡನೀಯ. ಈ ಬಗ್ಗೆ ಕ್ರಮ ಕೈಗೊಳ್ಳದ ಪೊಲೀಸರ ಮೇಲೆ ಗೃಹ ಸಚಿವರ ಗಮನವಿರಬೇಕು.**
>
> **-ಸಿ.ರಮೇಶ್, ಮಾಜಿ ವಿಧಾನಪರಿಷತ್ ಸದಸ್ಯ**

ಸ್ಕ್ರೀನ್ 1	ವಿಕ್ರಾಂತ್ ರೋಣ (ಕ): ಬೆ.10.30ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.1.30ಕ್ಕೆ, ಸೀತಾರಾಮಂ (ತೆ): ಸಂ.4.20ಕ್ಕೆ, ಬುಲೆಟ್ ಟ್ರೇನ್ (ಇಂ): ರಾ.7.25ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಪಾಪ್ಪಂ (ಮ): ಬೆ.9.50ಕ್ಕೆ, ರಾ.10ಕ್ಕೆ, ಕಟೇರಿ (ತ): ಮ.1ಕ್ಕೆ, ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಮ.3.25ಕ್ಕೆ, ಸಂ.5.35ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 3	ಸೀತಾರಾಮಂ (ತೆ): ಬೆ.10.10ಕ್ಕೆ, ಸಂ.6.55ಕ್ಕೆ, ಕುರುತಿ ಆಟಂ (ತ): ಮ.1.15ಕ್ಕೆ, ಬುಲೆಟ್ ಟ್ರೇನ್ (ಇಂ): ಸಂ.4.15ಕ್ಕೆ, ಬಿಂಬಿಸಾರ (ತೆ): ರಾ.10.05ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 1	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸೀತಾರಾಮಂ (ತೆ): ಬೆ.10.15ಕ್ಕೆ, ಸಂ.6.40ಕ್ಕೆ, ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಮ.1.35ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಮ.3.55ಕ್ಕೆ, ಪಾಪ್ಪಂ (ಮ): ರಾ.10ಕ್ಕೆ.
ಸ್ಕ್ರೀನ್ 3	ಬುಲೆಟ್ ಟ್ರೇನ್ (ಇಂ): ಬೆ.10.10ಕ್ಕೆ, ಮ.3.30ಕ್ಕೆ, ಪೊಯ್‌ಕ್ಕಲ್ ಕುತ್ತಿರೈ (ತ): ಮ.12.55ಕ್ಕೆ, ವಿಕ್ರಾಂತ್ ರೋಣ (ಕ): ಸಂ.6.15ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಬೆ.11.45ಕ್ಕೆ, ರಾ.8.10ಕ್ಕೆ, ಬಿಂಬಿಸಾರ (ತೆ): ಮ.2.05ಕ್ಕೆ, ಕುರುತಿ ಆಟಂ (ತ): ಸಂ.5.05ಕ್ಕೆ, ಬುಲೆಟ್ ಟ್ರೇನ್ (ಇಂ): ರಾ.10.30ಕ್ಕೆ.

ಸ್ಕ್ರೀನ್ 1	ಚೇಜ಼್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
ಸ್ಕ್ರೀನ್ 2	ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 3	ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
ಸ್ಕ್ರೀನ್ 4	ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೊಕೆ ಬೈ (ಹಿಂ): ಸಂ.4ಕ್ಕೆ.

ವಿಕ್ರಾಂತ್ ರೋಣ (3ಡಿ) (ಕ): ಬೆ.8.50ಕ್ಕೆ, ಬೆ.9.50ಕ್ಕೆ, ಮ.12ಕ್ಕೆ, ಮ.1ಕ್ಕೆ, ಮ.3.10ಕ್ಕೆ, ಸಂ.4.10ಕ್ಕೆ, ಸಂ.6.20ಕ್ಕೆ, ರಾ.7.20ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವಿಕ್ರಾಂತ್ ರೋಣ (ಕ): ಬೆ.9.40ಕ್ಕೆ, ಮ.12.50ಕ್ಕೆ, ಮ.3.55ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ವಿಕ್ರಾಂತ್ ರೋಣ (ಹಿಂ): ಬೆ.9.35ಕ್ಕೆ, ಮ.12.45ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಶಂಶೀರಾ (ಹಿಂ): ಮ.3.45ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಬೆ.10.05ಕ್ಕೆ, ಮ.12.55ಕ್ಕೆ, ಸಂ.4ಕ್ಕೆ, ಸಂ.6.55ಕ್ಕೆ, ರಾ.9.45ಕ್ಕೆ, ಗುಲುಗುಲು (ತ): ಮ.3.45ಕ್ಕೆ, ರಾಮರಾವ್ ಆನ್ ಡ್ಯೂಟಿ (ತೆ): ಬೆ.9.10ಕ್ಕೆ, ಮ.12.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಾಂತ್ ರೋಣ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತ್ರಿವಿಕ್ರಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸೀತಾರಾಮಂ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಕುರುತಿ ಆಟಂ (ತ), ಕಟೇರಿ (ತ)	2 ಪ್ರದರ್ಶನಗಳು
ಸಂಗಂ	
ರಾಮರಾವ್ (ತೆ)	4 ಪ್ರದರ್ಶನಗಳು
ಲಿಡೋ	
ಕಟೇರಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಬಿಂಬಿಸಾರ (ತೆ)	4 ಪ್ರದರ್ಶನಗಳು

ಸಮಾಜ ಸುಧಾರಣೆಯಲ್ಲಿ ಲಯನ್ಸ್ ಸಂಸ್ಥೆ ಮಹತ್ತರ ಪಾತ್ರ



ಸರಗೂರು, ಆ.7– ಪಟ್ಟಣದ ಲಯನ್ಸ್ ಸಂಸ್ಥೆ ಸೇವಾ ಕಾರ್ಯಗಳ ಮೂಲಕ ಸಮಾಜ ಸುಧಾರಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಲಯನ್ಸ್ ಸಂಸ್ಥೆ ಎಂಜೆಎಫ್ ಎಂ.ಎನ್.ಜೈಪ್ರಕಾಶ್ ತಿಳಿಸಿದರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ನಡೆದ ಲಯನ್ಸ್ ಸಂಸ್ಥೆ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಚಿಂತನೆಯಲ್ಲಿ ಸ್ಪಷ್ಟತೆ, ಹೃದಯದಲ್ಲಿ ಪರಿಶುದ್ಧತೆ ಇದ್ದರೆ ನಾವು ಮಾಡುವ ಯಾವುದೇ ಕೆಲಸ ಪರಿಪೂರ್ಣವಾಗಿರುತ್ತವೆ. ನಾವು ಜವಾಬ್ದಾರಿ ವಹಿಸಿಕೊಂಡು ಗುರಿ ಮುಟ್ಟಲು ಹೇಗೆ ಶ್ರಮಿಸುತ್ತೇವೆಯೋ, ಹಾಗೆ ಅಲ್ಲಿಂದ ನಿರ್ಗಮಿಸುವಾಗ ಅಲ್ಲಿ ಬಿಟ್ಟು ಹೋದ ಮೌಲ್ಯಗಳು ಮುಂದಿನ ಪೀಳಿಗೆಗೆ ಆದರ್ಶವಾಗಿರಬೇಕು ಎಂದರು.

ಇದೇ ವೇಳೆ ನೂತನ ಅಧ್ಯಕ್ಷ ಎಸ್.ಎಸ್. ಶ್ರೀಕಂಠಸ್ವಾಮಿ ಹಾಗೂ ನಿರ್ದೇಶಕರಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಅಲ್ಲದೇ ಶಿಕ್ಷಣ, ಆರೋಗ್ಯ, ಆಧ್ಯಾತ್ಮ ಕ್ಷೇತ್ರಗಳಲ್ಲಿ ಸಾಧನೆಗೈದ ಡಾ.ಎಸ್.ಎಂ.ಕಸ್ತೂರಿ ರಂಗನ್, ವೈದ್ಯರಾದ ಡಾ.ಎಂ.ಆರ್.ಅಶೋಕ್, ರಾಮಕೃಷ್ಣ ವಿದ್ಯಾಶಾಲೆ ಎಸ್.ಆರ್. ರಮೇಶ್ ಅವರನ್ನು ಲಯನ್ಸ್ ಸಂಸ್ಥೆಯಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ವಾಣಿಜ್ಯೋದ್ಯಮ ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಕಸ್ತೂರಿ ಟಿವಿ ಪ್ರಧಾನ ಸಂಸ್ಥಾಪಕ ಮನೋಜ್ ಕುಮಾರ್, ಕಾಸಾ ಮೆರಿಡಿಯನ್ ಮಾಲೀಕ ಕೆ.ವೇಣುಗೋಪಾಲ್, ವಿದ್ಯುತ್ ಪ್ರಕಾಶನ ಮೈಸೂರು ಸಿ.ಎನ್.ಕೇಶವಪ್ರಸಾದ್, ಲಯನ್ಸ್ ಸಂಸ್ಥೆ ಅಧ್ಯಕ್ಷ ಎಸ್.ಎಸ್.ಶ್ರೀಕಂಠಸ್ವಾಮಿ, ಕಾರ್ಯದರ್ಶಿ ಕೆ.ಸುರೇಶ್ ಜೈನ್, ಖಜಾಂಚಿ ಎಸ್.ಪಿ.ಪ್ರಸಾದ್, ನಿಕಟಪೂರ್ವ ಅಧ್ಯಕ್ಷ ಬ್ರಹ್ಮದೇವಯ್ಯ, ಉಪಾಧ್ಯಕ್ಷರಾದ ಎಸ್. ನಾರಾಯಣ್, ಎಸ್.ಎನ್.ಪ್ರತಾಪ್, ಎಸ್.ಎಸ್. ಪ್ರಭುಸ್ವಾಮಿ, ಎಸ್.ಬಿ.ನಾಗರಾಜು, ಎಸ್.ಬಿ. ಸಮತ್ ಜೈನ್, ನಿರ್ದೇಶಕರಾದ ಬೀನಾ ಪ್ರಸಾದ್, ಹೇಮಪ್ರಸಾದ್, ಎಸ್ಎಸ್‌ಸಿ ಸೀಮಾ ಮೋಹನ್‌ಕುಮಾರ್, ಸುಹಾಸ್ ವಿಜಯಕೀರ್ತಿ, ಎಸ್.ಪಿ.ಪ್ರಮೋದ್, ಮದನ್, ಎಸ್.ಮಂಜುನಾಥ್, ಚಿರಂತ್ ವಿ, ವರ್ತಕರ ಸಂಘದ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್, ಪಪಂ ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ವೀರೇಶ್, ಶ್ರೀನಿವಾಸ್ ಇನ್ನಿತರರಿದ್ದರು.

ಮೈಸೂರು ವಾರಿಯರ್ಸ್, ಮಂಗಳೂರು ಯುನೈಟೆಡ್ ಶುಭಾರಂಭ

ಮೈಸೂರು, ಆ.7(ಎಂಕೆ)– ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಉದ್ಘಾಟನಾ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಮಂಗಳೂರು ಯುನೈಟೆಡ್ ಜಯ ಗಳಿಸಿದರೆ, ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಮೈಸೂರು ವಾರಿಯರ್ಸ್ ಭರ್ಜರಿ ಜಯ ಗಳಿಸಿತು.

ಮೈಸೂರು ವಾರಿಯರ್ಸ್‌ಗೆ ಜಯ: ಮಳೆಬಾಧಿತ ಪಂದ್ಯದಲ್ಲಿ ಶ್ರೇಯಸ್ ಗೋಪಾಲ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಮೈಸೂರು ವಾರಿಯರ್ಸ್ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ವಿಜೆಡಿ ನಿಯಮದನ್ವಯ 69 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.



ಮೈಸೂರು ತಂಡದ ಶ್ರೇಯಸ್ ಗೋಪಾಲ್



ಮಂಗಳೂರು ತಂಡದ ಆರ್.ಸಮರ್ಥ್

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 172 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕರುಣ್ ನಾಯರ್ 27, ನಿಹಾಲ್ ಉಲ್ಲಾಸ್ 6, ಹಾಗೂ ನಾಗಾ ಭರತ್ 1 ರನ್ ಗಳಿಸಿ ಬಹುಬೇಗ ಪೆವಿಲಿಯನ್ ಸೇರುವ ಮೂಲಕ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. 4ನೇ ವಿಕೆಟ್‌ಗೆ ಜೊತೆಯಾದ ಶ್ರೇಯಸ್ ಗೋಪಾಲ್, ಪವನ್ ದೇಶಪಾಂಡೆ 89ರನ್ ಗಳಿಸಿದರು. ಈ ವೇಳೆ 43 ರನ್ ಗಳಿಸಿದ್ದ ಪವನ್ ದೇಶಪಾಂಡೆ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಶ್ರೇಯಸ್ ಗೋಪಾಲ್ 3 ಸಿಕ್ಸರ್, 5 ಬೌಂಡರಿ ಒಳಗೊಂಡ 62 ರನ್ ಗಳಿಸಿದರು. ಶಿವಮೊಗ್ಗ ಪರ ಸ್ಟಾಲಿನ್ ಹೂವರ್, ಕೆ.ಗೌತಮ್ ತಲಾ 2, ಅವಿನಾಶ್ 1 ವಿಕೆಟ್ ಪಡೆದರು.

173 ರನ್‌ಗಳ ಗೆಲುವಿನ ಗುರಿ ಪಡೆದ ಶಿವಮೊಗ್ಗ ಸ್ಟ್ರೈಕರ್ಸ್ ಇನ್ನಿಂಗ್ಸ್ ವೇಳೆ ಮಳೆ ಬಂದ ಹಿನ್ನೆಲೆಯಲ್ಲಿ ಪಂದ್ಯವನ್ನು 18 ಓವರ್‌ಗಳಿಗೆ ಸೀಮಿತಗೊಳಿಸಿ 161ರನ್ ಗುರಿ ನೀಡಲಾಯಿತು. ಶಿವಮೊಗ್ಗ ಪರ ಕೃಷ್ಣಮೂರ್ತಿ ಸಿದ್ದಾರ್ಥ್ 21, ಕೆ.ಗೌತಮ್ 23, ವಿನಯ್ ಸಾಗರ್ 18, ಕೆಸಿ ಕಾರ್ಯಪ್ಪ 10 ರನ್ ಗಳಿಸಿದರು. ಅಂತಿಮವಾಗಿ ಶಿವಮೊಗ್ಗ 15.1 ಓವರ್‌ಗಳಲ್ಲಿ 91 ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ಮೈಸೂರು ವಾರಿಯರ್ಸ್ ಪರ ಶುಭಾಂಗ್ ಹೆಗ್ಡೆ 4, ಪ್ರತೀಕ್ ಜೈನ್, ವಿದ್ಯಾಧರ ಪಾಟೀಲ್ ತಲಾ 2, ಆದಿತ್ಯ ಗೋಪಾಲ್, ಶ್ರೇಯಸ್ ಗೋಪಾಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಶ್ರೇಯಸ್ ಗೋಪಾಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮಂಗಳೂರಿಗೆ ಜಯ: ನಾಯಕ ಆರ್.ಸಮರ್ಥ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಮಂಗಳೂರು ಯುನೈಟೆಡ್ ಹುಬ್ಬಳ್ಳಿ ಟೈಗರ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಕೇವಲ 119 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ತುಷಾರ್ ಸಿಂಗ್, ಲಿಯಾನ್ ಖಾನ್ ತಲಾ 34 ರನ್ ಗಳಿಸಿದ್ದು, ಬಿಟ್ಟರೇ ಉಳಿದವರಿಂದ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಮಂಗಳೂರು ಪರ ಹೆಚ್.ಎಸ್.ಶರತ್, ವೈಶಾಖ್ ವಿಜಯ್ ಕುಮಾರ್ ತಲಾ 2, ಎಂ.ವೆಂಕಟೇಶ್, ಎ.ಸಿ.ರೋಹಿತ್ ಕುಮಾರ್ ಹಾಗೂ ಅಮಿತ್ ವರ್ಮಾ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಪಂದ್ಯದ ಮೊದಲಾರ್ಧದ ನಂತರ ಮಳೆ ಬಂದ ಕಾರಣ ಪಂದ್ಯವನ್ನು ವಿಜೆಡಿ ನಿಯಮದನ್ವಯ 18 ಓವರ್‌ಗಳಿಗೆ ಸೀಮಿತಗೊಳಿಸಿ 112 ರನ್‌ಗಳ ಗೆಲುವಿನ ಗುರಿ ನಿಗದಿ ಪಡಿಸಲಾಯಿತು.

ಈ ವೇಳೆ ಗೆಲುವಿನ ಗುರಿ ಬೆನ್ನತ್ತಿದ ಮಂಗಳೂರು ಯುನೈಟೈಡ್ ಆರಂಭದಲ್ಲೇ 6 ರನ್ ಗಳಿಸಿದ್ದ ಮ್ಯಾಕ್ನೀಲ್ ಹ್ಯಾಡ್ಲಿ ನೊರೊನ್ಹಾ ವಿಕೆಟ್ ಕಳೆದುಕೊಂಡಿತು. ಈ ವೇಳೆ ಒಂದಾದ ನಾಯಕ ಆರ್.ಸಮರ್ಥ್ ಹಾಗೂ ನಿಖಿನ್ ಜೋಸ್ 3ನೇ ವಿಕೆಟ್‌ಗೆ 67 ರನ್ ಜೊತೆಯಾಟವಾಡುವ ಮೂಲಕ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿದರು. ಈ ವೇಳೆ 2 ಬೌಂಡರಿ ಒಳಗೊಂಡ 23 ರನ್ ಗಳಿಸಿದ್ದ ನಿಖಿನ್ ಜೋಸ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ನಾಯಕನಿಗೆ ತಕ್ಕ ಆಟವಾಡಿದ ಸಮರ್ಥ್ 41 ಎಸೆತಗಳಲ್ಲಿ 2 ಸಿಕ್ಸರ್, 6 ಬೌಂಡರಿ ಒಳಗೊಂಡ 57 ರನ್ ಗಳಿಸಿ ಅಜೇಯರಾಗುಳಿದರೇ, ಇವರಿಗೆ ಉತ್ತಮ ಸಾಥ್ ನೀಡಿದ ಅಭಿನವ್ ಮನೋಹರ್ 25 ರನ್ ಗಳಿಸಿ ತಂಡಕ್ಕೆ ಜಯ ತಂದಿತ್ತರು. ಅಂತಿಮವಾಗಿ ಮಂಗಳೂರು ಯುನೈಟೈಡ್ 16 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 114 ರನ್ ಗಳಿಸುವ ಮೂಲಕ ಜಯದ ನಗೆ ಬೀರಿತು. ಹುಬ್ಬಳ್ಳಿ ಪರ ಅಭಿಮನ್ಯು ಮಿಥುನ್, ಜಾಹೂರ್ ಫಾರೂಕ್ ತಲಾ ಒಂದೊಂದು ವಿಕೆಟ್ ಪಡೆದರು. ಸಮರ್ಥ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಪಾತ್ರರಾದರು.



ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ವತಿಯಿಂದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿರುವ 75 ಕಿ.ಮೀ. ಪಾದಯಾತ್ರೆಗೆ ಇಲವಾಲದ ಗಣಪತಿ ದೇವಸ್ಥಾನದ ಬಳಿ ಚಾಲನೆ ದೊರೆತ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರನ್ನು ಕೆಪಿಸಿಸಿ ಕಾರ್ಯದರ್ಶಿಯೂ ಆದ ನಾಗವಾಲ ಗ್ರಾಪಂ ಅಧ್ಯಕ್ಷ ನರೇಂದ್ರ ಅಭಿನಂದಿಸಿದರು. ಕೆಪಿಸಿಸಿ ಕಾರ್ಯದರ್ಶಿ ಜೇಸುದಾಸ್, ಸದಸ್ಯ ನರಸೇಗೌಡ. ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಹಿನಕಲ್ ಮಂಜು, ಪ್ರಧಾನ ಕಾರ್ಯದರ್ಶಿ ಧನಗಳ್ಳಿ ಪ್ರವೀಣ್, ಮುಖಂಡರಾದ ಚೆಟ್ಟಿ ಹುಂಡಿ ಸುನಿಲ್, ನಾಡನಹಳ್ಳಿ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.



ನೌಕರರ ಹಿತ ಕಾಪಾಡುವಲ್ಲಿ ಕೆಎಸ್‌ಆರ್‌ಟಿಸಿ ಕೂಟದ ಸದಸ್ಯರು ವಿಫಲ

ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆರೋಪ

ಮೈಸೂರು, ಆ.7(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ನೌಕರರ ವೇತನ ಪರಿಷ್ಕರಣೆ, ಮುಷ್ಕರ ಸಂದರ್ಭದಲ್ಲಿ ವಜಾಗೊಂಡ ನೌಕರರ ಹಿತ ಕಾಯುವಲ್ಲಿ ಕೆಎಸ್‌ಆರ್‌ಟಿಸಿ ಕೂಟದ ಸದಸ್ಯರು ಬದ್ಧತೆ ತೋರುತ್ತಿಲ್ಲ ಎಂದು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆರೋಪಿಸಿದೆ.

ಕೆಎಸ್‌ಆರ್‌ಟಿಸಿ ಕೂಟದ ಸದಸ್ಯರ ಧೋರಣೆಯನ್ನು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ (ಎಐಟಿಯುಸಿ)ನ ಹೆಚ್.ವಿ.ಅನಂತ ಸುಬ್ಬರಾವ್, ಕೆಎಸ್‌ಆರ್‌ಟಿಸಿ ಫೆಡರೇಷನ್ (ಸಿಐಟಿಯು)ನ ಹೆಚ್.ಡಿ.ರೇವಪ್ಪ, ಮಹಾಮಂಡಳದ ಬಿ.ಜಯದೇವರಾಜೇ ಅರಸು, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್‌ನ ಕೆ.ಆರ್.ವಿಜಯಕುಮಾರ್, ಎಸ್ಸಿ–ಎಸ್ಟಿ ಎಂಪ್ಲಾಯೀಸ್ ಯೂನಿಯನ್‌ನ ವೆಂಕಟರಮಣಪ್ಪ, ಎಸ್ಸಿ–ಎಸ್ಟಿ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಎಂ.ಮಲ್ಲಿಕಾರ್ಜುನ ಮೂರ್ತಿ ಜಂಟಿ ಕ್ರಿಯಾ ಸಮಿತಿ ಪರವಾಗಿ ಪತ್ರಿಕೆ ಹೇಳಿಕೆ ಬಿಡುಗಡೆಗೊಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ನೌಕರರ ಸದ್ಯದ ಪರಿಸ್ಥಿತಿಯನ್ನು ಮನಗಂಡು ಆರು ಕಾರ್ಮಿಕ ಸಂಘಟನೆಗಳು ಒಟ್ಟುಗೂಡಿ ಜಂಟಿಕ್ರಿಯಾ ಸಮಿತಿ ರಚಿಸಿಕೊಂಡು ನಾಲ್ಕು ಪೂರ್ವ ಬಾವಿ ಸಭೆಯಲ್ಲಿ ಭಾಗವಹಿಸಿದ್ದ ಕೂಟದ ಸದಸ್ಯರು ಸಾರಿಗೆ ನೌಕರರ ಹಿತ ಕಾಪಾಡುವ ಸೂಕ್ತ ನಿರ್ಧಾರ ಕೈಗೊಳ್ಳಲು ವಿಫಲರಾಗಿದ್ದು, ಜಂಟಿ ಕ್ರಿಯಾ ಸಮಿತಿ ಸದಸ್ಯರ ವಿರುದ್ಧವೇ ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಕಟು ಶಬ್ದದಲ್ಲಿ ಖಂಡಿಸುವುದಾಗಿ ತಿಳಿಸಲಾಗಿದೆ.

ಕೆಎಸ್‌ಆರ್‌ಟಿಸಿ ನೌಕರರ ಕೂಟದ ಸದಸ್ಯರಿಗೆ ರಾಜ್ಯದ ನಾಲ್ಕು ಸಾರಿಗೆ ನಿಗಮದ ಆಡಳಿತ ವರ್ಗದಿಂದ ನೌಕರರಿಗೆ ಆಗುತ್ತಿರುವ ದೌರ್ಜನ್ಯಕ್ಕಿಂತ ಅವರ ಒಣ ಪ್ರತಿಷ್ಠೆಯೇ ಹೆಚ್ಚಾಗಿದ್ದು, 2021 ಏಪ್ರಿಲ್‌ನಲ್ಲಿ ನಡೆದ ಸರ್ಕಾರದ ವಿರುದ್ಧ ನಡೆಸಿದ ಮುಷ್ಕರ ಸಂದರ್ಭದಲ್ಲಿ ವಜಾ, ಅಮಾನತು, ಅವೈಜ್ಞಾನಿಕ ವರ್ಗಾವಣೆ ಹಾಗೂ ಪೊಲೀಸ್ ಮೊಕದ್ದಮೆಗಳಿಂದ ನೊಂದಿರುವ ನೌಕರರು ಮತ್ತು ಕುಟುಂಬಗಳಿಗೆ ಪರಿಹಾರ ಕೊಡಿಸಲು ನಿಗಮಗಳೊಂದಿಗೆ ಯಾವುದೇ ಒಪ್ಪಂದ ಬೇಕಿಲ್ಲ ಎಂದು ಜಂಟಿ ಕ್ರಿಯಾ ಸಮಿತಿ ಸಭೆಯಲ್ಲಿ ತಮ್ಮ ಮೊಂಡುವಾದ ಪ್ರದರ್ಶಿಸುತ್ತಿರುವುದು ಅವಿವೇಕದ ಪರಮಾವಧಿ ಎಂದು ಕಿಡಿಕಾರಿವೆ.

ಹಾಗಾಗಿ ರಾಜ್ಯದ ನಾಲ್ಕು ನಿಗಮದ ಸಮಸ್ತ ಸಾರಿಗೆ ನೌಕರರು ಮುಂದಿನ ದಿನಗಳಲ್ಲಿ ಜಂಟಿ ಕ್ರಿಯಾ ಸಮಿತಿ ಕೈಗೊಳ್ಳುವ ಮುಷ್ಕರ, ಚಳವಳಿ ಸೇರಿದಂತೆ ಇತರೆ ಹೋರಾಟಗಳಿಗೆ ಕರೆಕೊಟ್ಟ ಸಂದರ್ಭದಲ್ಲಿ ಪೂರ್ಣ ಪ್ರಮಾಣ ಬೆಂಬಲ ನೀಡಬೇಕೆಂದು ಪತ್ರಿಕೆ ಹೇಳಿಕೆ ಬಿಡುಗಡೆಗೊಳಿಸಿ ಮನವಿ ಮಾಡಿವೆ.

ಕುಸ್ತಿ ವೀಕ್ಷಿಸಿ ರಿಲ್ಯಾಕ್ಸ್ ಆದ ಸಿದ್ದರಾಮಯ್ಯ



ಮೈಸೂರು, ಆ.7(ಜಿಎ)– ರಾಜಕೀಯ ಜಂಜಾಟಗಳ ನಡುವೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕುಸ್ತಿ ಪಂದ್ಯಾವಳಿ ವೀಕ್ಷಿಸುವ ಮೂಲಕ ರಿಲ್ಯಾಕ್ಸ್ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ಕಾಳಸಿದ್ದನಹುಂಡಿ ಗ್ರಾಮದ ಅಖಿಲ ಕರ್ನಾಟಕ ಬಡವರ ಬಂಧು ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ವತಿಯಿಂದ ಮೈಸೂರಿನ ಡಿ. ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 30 ಜೊತೆ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಇಂದು ಬೆಳಗ್ಗಿನಿಂದ ಮೈಸೂರು ಮತ್ತು ಸುತ್ತಮುತ್ತಲಿನ ತಾಲೂಕಿನಲ್ಲಿ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಿದ್ದು, ರಾತ್ರಿ ವೇಳೆ ಕುಸ್ತಿ ಪಂದ್ಯಾವಳಿಯನ್ನು ವೀಕ್ಷಿಸಿದ್ದಾರೆ. ಪೈಲ್ವಾನ್ ನಾಗೇಶ್ ಹಂಪಾಪುರ ಮತ್ತು ಪೈಲ್ವಾನ್ ಹನುಮಂತ ಬೆಳಗಾಂ ಅವರ ನಡುವೆ ನಡೆದ ರೋಚಕ ಪಂದ್ಯವನ್ನು ಕುತೂಹಲದಿಂದ ನೋಡಿ ಆನಂದಿಸಿದರು. ನಂತರ ಈ ಪಂದ್ಯದಲ್ಲಿ ವಿಜೇತರಾದ ಪೈಲ್ವಾನ್ ನಾಗೇಶ್ ಹಂಪಾಪುರ ಅವರಿಗೆ ಬೆಳ್ಳಿ ಗದೆ ನೀಡಿ ಅಭಿನಂದಿಸಿದರು.

ಇದೇ ವೇಳೆ ಕೇಕ್ ಕತ್ತರಿಸುವ ಮೂಲಕ ಸಿದ್ದು ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಉಪ ಮೇಯರ್ ಅನ್ವರ್ ಬೇಗ್, ಕಾಂಗ್ರೆಸ್ ಮುಖಂಡ ಹರೀಶ್ ಗೌಡ ಮತ್ತು ಕಾಳಸಿದ್ದನಹುಂಡಿ ಗ್ರಾಮದ ಮುಖಂಡರು ಸೇರಿದಂತೆ ಮತ್ತಿತರರು ಹಾಜರಿದ್ದರು.

ಪಿಎಂ ಸ್ವನಿಧಿ ಯೋಜನೆಯಡಿ ಮೈಸೂರಿನ ವಿಶ್ವನಾಥ್ ಖಾತೆಗೆ 50 ಸಾವಿರ ರೂ. ವರ್ಗಾವಣೆ

3ನೇ ಹಂತದ ಸಾಲ ಪಡೆದ ರಾಜ್ಯದ ಮೊದಲಿಗರು



ಮೈಸೂರು, ಆ.7(ಎಸ್‌ಪಿಎನ್)– ಪ್ರಧಾನ ಮಂತ್ರಿ ಆತ್ಮ ನಿರ್ಭರ ಭಾರತ ಯೋಜನೆಯಡಿ ಪಿಎಂ–ಸ್ವನಿಧಿಯಡಿ ಮೈಸೂರಿನ ರಾಮಾನುಜ ರಸ್ತೆ ನಿವಾಸಿ ವಿಶ್ವನಾಥ್ ಅವರ ಬ್ಯಾಂಕ್ ಖಾತೆಗೆ ಮೂರನೇ ಹಂತದ ಸಾಲ ಮೊತ್ತ 50 ಸಾವಿರ ರೂ.ಗಳನ್ನು ಕೆ.ಎಂ.ನಿಶಾಂತ್ ಅವರ ಜನ ಸೇವಾ ಕೇಂದ್ರದ ಮೂಲಕ ವರ್ಗಾವಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಕೆ.ಎಂ.ನಿಶಾಂತ್, ಕೊರೊನಾ ಸಂದರ್ಭದಲ್ಲಿ ದೇಶದ ಆರ್ಥಿಕತೆಯ ಪುನಶ್ಚೇತನಕ್ಕಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಯೋಜನೆಯನ್ನು ಜಾರಿಗೊಳಿಸಿದ್ದರು. ಇದರ ಭಾಗವಾಗಿ ಲಾಕ್‌ಡೌನ್‌ನಿಂದ ಕಂಗೆಟ್ಟಿದ್ದ ರಸ್ತೆ ಬದಿ ವ್ಯಾಪಾರಿಗಳ ನೆರವಿಗಾಗಿ ಆತ್ಮನಿರ್ಭರ ನಿಧಿಯ ಮೂಲಕ ಹತ್ತು ಸಾವಿರ ಕಿರು ಸಾಲ ಯೋಜನೆ ಪ್ರಾರಂಭಿಸಿದ್ದರು. ಇದರಲ್ಲಿ ಈವರೆಗೆ 3 ಹಂತದಲ್ಲಿ ಸಾಲ ವಿತರಣೆ ನಡೆಯುತ್ತಿದ್ದು, ಮೊದಲ ಹಂತದಲ್ಲಿ ಪಡೆದಿದ್ದ ಹತ್ತು ಸಾವಿರ ರೂ. ಸಾಲವನ್ನು ಮರು ಪಾವತಿಸಿದವರಿಗೆ ಎರಡನೇ ಹಂತದಲ್ಲಿ 20 ಸಾವಿರ ರೂ. ನೀಡಲಾಗಿತ್ತು ಅದನ್ನು ಮರುಪಾವತಿಸಿದ ಫಲಾನುಭವಿಗೆ ಮೂರನೇ ಹಂತದಲ್ಲಿ 50 ಸಾವಿರ ರೂ. ಸಾಲವನ್ನು ನಮ್ಮ ಜನ ಸೇವಾ ಕೇಂದ್ರದ ಸದಸ್ಯರಿಗೆ ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಇದರ ಭಾಗವಾಗಿ ಮೂರನೇ ಹಂತದ ಸಾಲ ಪಡೆಯಲು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲಾಗಿತ್ತು. ಹೀಗೆ ಅರ್ಜಿ ಸಲ್ಲಿಸಿದ್ದ 74 ವರ್ಷದ ವಿಶ್ವನಾಥ್ ಅವರಿಗೆ 50 ಸಾವಿರ ರೂ. ಸಾಲದ ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ ಇವರು ಈ ಯೋಜನೆಯ ಉಪಯೋಗ ಪಡೆದ ರಾಜ್ಯಕ್ಕೆ ಮೊದಲ ವ್ಯಕ್ತಿ ಎಂಬುದು ಮೈಸೂರಿಗರಾದ ನಮಗೆ ಹೆಮ್ಮೆಯ ವಿಷಯ. ಹಾಗಾಗಿ ವಿಶ್ವನಾಥ್ ಅವರಿಗೆ ಸಿಹಿ ತಿನಿಸಿ ಪ್ರೋತ್ಸಾಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಅದಲ್ಲದೆ ನಮ್ಮ ಜನ ಸೇವಾ ಕೇಂದ್ರದ ಮೂಲಕ ಈ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯ ವರೆಗೆ ಸುಮಾರು 1,100 ರಸ್ತೆ ಬದಿ ವ್ಯಾಪಾರಿಗಳನ್ನು ಪಿ.ಎಂ.ಸ್ವನಿಧಿ ಯೋಜನೆಯ ಫಲಾನುಭವಿಗಳನ್ನಾಗಿ ಮಾಡಲಾಗಿದೆ ಎಂದು ವಿವರಿಸಿದರು.

ನಂತರ ಮಾತನಾಡಿದ ಫಲಾನುಭವಿ ವಿಶ್ವನಾಥ್, ನನಗೆ 74 ವರ್ಷ ವಯಸ್ಸು ದುಡಿಯುವ ಛಲ ಕಮ್ಮಿಯಾಗಿಲ್ಲ.ಆದರೆ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಲು ಬ್ಯಾಂಕ್‌ಗಳಲ್ಲಿ ಸಾಲ ಕೇಳಲು ಹೋದರೆ 60 ವರ್ಷ ಮೀರಿದವರಿಗೆ ಸಾಲ ನೀಡಲು ನಿರಾಕರಿಸುತ್ತಿದ್ದರು.

ಈ ಬಗ್ಗೆ ಕೆ.ಎಂ. ನಿಶಾಂತ್ ರವರ ಜನ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ವಿಷಯ ತಿಳಿಸಿದಾಗ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದರು. ನಂತರ ಯಾವುದೇ ಆಧಾರವಿಲ್ಲದೆ ನನಗೆ ಸಾಲ ದೊರಕಿತು. ಹಾಗಾಗಿ ಬಡವರ ಪರವಾದ ಯೋಜನೆ ಆರಂಭಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಕಚೇರಿಗೆ ಧನ್ಯವಾದ ಅರ್ಪಿಸಿ ಪತ್ರ ಬರೆದಿದ್ದೇನೆ ಎಂದರು. ಈ ವೇಳೆ ಮಧುಸೂದನ್, ಸತೀಶ್, ಜಗದೀಶ್, ನಾಗೇಂದ್ರ ವಿಜಯ ಕುಮಾರ್, ಪ್ರದೀಪ್, ರಾಮಚಂದ್ರ ಉಪಸ್ಥಿತರಿದ್ದರು.